ಸಂಪುಟ 23 ಸಂಚಿಕೆ 1-3
ಜನವರಿ 21, 2001 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ

ಕಾರ್ಮಿಕ ವರ್ಗ ಸಮರ ಸನ್ನದ್ಧ


ಸಿಐಟಿಯು ಸಮ್ಮೇಳನ



ದೆಹಲಿ: ಸಣ್ಣ ಕೈಗಾರಿಕೆಗಳನ್ನು ಅಲ್ಲೋಲ ಕಲ್ಲೋಲವಾಗಿಸಿದ ತೀರ್ಪು



ಸಿನಿಮಾ: ಬಯಲಾದ ಮಾಫಿಯಾ ಸಂಬಂಧ



ಪ.ಬಂಗಾಳ ಹಿಂಸೆ: ಚುನಾವಣೆ ಮೇಲೆ ಕಣ್ಣು


ಕೊಲ್ಹಾರ: ಕೋಮುವಾದಿಗಳ ಕಿಡಿಗೇಡಿತನ

"ಸಮಾಜದ ಪ್ರತಿಷ್ಠಿತ-ಸ್ಥಾಪಿತ ಹಿತಾಸಕ್ತಿಗಳ ಕೈವಾಡದಿಂದ ವಿ.ವಿ.ಗಳು ನಾಶವಾಗುತ್ತಿವೆ" - ಡಾ|| ಬಿಸಲಯ್ಯ

SFI ವಿ.ವಿ. ಸಮಾವೇಶ

1991 ರಿಂದ ಜಾರಿಯಲ್ಲಿರುವ ಹೊಸ ಆರ್ಥಿಕ ನೀತಿಯ ಪ್ರಾಯೋಜಿತ ಶಿಕ್ಷಣ ನೀತಿಯಿಂದ ಅತಿ ಹೆಚ್ಚು ದಾಳಿಗೆ ಒಳಗಾಗಿರುವ ಉನ್ನತ ಶಿಕ್ಷಣದ ಬಗೆಗೆ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳು ಉಂಟು ಮಾಡಿರುವ ಪರಿಣಾಮದ ಬಗೆಗೆ, ವಿ.ವಿ. ಕೇಂದ್ರಗಳನ್ನು ಮೌಢ್ಯ ಮತಾಂಧತೆಯ ಕೇಂದ್ರವಾಗಿಸುವ ಬಿ.ಜೆ.ಪಿ. ಕುತಂತ್ರದ ವಿರುದ್ಧ ವಿ.ವಿ ಉಳಿಸಿ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಒತ್ತಾಯಿಸಿ "ಭಾರತ ವಿದ್ಯಾರ್ಥಿ ಫೆಡರೇಷನ್ (SFI) ರಾಜ್ಯ ಸಮಿತಿ ವಿ.ವಿ. ವಿದ್ಯಾರ್ಥಿಗಳ ರಾಜ್ಯ ಸಮಾವೇಶವನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡಿತ್ತು.

ಸೆಂಟ್ರಲ್ ಕಾಲೇಜ್ ಕ್ಯಾಂಪಸ್ಸಿನ ಸೆನೆಟ್ ಹಾಲ್‌ನಲ್ಲಿ ನಡೆದ ಮಹತ್ವದ ಈ ಸಮಾವೇಶವನ್ನು ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ|| ಎಸ್. ಬಿಸಲಯ್ಯ ಉದ್ಘಾಟಿಸಿ ಮಾತನಾಡಿದರು "ಪ್ರಖ್ಯಾತ ತತ್ವಜ್ಞಾನಿ ಡಾ|| ಎಸ್. ರಾಧಾಕೃಷ್ಣರವರು" ಭಾರತ ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ ಮುನ್ನಡೆಯಬೇಕಾದರೆ ವಿ.ವಿ.ಗಳಲ್ಲಿ ನಮ್ಮ ನಾಗರೀಕತೆಯನ್ನು ಮುನ್ನಡೆಸುವ, ಶ್ರೀಮಂತಗೊಳಿಸುವ ದೃಷ್ಟಾರರು ವಿ.ವಿ.ಗಳಲ್ಲಿರಬೇಕು. ವಿ.ವಿ.ಗಳು ನಮ್ಮ ದೇಶದ ಅಂತಃಶಕ್ತಿಯನ್ನು ಹೆಚ್ಚಿಸುವ ಧಾಮಗಳಾಗಿರಬೇಕು" ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇಂದು ಉನ್ನತ ಶಿಕ್ಷಣ ಅತ್ಯಂತ ಉಪೇಕ್ಷೆಗೆ ಒಳಗಾಗಿ ಅತ್ಯಂತ ಇಕ್ಕಟ್ಟಿನ ಕವಲುದಾರಿಯಲ್ಲಿದೆ ಎಂದರು.





ಸ್ವಾತಂತ್ರ್ಯಾನಂತರ, ಪ್ರತಿಷ್ಠಿತ ಕೆಲವೇ ಜನರಿಗೆ ಸೀಮಿತವಾಗಿದ್ದ ಉನ್ನತ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲಾಯಿತು. ಆದರೆ ಇತ್ತೀಚೆಗೆ ಅತ್ಯಂತ ಅನಾಹುತಕಾರಿಯಾಗಿ ಮಾರುಕಟ್ಟೆಯ ಅಗತ್ಯತೆಗಳಿಗೆ ಅನುಗುಣವಾಗಿ ದೊಡ್ಡ ವೇತನ ಮತ್ತು ಭಾರೀ ಲಾಭ ಸಿಗುವ ಭ್ರಮೆಯ ಶಿಕ್ಷಣವನ್ನು ಒದಗಿಸಲಾಗುತ್ತಿದೆ. ಈ ಪರಿಣಾಮವಾಗಿ ನಾಗರೀಕತೆ ಮೂಡಿಸುವ ಮಾನವ ಶಾಸ್ತ್ರಗಳಾದ ತತ್ವಜ್ಞಾನ, ಸಾಹಿತ್ಯ, ಸಮಾಜ ವಿಜ್ಞಾನ, ಮುಂತಾದ ವಿಷಯಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಎಂದು ವಿಷಾದಿಸಿದ ಅವರು, ಪ್ರಾಥಮಿಕ ಶಿಕ್ಷಣದ ನೆಪದಲ್ಲಿ ಉನ್ನತ ಶಿಕ್ಷಣಕ್ಕೆ ಹಣ ಕಡಿತ ಹಾಗೂ ಖಾಸಗೀಕರಣದ ಮುಖಾಂತರ ಜವಾಬ್ದಾರಿ ಕಳೆದುಕೊಳ್ಳುತ್ತಿದೆ. ಮೆರಿಟ್ ಆಧಾರದ ಅರ್ಹತೆಯ ಬದಲಿಗೆ ಹಣ ಸಾಮರ್ಥ್ಯದ ಆಧಾರದಲ್ಲಿ ಪ್ರವೇಶ ಕೊಡಲಾಗುತ್ತಿದೆ. ಈ ರೀತಿಯ ನಡವಳಿಕೆಗಳಿಗೆ ಕಟ್ಟುಬಿದ್ದಿರುವ ಸರ್ಕಾರಗಳು, ಸಮಾಜದಲ್ಲಿನ ಪ್ರತಿಷ್ಠಿತ, ಸ್ಥಾಪಿತ ಹಿತಾಸಕ್ತಿಗಳ ಕೈಗೊಂಬೆಯಾಗಿರುವುದರಿಂದ ವಿ.ವಿ. ನಾಶವಾಗುತ್ತಿವೆ ಎಂದು ಅಭಿಪ್ರಾಯ ಪಟ್ಟರು.

ಅಂಧಕಾರದತ್ತ ಶಿಕ್ಷಣ

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ವಿ.ವಿ.ಯ ಮಾಜಿ ಕುಲಪತಿ ಹಾಗೂ ಖ್ಯಾತ ಶಿಕ್ಷಣಪರರಾದ ಡಾ|| ಹೆಚ್. ನರಸಿಂಹಯ್ಯನವರು ಮಾತನಾಡಿ "ಯಾವುದೇ ಅಭಿವೃದ್ಧಿಯೋಜನೆಯನ್ನು ರೂಪಿಸಿ, ಜಾರಿಗೊಳಿಸುವಾಗ, ಅದು ಸಮಾಜದ ಕೊನೆಯ ಪೀಳಿಗೆಯವರೆಗೂ ತಲುಪುತ್ತದೆ ಎಂಬ ಕಾಳಜಿವಹಿಸಬೇಕಾಗುತ್ತದೆ. ಆದರೆ ಇಂದೂ ಯುಜಿಸಿ ಒಳಗೊಂಡು ವಿ.ವಿಗಳಲ್ಲಿ ಜ್ಯೋತಿಷ್ಯ ಶಾಸ್ತ್ರ, ಗಣಿಶಾಸ್ತ್ರ ಮುಂತಾದುವುಗಳನ್ನು ಅಧ್ಯಯನ ವಿಷಯವಾಗಿಸುವುದರಿಂದ ನಮ್ಮ ಮುಂದಿನ ಪೀಳಿಗೆಯನ್ನು ಮೌಢ್ಯತೆ, ಅಂಧಕಾರದತ್ತ ತಳ್ಳಲಾಗುತ್ತದೆ. ಎಂದು ವಿಷಾದಿಸಿದರು. ಹಾಗೂ ಮುಂದುವರೆದ ಅವರು ವಿದ್ಯಾರ್ಥಿಗಳು ಮತ್ತೊಮ್ಮೆ ಸ್ವಾತಂತ್ರ್ಯದಂತ ಹೋರಾಟಕ್ಕೆ ಸಜ್ಜಾಗಬೇಕು. ಇಂತಹ ದೇಶವನ್ನು ಮೌಢ್ಯದತ್ತ ಕೊಂಡೊಯ್ಯುವ ನೀತಿಗಳ ವಿರುದ್ಧ ವಿದ್ಯಾರ್ಥಿಗಳ ಹೋರಾಟ ಅಗತ್ಯವಾಗಿದೆ ಎಂದರು.

ಉನ್ನತ ಶಿಕ್ಷಣ ಮತ್ತು ಹಣಕಡಿತ

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ವಿ.ವಿ.ಯ ಕುಲಪತಿ ಡಾ|| ಕೆ. ಸಿದ್ದಪ್ಪನವರು ಮಾತನಾಡಿ "ಉನ್ನತ ಶಿಕ್ಷಣ ಪಡೆದ ನಿರುದ್ಯೋಗಿಗಳ ಬಗೆಗೆ ಚಿಂತನೆ ಅಗತ್ಯವಾಗಿದೆ. ಸರ್ಕಾರಗಳು ಉನ್ನತ ಶಿಕ್ಷಣಕ್ಕೆ ತೀವ್ರವಾಗಿ ಹಣ ಕಡಿತ ಮಾಡುತ್ತಿರುವುದರಿಂದ ಹೊಸ ರೀತಿಯ ಕಾರ್ಯದ ಬದಲು ಈಗಿರುವ ಶಿಕ್ಷಣದ ಸ್ಥಿತಿಯನ್ನೇ ನಿಭಾಯಿಸಲು ಕಷ್ಟವಾಗಿದೆ ಎಂದರು.

ಬಂಡವಾಳದಾರರ ಹಿಡಿತದಲ್ಲಿ ಶಿಕ್ಷಣ

ಸಮಾವೇಶದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನುವಹಿಸಿ, ನಡೆಸಿಕೊಟ್ಟ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಸಮಾವೇಶದ ಸಿದ್ದತಾ ಸಮಿತಿಯ ಗೌರವ ಅಧ್ಯಕ್ಷರೂ ಆದ ಬರಗೂರು ರಾಮಚಂದ್ರಪ್ಪನವರು ಮಾತನಾಡಿ "ಇಂದು ಮಾಹಿತಿ ತಂತ್ರಜ್ಞಾನ ಮೂಲದ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಮಾರುಕಟ್ಟೆಯ ಅಗತ್ಯತೆಗೆ ಅನುಗುಣವಾಗಿ ನೀಡಲಾಗುತ್ತಿರುವ ಶಿಕ್ಷಣದಿಂದ ಇದುವರೆಗೂ ಮೇಲ್ಪಟ್ಟದಲ್ಲಾದರು ಪ್ರಜಾಸತ್ತಾತ್ಮಕವಾಗಿದ್ದ ಪ್ರಾಥಮಿಕ ಶಿಕ್ಷಣದಿಂದ, ಉನ್ನತ ಶಿಕ್ಷಣದವರೆಗೂ ಸಾಕಷ್ಟು ಸಾರ್ವತ್ರಿಕವಾಗಿ ಸಿಗುತ್ತಿದ್ದ ಅವಕಾಶಕ್ಕೆ ಭಾರಿ ದಕ್ಕೆಯಾಗಿದೆ.



ಪ್ರಸ್ತುತ ಶಿಕ್ಷಣವು ಭಾಷೆಯು, ಸಂಸತಿಯು ನಿಯಂತ್ರಣದಲ್ಲಿದ್ದು, ಮಾರುಕಟ್ಟೆ ಮಂಚೂಣಿಯಲ್ಲಿರುವ ಉದ್ಯಮಪತಿಗಳ ಹಿಡಿತದಲ್ಲಿದೆ. ಜಾಗತೀಕರಣದ ಭಾಗವಾಗಿರುವ ಜಾಹೀರಾತೀಕರಣದ ಪ್ರಭಾವದಲ್ಲಿದೆ. ಜಾಹಿರಾತಿಗೆ ಸುಳ್ಳನ್ನು ಸುಂದರವಾಗಿ ಹೇಳುವ ಕಲೆಯೇ ಬಂಡವಾಳ. ಮಾಹಿತಿ ತಂತ್ರಜ್ಞಾನವನ್ನು ನಿರಾಕರಿಸಲಾಗುವುದಿಲ್ಲ. ಆದರೆ ಅದರ ನಿಯಂತ್ರಣ ಉದ್ಯಮಿಗಳ ಹಿಡಿತದಲ್ಲಿರುವುದನ್ನು ವಿರೋಧಿಸಬೇಕಾಗಿದೆ. ಈ ಸಂದರ್ಭದಲ್ಲಿ ಅರಿವೇ ಗುರು ಎನ್ನುವ ವಚನಕಾರರ ಅಭಿಮತವನ್ನು 'ಅರಿವೇ ಮೂಲಭೂತ ಹಕ್ಕು' ಎಂದು ಧನಿ ಎತ್ತಬೇಕಾಗಿದೆ ಎಂದು ತಿಳಿಸಿದರು.

ದಿನಾಂಕ 10-12-2000 ಸಂಜೆ 5 ಗಂಟೆಗೆ ಪ್ರಾರಂಭವಾದ ಸಮಾರೋಪ ಸಮಾರಂಭದಲ್ಲಿ, ಎಸ್.ಎಫ್.ಐನ ಅಖಿಲ ಭಾರತ ಅಧ್ಯಕ್ಷರಾದ ಕಾಂ|| ಪಿ. ಕೃಷ್ಣಪ್ರಸಾದ್ ಸಮಾರೋಪ ಭಾಷಣ ಮಾಡಿದರು.

ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸುವ ಮೂಲಕ ಪ್ರಜಾಪ್ರಭುತ್ವದ ರಕ್ಷಣ ಕೇಂದ್ರಗಳಾಗಬೇಕಿದ್ದ ವಿ.ವಿಗಳು ಇಂದು ಪ್ರಜಾಪ್ರಭುತ್ವ ವಿರೋಧಿ ಕೇಂದ್ರಗಳಾಗುತ್ತಿದೆ ಎಂದು ವಿಷಾಧಿಸಿದ ಅವರು, ಕೇಂದ್ರ ಸರ್ಕಾರವು ಜ್ಯೋತಿಷ್ಯದಂತಹ, ಅವೈಜ್ಞಾನಿಕ, ಅವೈಚಾರಿಕ ಮೌಢ್ಯಗಳನ್ನು ವಿಷಯಗಳನ್ನಾಗಿ ಮಾಡಲು ಹೊರಟಿರುವುದು ತನ್ನ ಕೋಮುವಾದಿ ದೃಷ್ಟಿಕೋನವನ್ನು ವಿದ್ಯಾರ್ಥಿಗಳಲ್ಲಿ ತುಂಬುವ ಯತ್ನವಾಗಿದೆ. ಇದನ್ನು ವಿರೋಧಿಸಿ ನಿಲ್ಲಲು ಎಸ್.ಎಫ್.ಐ. ನಂತಹ ವಿದ್ಯಾರ್ಥಿ ಸಂಘಟನೆಗೆ ಮಾತ್ರ ಸಾಧ್ಯ. ಆದ್ದರಿಂದ ಎಸ್.ಎಫ್.ಐ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ಎಸ್.ಎಫ್.ಐ. ಸಂಗಾತಿಗಳಿಗೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಕಾಂ|| ಜಿ.ಸಿ. ಬಯ್ಯಾರೆಡ್ಡಿಯವರು ಮಾತನಾಡಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಎಫ್.ಐ. ರಾಜ್ಯಾಧ್ಯಕ್ಷರಾದ ಕಾಂ|| ಕೆ.ಎನ್. ಉಮೇಶ್‌ರವರು ವಹಿಸಿದ್ದರು.

ವರದಿ-ಟಿ.ಕೃ.ಮಹೇಂದ್ರನಂದನವನ

ವಿ.ವಿ. ವಿದ್ಯಾರ್ಥಿಗಳ ಉಪಸಮಿತಿ

ವಿಶ್ವ ವಿದ್ಯಾಲಯ ವಿದ್ಯಾರ್ಥಿಗಳ ರಾಜ್ಯ ಸಮಾವೇಶವು ರಾಜ್ಯ ಸಮಿತಿಗೆ ಸಹಾಯವಾಗುವಂತೆ 17 ಜನರ ಉಪಸಮಿತಿಯನ್ನು ರಚಿಸಿದೆ. ಪದಾಧಿಕಾರಿಗಳು ಕೆಳಗಿನಂತೆ ಇರುತ್ತಾರೆ.

ಟಿ.ಕೃ. ಮಹೇಂದ್ರನಂದನವನ	ಸಂಚಾಲಕರು
ಅಶೋಕ್ ಕುಮಾರ್	ಸಹ ಸಂಚಾಲಕರು
ಹೆಚ್.ಎಸ್. ಪವಿತ್ರ	ಸಹ ಸಂಚಾಲಕರು
ಸದಾಶಿವಗೌಡ	ಸಹ ಸಂಚಾಲಕರು
ಯಮುನಪ್ಪ	ಸಹ ಸಂಚಾಲಕರು

ಎನ್ರಾನ್ ಹಾವಳಿ: ಪಾಠ ಕಲಿಯಲು ಸಿದ್ಧರೇ?

ಮಹಾರಾಷ್ಟ್ರ ರಾಜ್ಯ ಸರ್ಕಾರವು ಎನ್ರಾನ್ ವಿದ್ಯುತ್ ಯೋಜನೆಗೆ ನೀಡಿದ್ದ ತನ್ನ ಹಿಂದಿನ ಒಪ್ಪಿಗೆಯನ್ನು ಪುನರ್ ಪರಿಶೀಲಿಸಲು ಮತ್ತು ಎನ್ರಾನ್ ಯೋಜನೆಯು ಮಹಾರಾಷ್ಟ್ರ ವಿದ್ಯುತ್ ಮಂಡಳಿಗೆ ಮಾರಾಟಮಾಡುತ್ತಿದ್ದ 'ಬೆಲೆ' ಕುರಿತು ಪುನರ್ ಮಾತುಕತೆ ನಡೆಸುವುದಾಗಿ ಪ್ರಕಟಿಸಿದೆ.

ಮಹಾರಾಷ್ಟ್ರ ವಿದ್ಯುತ್ ಮಂಡಳಿಯು ಎನ್ರಾನ್ ಯೋಜನೆಯು ಜಾರಿಯಾದಾಗಿನಿಂದಲೂ ವಿಪರೀತ ನಷ್ಟವನ್ನು ಅನುಭವಿಸುತ್ತಿರುವುದರ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ನಿರ್ಧಾರಕ್ಕೂ ಬಂದಿದೆ. ಎನ್ರಾನ್ ಕಂಪನಿಯು ಈಗ ಮೊದಲನೆಯ ಹಂತದ ವಿದ್ಯುತ್ ಸರಬರಾಜು ಮಾಡುತ್ತಿದ್ದು, ಅದು ರಾಜ್ಯ ವಿದ್ಯುತ್ ಮಂಡಳಿಗೆ ಪ್ರತಿ ಯೂನಿಟ್ಟಿಗೆ ರೂ. 7.80 ಪೈಸೆಯಂತೆ ಮಾರುತ್ತಿದೆ. ಮೊದಲನೆ ಹಂತದ ಒಪ್ಪಂದದ ಪ್ರಕಾರ ವಿದ್ಯುತ್ ಮಂಡಳಿಯೂ ಎನ್ರಾನ್ ಕಂಪನಿಯು ಉತ್ಪಾದಿಸುವ ಎಲ್ಲಾ ವಿದ್ಯುತನ್ನು ಖರೀದಿಸಿದರೂ ಸಹಾ ಪ್ರತಿ ತಿಂಗಳು ರೂ 95 ಕೋಟಿ ರೂಗಳನ್ನು ಫಿಕ್ಸ್ ಡಿಪಾಸಿಟ್ ಆಗಿ ಕಟ್ಟಬೇಕು. ಪ್ರಸಕ್ತ ಹಣಕಾಸು ವರ್ಷವೊಂದರಲ್ಲೇ ವಿದ್ಯುತ್ ಮಂಡಳಿಯು ರೂ. 1800 ಕೋಟಿ ರೂಗಳನ್ನು ಎನ್ರಾನ್‌ಗೆ ನೀಡಿದೆ. ಅಲ್ಲದೆ ಮಹಾರಾಷ್ಟ್ರ ವಿದ್ಯುತ್ ಮಂಡಳಿಯು ಕಳೆದ ಆರು ತಿಂಗಳಿಂದ ಎನ್ರಾನ್‌ಗೆ ಕಟ್ಟಬೇಕಿದೆ ಬಾಕಿ ಹಣವನ್ನು ಉಳಿಸಿಕೊಂಡಿದೆ.

ಎನ್ರಾನ್ ಕಂಪನಿಯೊಂದಿಗೆ ಸದ್ಯ ಈಗ ಜಾರಿಯಲ್ಲಿರುವ ಮೊದಲನೆ ಹಂತದ (ಅವಧಿಯ) ರೂಪರೇಷೆಗಳನ್ನೊಳಗೊಂಡ ಒಪ್ಪಂದವನ್ನು ಆಗ ಅಧಿಕಾರದಲ್ಲಿದ್ದ ಶರದ್ ಪವಾರ್ ನೇತೃತ್ವದ ಕಾಂಗ್ರೆಸ್(ಐ) ಸರ್ಕಾರವು ಮಾಡಿಕೊಂಡಿತ್ತು. ತದನಂತರದಲ್ಲಿ ಅಧಿಕಾರಕ್ಕೆ ಬಂದ ಶಿವಸೇನಾ ಬಿಜೆಪಿ ಸರ್ಕಾರವು ಮೊದಲನೆ ಅವಧಿಯ ಒಪ್ಪಂದದೊಂದಿಗೆ ಎರಡನೆ ಹಂತದ ಒಪ್ಪಂದವನ್ನು ಎನ್ರಾನ್ ಕಂಪನಿಯೊಂದಿಗೆ ಅಂತಿಮಗೊಳಿಸಿತು. ಈ ಯೋಜನೆಯ ಎರಡನೆ ಹಂತವು 2001ನೇ ಇಸ್ವಿ ಕೊನೆಯಲ್ಲಿ ಕಾರ್ಯಾಚರಣೆಗೆ ಬರುತ್ತದೆ. ಅದು ಮಹಾರಾಷ್ಟ್ರ ವಿದ್ಯುತ್ ಮಂಡಳಿಯು ರೂ. 383 ಕೋಟಿ ರೂಗಳನ್ನು ಹೆಚ್ಚಿಸಿ ಠೇವಣಿ ಹಣವಾಗಿ ನೀಡಿದರೆ ಮಾತ್ರ. ಅಂದರೆ ಒಟ್ಟಾರೆ 478 ಕೋಟಿ ರೂಗಳನ್ನು ಠೇವಣಿ ಹಣವಾಗಿಡಬೇಕು.

ಈ ಯೋಜನೆಗೆ ಅನುಮತಿ ನೀಡಿದ ಈ ಎರಡೂ ಸರ್ಕಾರಗಳೂ ಸಂಪೂರ್ಣವಾಗಿ ರಾಜ್ಯದ ಮತ್ತು ಜನರ ಹಿತಾಸಕ್ತಿಯನ್ನು ಅಮೇರಿಕನ್ ನೇತೃತ್ವದ ದೈತ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಾಟಮಾಡಿದೆ. ಸಿಪಿಐ(ಎಂ) ಮತ್ತು ಇತರೆ ಎಡಪಕ್ಷಗಳು ಈ ಯೋಜನೆಗೆ ಈ ಹಿಂದೆಯೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿದ್ದವು. ಸಿ.ಐ.ಟಿ.ಯು ಸರ್ವೋಚ್ಚ ನ್ಯಾಯಾಲಯದವರೆಗೂ ತನ್ನ ಹೋರಾಟವನ್ನು ಮುಂದುವರೆಸಿತ್ತು. ಅಲ್ಲದೆ ವಿದ್ಯುತ್ ಕ್ಷೇತ್ರದ ಹಲವಾರು ಗಣ್ಯಜ್ಞರುಗಳು ಈ ಒಪ್ಪಂದವು ಅಸಮತೋಲನದಿಂದ ಕೂಡಿದ್ದು ಇದರಿಂದ ಎನ್ರಾನ್ ಕಂಪನಿಗೆ ಮಾತ್ರ ಲಾಭವಾಗಿ ವಿದ್ಯುತ್ ಮಂಡಳಿಯು ಸಂಪೂರ್ಣ ದಿವಾಳಿಯಾಗಲಿದೆ ಎಂಬ ಎಚ್ಚರಿಕೆಯನ್ನು ನೀಡಿದ್ದರು. ಅದು ಈಗ ಸತ್ಯವಾಗಿದೆ. ಈ ಯೋಜನೆಯನ್ನು ವಿರೋಧಿಸಿದವರ ಹೇಳಿಕೆಗಳಿಗೆ ಸಮರ್ಥನೆ ಸಿಕ್ಕಿದೆ.

ಈ ಎನ್ರಾನ್‌ನ ದಾಬೂಲ್ ವಿದ್ಯುತ್ ಯೋಜನೆಯು ಸ್ಪಷ್ಟಗೊಳಿಸಿರುವುದೇನೆಂದರೆ ಉದಾರೀಕರಣ ನಂತರ 'ಅಪಾಯಕಾರಿಯಾದ' ವಿದ್ಯುತ್ ಯೋಜನೆಗಳಿಗೆ ಅವಕಾಶ ನೀಡಲಾಗಿದೆ. ಅಂದು ನರಸಿಂಹರಾವ್ ಸರ್ಕಾರ ಆರಂಭಿಸಿದ ಈ ನೀತಿಗಳನ್ನು ಈಗಿನ ಬಿಜೆಪಿ ನೇತೃತ್ವದ ಸರ್ಕಾರವು ಮುಂದುವರೆಸುತ್ತಿದೆ.

1996ರಲ್ಲಿ ಕೇವಲ 13 ದಿನಗಳ ಕಾಲ ಅಧಿಕಾರದಲ್ಲಿದ್ದ ಶ್ರೀ ವಾಜಪೇಯಿ ಸರ್ಕಾರವು, ಪಾರ್ಲಿಮೆಂಟಿನಲ್ಲಿ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದ್ದಾಗಲೇ ಅವಸರದಲ್ಲಿ ತೀರ್ಮಾನಿಸಿದ ಏಕೈಕ ನೀತಿಯೇ 'ಈ ಎನ್ರಾನ್ ಯೋಜನೆ' ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಇದರಿಂದಲೇ ತಿಳಿಯುವುದು 'ಪ್ರಸ್ತುತ ಸರ್ಕಾರದ' ಮೇಲೆ ಎನ್ರಾನ್ ಕಂಪನಿಗಿರುವ ಶಕ್ತಿ ಎಷ್ಟೆಂಬುದು ಅಲ್ಲದೆ ಕೇಂದ್ರ ಸರ್ಕಾರದಿಂದ ಪ್ರತಿ ಗ್ಯಾರೆಂಟಿ ಪಡೆದಿರುವ ಪ್ರಥಮ ಏಕೈಕ ಕಂಪನಿ ಎಂಬ 'ಅಪಕೀರ್ತಿಗೆ' ಎನ್ರಾನ್ ಗುರಿಯಾಗಿದೆ.

ಈಗ ಮಹಾರಾಷ್ಟ್ರದ ವಿಲಾಸಿರಾವ್ ದೇಶಮುಖ್ ಸರ್ಕಾರವು ಈ ಯೋಜನೆಗೆ ಸಂಬಂಧಿಸಿದಂತೆ ಈ ಹಿಂದಿನ ತೀರ್ಮಾನವನ್ನು ಪುನರ್ ಪರಿಶೀಲಿಸಲು ನಿರ್ಧರಿಸಿದೆ. ಆದರೆ ಎಂಟನೆ ಹಂತದ ಯೋಜನೆಗೆ ಸಂಬಂದಿಸಿ ಇದು ಮಾತ್ರವೇ ಸಾಲದು. ಒಟ್ಟಾರೆ ಇಡೀ ಒಪ್ಪಂದವನ್ನೇ ತಿರಸ್ಕರಿಸಬೇಕು. ಅಲ್ಲದೆ ಎನ್ರಾನ್ ಕಂಪನಿಯಿಂದ ರಾಜ್ಯದ ವಿದ್ಯುತ್ ಮಂಡಳಿಯು ಲೂಟಿಯಾಗುವುದನ್ನೂ ತಪ್ಪಿಸಲು ಹೊಸ ಒಪ್ಪಂದವನ್ನೇ ರೂಪಿಸಬೇಕು. ಸಾಧ್ಯವಾದರೆ ವಿಶೇಷ ವಾರ್ಷಿಕ ವಿಧೇಯಕವೊಂದನ್ನು ಅಂಗೀಕರಿಸಬೇಕು ಮತ್ತು ಈ ಯೋಜನೆಯನ್ನು ಒತ್ತಾಯಪೂರ್ವಕವಾಗಿ ಹೇರಿದವರು, ಈ ಎಲ್ಲದಕ್ಕೂ ಜವಾಬ್ದಾರಿಯಾಗಿರುವವರು, ಮತ್ತು ಈ ಯೋಜನೆಯ ಒಪ್ಪಂದದ ಪ್ರತಿಯೊಂದು ಅಂಶಗಳನ್ನು ಹೊರಗೆಳೆಯಲು ವಿಚಾರಣಾ ಸಮಿತಿಯನ್ನು ನೇಮಿಸಿ ಎಲ್ಲಾ ತಪ್ಪಿತಸ್ಥರನ್ನು ಶಿಕ್ಷಿಸಬೇಕು. ಇದರಿಂದ ಎನ್ರಾನ್ ಪಾಠಕಲಿಯುವುದು ಮಾತ್ರವಲ್ಲ. ಯಾವುದೇ ಬಹುರಾಷ್ಟ್ರೀಯ ಕಂಪನಿಗಳು ದೈರ್ಯದಿಂದ, ರುಷುವತ್ತುಗಳ ಮೂಲಕ, ಬೇಡವಾದ ನಿಯಮಾವಳಿಗಳನ್ನು ಭಾರತದ ಮೇಲೆ ಹೇರಲು ಸಾಧ್ಯವಾಗುವುದಿಲ್ಲ.

ಕರ್ನಾಟಕ ಈ ವಾರ । ಒಂದು ನೋಟ

ಎಸ್.ವೈ.ಗುರುಶಾಂತ್

ಗ್ರಾಮೀಣ ಅಭ್ಯರ್ಥಿಗಳಿಗೆ ಸ್ಥಾನಮೀಸಲು

ಕನ್ನಡಿಯೊಳಗಿನ ಬುತ್ತಿ ಆಗೊಂದು ಗ್ರಾಮೀಣ ಅಭ್ಯರ್ಥಿಗಳಿಗೆ ಉದ್ಯೋಗ ನೀಡಿಕೆಯಲ್ಲಿ ಹಿಂದಿದ್ದ ಕೃಪಾಂಕದ ವ್ಯವಸ್ಥೆಯನ್ನು ಸುಪ್ರೀಂಕೋರ್ಟ್ ರದ್ದುಪಡಿಸಿತ್ತು. ಆದಾದಬಳಿಕವೂ ನ್ಯಾಯಾಲಯದ ತೀರ್ಪನ್ನು ಗಮನದಲ್ಲಿರಿಸಿ, ಗ್ರಾಮಾಂತರ ಅಭ್ಯರ್ಥಿಗಳಿಗೆ ಹೊಸದಾದ ವ್ಯವಸ್ಥೆಯನ್ನು ರೂಪಿಸಲು ರಾಜ್ಯಾದ್ಯಂತ ವಿದ್ಯಾರ್ಥಿಯುವಜನರ ಚಳುವಳಿಯು ನಡೆದಿತ್ತು. ರಾಜ್ಯಪಾಲರಾದ ರಮಾದೇವಿಯವರು ಹಾಗೂ ಮುಖ್ಯಮಂತ್ರಿ ಕೃಷ್ಣರಿಗೆ ಮನವಿ ಸಲ್ಲಿಸಿ ಹೊಸ ಮಾರ್ಗೋಪಾಯವನ್ನು ಚರ್ಚಿಸಲಾಗಿತ್ತು. ಸರ್ಕಾರವೂ ಸಹ ನ್ಯಾಯಮೂರ್ತಿ ರಾಮಕೃಷ್ಣರ ಆಯೋಗವನ್ನು ರಚಿಸಿ, ಅಧ್ಯಯನ ಕೈಗೊಂಡಿತ್ತು. ಆರಂಭದಲ್ಲಿ ಶೇ.5ರಷ್ಟು ಹುದ್ದೆಗಳನ್ನು ಗ್ರಾಮಾಂತರ ಅಭ್ಯರ್ಥಿಗಳಿಗಾಗಿ ಮೀಸಲಿಡುವ ಮಾತನ್ನು ಆಯೋಗ ಹಾಗೂ ಮುಖ್ಯಮಂತ್ರಿಗಳು ಆಡಿದ್ದರು.

ಶೇ.5ರಷ್ಟು ಮೀಸಲಾತಿ ಎಂಬುದು ಗ್ರಾಮಾಂತರ ಜನತೆಯನ್ನು ಗಮನದಲ್ಲಿರಿಸಿದರೆ ಏನಕ್ಕೂ ಸಾಲದು. ಅದರ ಪ್ರಮಾಣ ಹೆಚ್ಚಿಸಲೇಬೇಕೆಂದು ಮುಖ್ಯಮಂತ್ರಿಗಳಾಗಿ ಮನವರಿಕೆ ಮಾಡಲಾಯಿತು. ಹಾಗೆ ನೋಡಿದರೆ ಹಿಂದಿನ ಕೃಪಾಂಕದ ವ್ಯವಸ್ಥೆ ನೀಜಕ್ಕೂ ಗ್ರಾಮೀಣ ಅಭ್ಯರ್ಥಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಿದೆ. ಆದರೆ ಕೋರ್ಟ್‌ನ ತೀರ್ಪಿನ ಹಿನ್ನಲೆಯಲ್ಲಿ ಹುದ್ದೆಗಳ ನೇಮಕಾತಿಯಲ್ಲಿ ಸ್ಥಾನ ಮೀಸಲಾತಿಯು ತಾತ್ಕಾಲಿಕವಾದ, ಪ್ರಾಯೋಗಿಕ ಅಗತ್ಯವೆಂದು ಅದರ ಪ್ರಮಾಣವನ್ನು ಹೊರಿಸಲೇಬೇಕೆಂದು ವಾದಿಸಲಾಗಿತ್ತು.

ಈಗ ಸರ್ಕಾರ ಕೊನೆಗೆ ಶೇ. 25 ರಷ್ಟು ಸ್ಥಾನಗಳನ್ನು ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಿಡಲು ಪ್ರಕಟಿಸಿದೆ. ರಾಜ್ಯಪಾಲರ ಒಪ್ಪಿಗೆಯೂ ದೊರೆತಿದೆ. ಇದು ನಿಜಕ್ಕೂ ಹೋರಾಟಕ್ಕೆ ಸಂದ ಯಶಸ್ಸು. ರಾಜ್ಯ ಸರ್ಕಾರ ತನ್ನ ನಿರ್ಧಾರವನ್ನು ಜಾರಿಗೊಳಿಸಲು ಪ್ರಾಮಾಣಿಕ ಯತ್ನ ಮಾಡಬೇಕಿದೆ. ಇದಕ್ಕೆ ಹಲವು ತೊಡಕುಗಳಿವೆಯೆಂಬ ಕಾರಣ ಕೇಳುತ್ತಿದೆ. ಅದರಿಂದ ಇವೆಲ್ಲವನ್ನೂ ಸರ್ಕಾರ ನಿವಾರಣೆ ಮಾಡಬೇಕು. ಅಂದಹಾಗೆ ಹುದ್ದೆಗಳಲ್ಲಿ ಮೀಸಲಾತಿಯನ್ನೇನೋ ಪ್ರಕಟಿಸಲಾಗಿದೆ. ಆದರೆ ಖಾಲಿ ಇರುವ ಹುದ್ದೆಗಳಿಗಾಗಿ ನೇಮಕಾತಿ ಆಗದೇ ಇದ್ದರೆ.... ಹೈಟೆಕ್ ಕೃಷ್ಣರವರು ಗ್ರಾಮಾಂತರ ಜನರ 'ಸಿಂಪಥಿ' (ಅನುಕಂಪ) ಗಳಿಸುವ ಬದಲು ಹುದ್ದೆಗಳ ಕಡಿತ ಹಾಗೂ ನೇಮಕಾತಿ ಮೇಲಿನ ನಿಷೇಧವನ್ನು ಮೊದಲು ತೆಗೆದುಹಾಕಬೇಕು. ಇಲ್ಲದಿದ್ದರೆ ಈ ಎಲ್ಲಾ ಘೋಷಣೆ - ಶಾಸನಗಳೂ ಸಹ ಕನ್ನಡಿಯೊಳಗಿನ ಬುತ್ತಿಗಂಟು' ಇದ್ದಂತೆ ಅಷ್ಟೆ.

ಜನಸಂದರ್ಶನ ಎಂಬ ನಾಟಕ

ಹೈಟೆಕ್ ಕೃಷ್ಣರವರ ಕಛೇರಿ ಕಂಪ್ಯೂಟರ್‌ಗಳಿಗೆ 'ಇಮೇಲ್' ಅರ್ಜಿ ಗುಜರಾಯಿಸಿ ಆರೆಂಟು ತಿಂಗಳು ಕಾದರೂ 'ಕ್ಯಾರೆ' ಎಂಬ ಉತ್ತರವಿಲ್ಲದೇ ಬಸವಳಿದವರು ಅನೇಕರು. ಈಗ ಮುಖ್ಯಮಂತ್ರಿಗಳ ಮನೆಯ ಮುಂದೆಯೇ ಜನತಾದರ್ಶನ, ಅದಕ್ಕಾಗಿ ಜನ ಜಂಗುಳಿ. ಇನ್ನೂ ಚುಮುಚುಮು ನಸುಕು ಇರುವಾಗಲೇ ಚಳಿಯಲ್ಲಿ ಗಡ ಗಡ ನಡುಗುತ್ತಾ ಒಂದು ಪಾಳಿಹಚ್ಚಿದುದು. ಎಳೆಯ ಕಂದಮ್ಮಗಳನ್ನು ಕಂಕುಳಲ್ಲಿಟ್ಟು ನಿಂತವರು, ವೃದ್ಧರು, ಠೀಕುಠೀಕಾದ ಗರಿಗರಿ ಖಾದಿ ವಸ್ತ್ರಧಾರಿಗಳು. ಜನರು ನೇರವಾಗಿ ತಮಗೆ ಅಹವಾಲು ಮುಟ್ಟಿಸಲಿ ಎಂದ ಕೃಷ್ಣರವರ ಜನದರ್ಶನ ಈ ವಾರದ ಸ್ಪೆಷಲ್.

ಮುಖ್ಯಮಂತ್ರಿ ಕೃಷ್ಣರವರು ದರ್ಶನ ನೀಡಲಾರಂಭಿಸಿದ್ದೆ ಬೆಳಿಗ್ಗೆ 9.05ಕ್ಕೆ ಅಂದರೆ ಅರ್ಜಿ ಸ್ವೀಕರಿಸಲು 'ರಾಹುಕಾಲ' ಕಳೆಯಬೇಕಿತ್ತಂತೆ ಹೈಟೆಕ್ ಯುಗದಲ್ಲಿಯೂ ಅಜ್ಞಾನವೇ...! ಅಹವಾಲು ಸಲ್ಲಿಸಿದವರ ಅಳಲು ಒಂದೆರಡಲ್ಲ. ಓಣಿಗಳಲ್ಲಿ ನೀರಿನ ಸರಬರಾಜಿಲ್ಲ. ತಮ್ಮ ಸೈಟ್ ಇನ್ನೊಬ್ಬರು ಲಪಟಾಯಿಸಿದ್ದಾರೆ. ಒಂದು ನೌಕರಿ ಕೊಡಿಸಿ ಗ್ರಂಥಾಲಯ ಇಲಾಖೆಯಲ್ಲಿ ತಾತ್ಕಾಲಿಕ ನೌಕರಿಯಲ್ಲಿದ್ದು ಹತ್ತಾರು ವರ್ಷಗಳಾಯಿತು. ಖಾಯಂಮಾಡಿ. ಕಣ್ಣಿನ ಶಸ್ತ್ರಚಿಕಿತ್ಸೆಗೆ ಹಣ, ಆಶ್ರಯ ಯೋಜನೆಯಲ್ಲಿ ಆದ ಮೋಸ, ನಿಗಮಗಳಿಗೆ ತಮ್ಮನ್ನು ನೇಮಿಸಿ ಎಂಬ ಮೊರೆ ಇವೆಲ್ಲಕ್ಕೂ ಕೃಷ್ಣರ ಸಮಜಾಯಿಸಿ, 'ಕ್ರಮವಹಿಸಿ' ಎಂಬ ಸೂಚನೆ... ಮತ್ತೆ ಅವೆಲ್ಲಾ ಇಲಾಖೆಗಳಿಗೆ ರವಾನೆ.

ಬಹುತೇಕ ಬಂದ ಜನರ ಬೇಡಿಕೆ, ಕಿಕರಾರುಗಳು ಆಯಾ ಪ್ರದೇಶಗಳಲ್ಲಿ ವಿವಿಧ ಇಲಾಖೆ



LTTE ಪ್ರಭಾಕರನ್ ಜೊತೆ ನೆಡುಮಾರನ್

ಅಧಿಕಾರಿಗಳೇ ಇತ್ಯರ್ಥ ಪಡಿಸಬಹುದಾದವುಗಳು. ಇಲ್ಲಿಯವರೆಗೂ ಬಂದರೇಕೆ? ಕಾರಣ ಸ್ಪಷ್ಟ... ಅಲ್ಲಿ ಜನರ ಅಹವಾಲು ಕೇಳುವವರೇ ಇಲ್ಲ. ನಿರ್ಲಕ್ಷ್ಯತನದಲ್ಲಿ ಬೆಂದು ಬಸವಳಿದವರು. ದೊರೆತನಕ ದೂರು ಸಲ್ಲಿಸಿದರೆ ಸಾಕು ಏನಾದರೂ ಆದೀತೆಂದು ಕಾದು ಬಂದವರು. ಇಂಥವರು ರಾಜ್ಯದ ತುಂಬೆಲ್ಲಾ..... ಅಂದರೆ ಕೃಷ್ಣರವರು ರಾಜ್ಯದ ಎಲ್ಲಾ ಅಹವಾಲುಗಳಿಗೆ ಉತ್ತರ ನೀಡಲು ಸಾಧ್ಯವೇ? ಹಾಗಾದರೆ ಇಲಾಖೆಗಳೂ ಅಧಿಕಾರಿಗಳು, ಸಚಿವರುಯಾಕೆ? ಇವರೆಲ್ಲಾ ಜನಸಾಮಾನ್ಯರನ್ನೂ ನಿರ್ಲಕ್ಷಿಸಿದ್ದು ಇದರಿಂದ ಗೊತ್ತಾಗುತ್ತದೆ. ಇದೇ ಆಡಳಿತ ಯಂತ್ರವನ್ನು ಚುರುಕುಗೊಳಿಸಿ, ಬಿಗಿಯಾಗಿ ನಿರ್ವಹಿಸಿ, ಜನಪರವಾಗುವಂತೆ ಕ್ರಮವಹಿಸುವುದನ್ನೂ ಬಿಟ್ಟು ಇಂತಹ 'ದರ್ಶನ'ಗಳು ಕೇವಲ 'ಸ್ಟಂಟ್'ಗಳು. ಕಾಲಹರಣದ ಕ್ರಮಗಳು ಅಷ್ಟೆ.

ಪುರ-ನಗರ ಸಭಾಸ್ಥಾನ ಮೀಸಲಾತಿ: ಸರ್ಕಾರಕ್ಕೆ ಛೀಮಾರಿ

ಪುರ ಸಭೆ - ನಗರ ಸಭೆಗಳಿಗೆ ಈ ತಿಂಗಳಲ್ಲೇ ನಡೆಯಬೇಕಿದ್ದ ಚುನಾವಣೆಗಳು ಮುಂದೆ ಹೋಗಿದೆ. ಕಾರಣ ವಾರ್ಡ್‌ಗಳಲ್ಲಿ ವಿವಿಧ ವರ್ಗಗಳಿಗೆ ವಿಭಾಗಗಳಿಗೆ ಹಂಚಲಾಗಿದ್ದ ಮೀಸಲಾತಿ ನಿಗದಿಪಡಿಸುವಿಕೆ ಅವೈಜ್ಞಾನಿಕ, ಪಕ್ಷಪಾತಕತನದ ತಾರತಮ್ಯ ಎಂಬ ಕೂಗುಕೇಳಿಬಂದಿತ್ತು. ಹಾಗೂ ಕೆಲವರು ಹೈಕೋರ್ಟ್‌ನ ಮೆಟ್ಟಿಲೇರಿದ್ದರು. ಇವುಗಳನ್ನು ಪರಿಶೀಲಿಸಿದ ನ್ಯಾಯಾಲಯವು ಈಗ ಮಾಡಲಾಗಿದ್ದ ಮೀಸಲಾತಿಯು ದೋಷದಿಂದ ಕೂಡಿದೆ. ಅದನ್ನು ಆರುವಾರದೊಳಗೆ ಸರಿಪಡಿಸಬೇಕು ಎಂದು ನಿರ್ದೇಶನ ನೀಡಿದೆ. ಹೀಗಾಗಿ ಚುನಾವಣೆಗಳೂ ಮುಂದೆ ಹೋಗಿದೆ.

ನ್ಯಾಯಾಲಯದ ಈ ತೀರ್ಪು ಸರ್ಕಾರಕ್ಕೆ ಕೊಟ್ಟ ಏಟು. ಹಾಗೆ ನೋಡಿದರೆ ರಾಜ್ಯದ ಬಹುತೇಕ ಕಡೆ ಆಳುವವರು, ಸ್ಥಾನಿಕ ಬಲವುಳ್ಳವರು ತಮಗಾಗದವರನ್ನು ನಿವಾರಿಸಿಕೊಳ್ಳಲು, ತಮಗೆ ಅನುಕೂಲವಾಗುವಂತೆ ಅಧಿಕಾರಿಗಳ ಬಲ ಉಪಯೋಗಿಸಿ ಮೀಸಲಾತಿ ಹಂಚಿಕೆ ಮಾಡಿರುವ ಉದಾಹರಣೆ ಧಾರಾಳ. ಈ ಮೊದಲು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ನಿಗದಿಪಡಿಸಲು ಚುನಾವಣಾ ಆಯೋಗಕ್ಕೆ ಅಧಿಕಾರವಿತ್ತು ಕಾಂಗ್ರೆಸ್ ಸರ್ಕಾರ ಬಂದನಂತರ ಅದನ್ನು ತಾವೇ ತೆಗೆದುಕೊಂಡಿದ್ದರು. ಹೀಗೆ ಕಾಂಗ್ರೆಸ್ ತನ್ನ ಸಂಸ್ಕೃತಿಯನ್ನು ಬಿಡಲಿಲ್ಲ ಎಂಬುದು ಸ್ಪಷ್ಟ. ಇಂತಹ 'ಮೀಸಲಾತಿ' ಗುರುತಿಸಲು ಹಣ ಪಡೆಯಲಾಗಿದೆಯೆಂಬ ಆರೋಪಗಳು ಬಂದಿವೆ. ಕೆಲವು ಶಾಸಕರಂತೂ ತಮ್ಮ ಪತ್ರದಲ್ಲಿ ಸ್ಪಷ್ಟ ಸೂಚನೆಗಳನ್ನೇ ನೀಡಿದ್ದಾರೆ. ಇವೆಲ್ಲವುಗಳ ಬಗ್ಗೆ ತನಿಖೆಯಾಗಬೇಕಿದೆ. ಮೀಸಲಾತಿಸ್ಥಾನಗಳ ಹಂಚಿಕೆ 'ಸರ್ವಸಮ್ಮತವಾಗಿ' ಆಗಬೇಕಿದೆ. ಇದೇ ಕಾರಣ ಮುಂದೊಡ್ಡಿ ಚುನಾವಣೆಗಳನ್ನು ದೂರ ತಳ್ಳಬಾರದು ಆದಷ್ಟು ಶೀಘ್ರ ಚುನಾವಣೆಗಳು ನಡೆಯಬೇಕು. ಮತದಾರರು ಮುನಿದಾರೆಂದು ಹೆಚ್ಚಿಸಿದ್ದ ವಿದ್ಯುತ್‌ಧರಗಳು ಜಾರಿಯನ್ನು ತಾತ್ಕಾಲಿಕವಾಗಿ ಮುಂದೂಡಿದ ಕೃಷ್ಣರವರು, ಏನು ಮಾಡುತ್ತಾರೆಂದು ಕಾದು ನೋಡಬೇಕು.

ನೆಡುಮಾರನ್ ಸನ್ಮಾನ ಅಪಾಯಕಾರಿ

ನೆಡುಮಾರನ್‌ಗೆ ಸನ್ಮಾನ ಮಾಡುವ ಕಾರ್ಯಕ್ರಮ ಮುಂದೂಡಲಾಗಿದೆ. ರಾಜ್ ಬಿಡುಗಡೆಯಲ್ಲಿ ಶ್ರಮಿಸಿದರು ಎಂದು ಸನ್ಮಾನಿಸಲು 'ಅಗ್ನಿ' ಬಳಗವು ಮುಂದಾಗಿತ್ತು. ಇದಕ್ಕೆ ವಿರುದ್ಧವಾದ ಪ್ರತಿಭಟನೆಗಳೂ ವ್ಯಕ್ತವಾಗಿದ್ದವು.

ಈ ನೆಡುಮಾರನ್ ಯಾರು? ಡಾ|| ಭಾನು ಎಂಬಾಕೆ ದೇವತೆಯೇ? ಅಲ್ಲದೇ ಈ ಇಡೀ ಪ್ರಕರಣದಲ್ಲಿ ಭಾಗಿಯಾದವರ ಹಿನ್ನಲೆಗಳೇನು? ಇವೆಲ್ಲಾ ಅಪ್ರಸ್ತುತ ಎನ್ನುತ್ತಾರೆ ಸಂಘಟಕರು ಹಾಗೂ ಕೆಲವು ಬುದ್ಧಿಜೀವಿಗಳು. ಸಹಾಯ ಮಾಡಿದವರಿಗೆ ಧನ್ಯವಾದಹೇಳದೇ ಹೋದರೆ ಹೇಗೆ? ಅದು ನಮ್ಮ ಧರ್ಮವಲ್ಲವೇ ಎಂದೂ ಪ್ರಶ್ನೆಗಳನ್ನೂ ಹಾಕುತ್ತಾರೆ ಇವರು.

ನೆಡುಮಾರನ್ ಮತ್ತವರ ಸುತ್ತಲಿನ ಗುಂಪು ಕುಖ್ಯಾತ ದೇಶದ್ರೋಹಿ ಎಲ್.ಟಿ.ಟಿ.ಇ. ಜೊತೆಗಿರುವ ಸಂಬಂಧಗಳು, ಕೊಲೆಗಡುಕ, ಕಾಡುಗಳ್ಳ ವೀರಪ್ಪನ್‌ನ ಒಡನಾಡಿಗಳು ಎಂಬ ಧಾರುಣ ಸತ್ಯವನ್ನು ಅರಿಯದಷ್ಟು ಮುಗ್ಧರು ಇವರಲ್ಲ ಎಂಬುದು ಇಂತಹ ಶಕ್ತಿಗಳಿಂದ ದೇಶಕ್ಕೆ, ಕರ್ನಾಟಕಕ್ಕೆ ಆಗಬಹುದಾದ ಅಪಾಯಗಳನ್ನು ಲೆಕ್ಕಿಸದೇ ಅವರೊಂದಿಗೆ ತಮ್ಮನ್ನು ಥಳಕುಹಾಕಿಕೊಳ್ಳಲು ಹವಣಿಸುತ್ತಿರುವುದರ ಉದ್ದೇಶವಾದರೂ ಏನು? ರಾಜೀವ್ ಹತ್ಯೆಯ ಭೀಭತ್ಸ ಘಟನೆ ಜನರ ಮನಸ್ಸಿನಿಂದ ನಿಧಾನವಾಗಿ ಮರೆಯಾಗುತ್ತಿರುವಂತೆ ಎಲ್.ಟಿ.ಟಿ.ಇ.ಪರ ಶಕ್ತಿಗಳು ಭಾರತದ ನೆಲದಲ್ಲಿಯೂ ಮತ್ತೇ ಚುರುಕಾಗಿ, ಪುನರ್ ಸಂಘಟಿತಗೊಂಡು ಆಕ್ರಮಣಕಾರಿ ಕೆಲಸ ಆರಂಭಿಸಲು ಸಿದ್ಧಗೊಳ್ಳುತ್ತಿದೆ. ನೆಡುಮಾರನ್ .... 'ಸ್ವಾಯತ್ತತೆ' 'ರಾಷ್ಟ್ರೀಯತೆ' ಪ್ರಶ್ನೆಗಳು ತೋರುವ ಹಾದಿ, ಅಂತಿಮ ಅರ್ಥ ಭಾರತವನ್ನು ವಿಭಜಿಸುವುದು. ಇವರನ್ನು ಗಾಂಧೀವಾದಿ ಎನ್ನುವುದು ಕರ್ನಾಟಕದಲ್ಲಿ ಮಣೆಹಾಕುವುದು ಅಪಾಯಕಾರಿ. ಪ್ರೊ|| ಚಂಪಾರಂತಹ ಪ್ರಗತಿಪರರೂ ಹಾವಿನ ಆಟಕ್ಕೆ ತಲೆದೂಗುವುದು ಗಂಭೀರ ವಿಚಾರ. ಅಂಥವರು ತಮ್ಮ ನಿಲುವನ್ನು ಪುನರ್ ವಿಮರ್ಶೆ ಮಾಡಿಕೊಳ್ಳಬೇಕು. ಇಂಥಹ ಸಮಾರಂಭಗಳಲ್ಲಿ ರಾಜ್ ಕುಟುಂಬ ಭಾಗಿಯಾಗಬಾರದು.

ಕೊನೆಕೊನೆಗೆ ನೆಡುಮಾರನ್ ಆಡಿದ ಮಾತುಗಳು, ಸರ್ಕಾರಕ್ಕೆ ಹಾಕಿದ ಸವಾಲು ಖಂಡನೀಯ. ರಾಜ್ ಅಪಹರಣದ ಮೊಕದ್ದಮೆಯನ್ನೇ ಹೂಡಲಾಗಿಲ್ಲ ಎಂಬುದು ಆಸ್ಫೋಟಕಾರಿ ವಿಷಯ. ಸರ್ಕಾರ ಹಾಗೂ ಇವರೆಲ್ಲಾ ಅನೇಕ ಸತ್ಯಗಳನ್ನು ಮುಚ್ಚಿಹಾಕುತ್ತಿರುವಂತಿದೆ. ನಿಗೂಢವಾಗಿಯೇ ಉಳಿದಿರುವ ರಾಜ್ ಅಪಹರಣದ ಒಟ್ಟು ವಿದ್ಯಮಾನಗಳನ್ನು ಜನರ ಮುಂದೆ ಬಹಿರಂಗಪಡಿಸಬೇಕು. ಇಂಥಹ ಶಕ್ತಿಗಳ ಬಗ್ಗೆ ಜಾಗೃತಗೊಂಡು ನಾಡಿನ ಜನತೆಯೂ ತಕ್ಕ ಉತ್ತರ ಹೇಳಬೇಕು.



ವಿಲೀನದತ್ತ ಜನತಾದಳ ಬಣಗಳು: ವಹಿಸಬೇಕಾದ ರಾಜಕೀಯ ಎಚ್ಚರ

ಜನತಾದಳದ ಎರಡೂ ಬಣಗಳೂ ವಿಲೀನ ಆಗುವ ಪ್ರಕ್ರಿಯೆ ತೀವ್ರಗೊಂಡಿದೆ. ಜೆ.ಹೆಚ್.ಪಟೇಲರ ಆತ್ಮಶಾಂತಿಗಾಗಿಯಾದರೂ ಆಗಿ ಎಂದು ಮಠಾಧೀಶರು ಭೋದಿಸುವ ತುಂಬ ಮೊದಲೇ ಈ ಪ್ರಕ್ರಿಯೆ, ಭಾವನೆಗಳು ಬಲಗೊಂಡಿದ್ದವು.

ವಿಲೀನ ಎನ್ನಲಾಗದಿದ್ದರರೂ ಜೆಡಿ(ಎಸ್), ಜೆಡಿ(ಯು) ಬಣಗಳ ಒಗ್ಗೂಡುವಿಕೆಗೆ ಚಾಲನೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಥಾನ ಹೊಂದಾಣಿಕೆ ಮಾತುಕತೆ ಮೂಲಕ ಆರಂಭಗೊಂಡಿದೆ. ಹಾಗೇ ಇದನ್ನು ಮೇಲಕ್ಕೆ ವಿಸ್ತರಿಸಬೇಕು ಎಂಬ ಬಯಕೆಯೂ ಮೂಡಿದೆ. ಇದು ರಾಜ್ಯದ ರಾಷ್ಟ್ರದ ಹಿತದಲ್ಲಿ ಸ್ವಾಗತಾರ್ಹವಾದುದು.

ಆದರೆ ಈ ವಿಲೀನದ ಬಯಕೆ ಹಲವು ಪ್ರಶ್ನೆಗಳನ್ನು ಎತ್ತಿದೆ. ಹೆಗಡೆ ಮತ್ತವರ ಗುಂಪು ರಾಜ್ಯದಲ್ಲಿ ಹೊಂದಾಣಿಕೆ ಆಗಿ 'ಕರ್ನಾಟಕ ಜನತಾದಳ' ಎಂದಾಗಿ ರಾಜ್ಯಕ್ಕೆ ಇದನ್ನು ಸೀಮಿತಗೊಳಿಸುವುದು ಎಂಬ ಅಭಿಪ್ರಾಯ ನೀಡಿದ್ದಾರೆ. ಹೀಗೆ ದೇವೇಗೌಡರನ್ನು ಮೂಲೆಗುಂಪು ಮಾಡುವ ಲೆಕ್ಕಾಚಾರ ಇಲ್ಲದೆ ಇಲ್ಲ. ಮುಖ್ಯವಾಗಿ ದೇವೇಗೌಡರು, ಸಿದ್ದರಾಮಯ್ಯ ಮುಂತಾದ ಜೆಡಿ(ಎಸ್) ನಾಯಕರು ವಿಲೀನಕ್ಕೆ ಸೂಕ್ತ ರಾಜಕೀಯ ದೃಷ್ಟಿ ನಿಲುವು ಬೇಕೆಂದು ಹೇಳಿದ್ದಾರೆ. ಜನತಾದಳ ಒಡೆದದ್ದೇ ಪಟೇಲರ ನೇತೃತ್ವದಲ್ಲಿನ ಗುಂಪು ಬಿಜೆಪಿ, ಮೈತ್ರಿಕೂಟಕ್ಕೆ ಸೇರುವ ಮೂಲಕ ಎಂಬುದು ಮರೆಯಲು ಆಗದು. ಹಾಗಾಗಿ ಎನ್.ಡಿ.ಎ. ದೊಂದಿಗಿನ ಮೈತ್ರಿ ಕಡಿದುಕೊಂಡರೆ ಮಾತ್ರ ವಿಲೀನಕ್ಕೆ ಅರ್ಥವಿದೆ. ರಾಜ್ಯದಲ್ಲಿ ಒಂದು ಬಗೆ ಕೇಂದ್ರದಲ್ಲಿ ಇನ್ನೊಂದು ಬಗೆ ಎಂಬುದು ಸರಿಯಲ್ಲ ಎಂದೂ ಜೆಡಿ(ಎಸ್) ನಾಯಕರು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಬಿಜೆಪಿ, ಕಾಂಗ್ರೆಸ್‌ನ್ನು ಎದುರಿಸಿ ಮೂರನೆ ಪರ್ಯಾಯ ರೂಪಿಸುವಲ್ಲಿ ಜೆಡಿ(ಎಸ್) ನಾಯಕರ ಈ ಸ್ಪಷ್ಟ ನಿಲುವು ಸರಿಯಾದುದು. ಇಲ್ಲವಾದರೆ ಇಡೀ ಜನತಾದಳವನ್ನು ಜಾತ್ಯಾತೀತ ನಿಲುವಿನ ಜನತೆಯನ್ನು ಎನ್.ಡಿ.ಎ.ಗೆ ಅಡವಿಡುವಂತಾದೀತು. ಆದ್ದರಿಂದ ಈ ಸ್ಪಷ್ಟ ಸೈದ್ಧಾಂತಿಕ ರಾಜಕೀಯ ನಿಯಮಾಧಾರದಲ್ಲಿ ಒಂದುಗೂಡಲು ಮುಂದಾಗಬೇಕು. ಸಂದರ್ಭ ಸಾಧಕ ಆಗಬಾರದು.

ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಕೃಷ್ಣಾನದಿ ದಂಡೆಯ ಪ್ರಸಿದ್ಧ 'ಮಡಕೆ ಕನೆಮೊಸರಿನ' ಕೊಲ್ಹಾರ ಗ್ರಾಮವೆಂದೇ ಪ್ರಸಿದ್ಧಿಯಲ್ಲಿರುವ ಕೊಲ್ಹಾರ ಕ್ಷುಲ್ಲಕ ಕಾರಣದಿಂದಾಗಿ ಹಿಂದೂ-ಮುಸ್ಲಿಂ ಮತೀಯ ಘರ್ಷಣೆಯಿಂದಾಗಿ ನಲುಗಿ ಹೋಗಿದೆ. ಶಾಸಕನ ತಮ್ಮನ ಭುಜಕ್ಕೆ ಭುಜ ತಾಗಿತೆಂಬ ಕ್ಷುಲ್ಲಕ ಕಾರಣ ಅಲ್ಪಮತಸ್ತ ವಿರೋಧಿ ಧೋರಣೆಗೆ 12 ಸಾವಿರ ಜನ ಸಂಖ್ಯೆ ಇರುವ ಕೊಲ್ಹಾರ ಗ್ರಾಮ ಬಲಿಯಾಗಿ ಭಯಭೀತಿಯ ತಾಣವಾಗಿದೆ. ಡಿಸೆಂಬರ್ 6 ರಂದು ನಡದ ಘರ್ಷಣೆಯಲ್ಲಿ ಹೊಡೆತಕ್ಕೆ ತುತ್ತಾಗಿ ಸೋಲಾಪುರ ದವಾಖಾನೆಯಲ್ಲಿ ಶುಶ್ರೂಷೆಗೊಳಗಾಗಿದ್ದ ಜೀಪ್ ಡ್ರೈವರ್ ದಸ್ತಗಿರಸಾಬ ಹಸನ್ ಸಾಬ ಕನಕಗಿರಿ(24) ಡಿಸೆಂಬರ್ 12 ರಂದು ಕೊನೆಯುಸಿರೆಳೆದುದು ಕೋಮುವಾದಿಗಳು ಕ್ಷುಲ್ಲಕ ಕಾರಣ ನೆಪದಿಂದ ಯಾವ ರೀತಿ ಕೋಮು ಸೌಹಾರ್ದತೆಗೆ ಬೆಂಕಿ ಹಚ್ಚಿ ಮರೆಯುತ್ತಾರೆಂಬುದಕ್ಕೆ ಸಾಕ್ಷಿಯಾಗಿದೆ.

ಕೊಲ್ಹಾರವನ್ನು ನಡುಗಿಸಿದ ಕೋಮುವಾದಿಗಳು

ಹಿಂದೂ-ಮುಸಲ್ಮಾನರ ಹೆಚ್ಚು ಕಡಿಮೆ ಸರಿಸಮಾನ ಜನಸಂಖ್ಯೆ ಹೊಂದಿರುವ ಕೊಲ್ಹಾರ ಗ್ರಾಮ 1998 ರವರೆಗೂ ಕೋಮು ಸೌಹಾರ್ದತೆಯ ನೆಲೆಬೀಡಾಗಿಯೇ ಉಳಿದಿತ್ತು. ಗ್ರಾಮದ ಎಲ್ಲಾ ಜಾತ್ರೆ -ಸಮಾರಂಭಗಳಲ್ಲಿ ಎರಡೂ ಜಾತಿಯವರು ಏಕಭಾವದಿಂದಲೇ ಪಾಲ್ಗೊಳ್ಳುತ್ತಿದ್ದರು. ಆದರೆ ಕಾಂಗ್ರೆಸ್ಸಿಗೆ ಬೇಸತ್ತ ಜನ 1998 ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸನ್ನು ಸೋಲಿಸಿ ಕೊಲ್ಹಾರದವರೇ ಆದ ಬಿಜೆಪಿ ಉಮೇದುವಾರರನ್ನು ಆರಿಸಿ ತಂದಿದ್ದರು. ಕೊಲ್ಹಾರದ ಹಲವಾರು ಮುಸ್ಲಿಂ ಮುಖಂಡರೂ ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಚುನಾವಣೆಯಲ್ಲಿ ಮತ ಹಾಕಿದ್ದರು.

ಕೋಲ್ಹಾರದ ಬಿಜೆಪಿ ಉಮೇದುವಾರ ಬೆಳ್ಳಿಬಿ ಆರಿಸಿಬಂದ ನಂತರ ಅಲ್ಲಿಯ ಕೋಮು ಸೌಹಾರ್ದತೆಯಲ್ಲಿ ಬಿರುಕು ಹುಟ್ಟಿಕೊಂಡಿತು. ಚುನಾವಣೆಯ ವರ್ಷ ನಡೆದ ಹೋಳಿ ಹುಣ್ಣಿಮೆ ಸಂದರ್ಭದಲ್ಲಿ ಬಣ್ಣ ಚೆಲ್ಲುವ ಮೂಲಕ ಕೋಮು ಸೌಹಾರ್ದತೆಗೆ ಮಣ್ಣೆರಚುವ ಪ್ರಯತ್ನ ನಡೆಯಿತು. ಈ ವರ್ಷದ ಹೋಳಿ ಹುಣ್ಣಿಮೆ ಅಪಾಯಕಾರಿ ಹಂತ ತಲುಪಿ ಹಲವಾರು ಅಂಗಡಿಗಳು ಬೆಂಕಿಗಾಹುತಿಯಾದವು. ತೀವ್ರ ಘರ್ಷಣೆ ನಡೆಯಿತು. ಊರ ಪ್ರಮುಖರ ಪ್ರಯತ್ನದಿಂದಾಗಿ ಸ್ನೇಹಮಯ ವಾತಾವರಣ ಉಂಟಾಯಿತಾದರೂ ಎರಡೂ ಕೋಮಿನ ಪಂಥವಾದಿ ಯುವಕರು ಮಾತ್ರ ತಮ್ಮೊಳಗಿನ ದ್ವೇಷ-ಸೇಡು ಭಾವನೆಯನ್ನು ಬೂದಿಯಲ್ಲಿ ಮುಚ್ಚಿಕೊಂಡಂತೆ ಕಾಣುತಿತ್ತು.

ಕೊಲ್ಹಾರದ ಗ್ರಾಮದ ಹೆಚ್ಚಿನ ಭಾಗ ಆಲಮಟ್ಟಿ ಹಿನ್ನೀರಿನಿಂದ ಮುಳುಗಿದೆ. 5 ಕಿ.ಮಿ. ದೂರದಲ್ಲಿ ಹೊಸ ಕೊಲ್ಹಾರ ತಲೆ ಎತ್ತಿದೆ. ಆದರೆ ಹಳೆ ಕೋಲ್ಹಾರದ ಎಲ್ಲ ಜನ ಹೊಸ ಕೊಲ್ಹಾರಕ್ಕೆ ಹೋಗಿಲ್ಲ. ಶಾಸಕರೂ ಹಳೆ ಕೊಲ್ಹಾರದಲ್ಲೇ ಇದ್ದಾರೆ. ಡಿಸೆಂಬರ್ 6 ರಂದು ಮಧ್ಯಾಹ್ನ ಪ್ರಾರಂಭವಾದ ಘಟನೆ ಸಾಂತ್ವನವಾಗಿದೆಂದು ಕಂಡಬಂದರೂ ಹೊಸ ಕೊಲ್ಹಾರದಲ್ಲಿ ರಾತ್ರಿ ಗಲಭೆ ತೀವ್ರಗೊಂಡು ಮೂರು ಅಂಗಡಿಗಳು ಸುಡಲ್ಪಟ್ಟು, ದಸ್ತಗಿರಿಸಾಬ ತೀವ್ರ ಗಾಯಗೊಂಡು ಆಸ್ಪತ್ರೆ ಸೇರಿದ ನಂತರ ಎರಡೂ ಕೊಲ್ಹಾರದ ಜನ ಭಯಭೀತರಾಗಿದ್ದಾರೆ, 13 ಜನರನ್ನು ಬಂಧಿಸಲಾಗಿದೆ.

ಕೋಮು ಸೌಹಾರ್ದತೆಗೆ ನೀರೆರಚಿ ವಾತಾವರಣ ಕಲುಷಿತಗೊಳ್ಳುತ್ತಿರುವಾಗ ಅದಕ್ಕೆ ಎಣ್ಣೆ ಸುರಿದಂತೆ ಅಧಿಕಾರಿಗಳು ವರ್ತಿಸಿದರು. ಹಳೇ ಕೊಲ್ಹಾರದ ಪುನರ್ವಸತಿ ಗ್ರಾಮಕ್ಕೆ ಬದಲಾಯಿಸುತ್ತಿರುವಾಗ ಕಳೆದ ಮೂರು ವರ್ಷಗಳಿಂದಲೂ ಸ್ಮಶಾನ ಭೂಮಿ ಕೊಡಮಾಡುವುದರಲ್ಲಿ ಪುನರ್ವಸತಿ ಅಧಿಕಾರಿಗಳು ಮೀನಮೇಷ ತಾಳುತ್ತಿದ್ದರು. ಕಾರಣ ಮೃತರಾದವರಿಗೆ ಸ್ಮಶಾನವಿಲ್ಲದೆ ಸಮಸ್ಯೆ ಉಂಟಾಗಿತ್ತು. ಅಲ್ಪಮತಸ್ತರಿಗೆ 12 ಎಕ್ರೆ ಭೂಮಿ ಕೊಡುವ ನಿರ್ಧಾರವಾಗಿದ್ದರೂ 12 ಎಕ್ರೆ ಭೂಮಿಯನ್ನು ಎರಡು ಜಾತಿಯವರಿಗೆ ಹಂಚುವಿಕೆಗೆ ಪುನರ್ವಸತಿ ಅಧಿಕಾರಿಗಳು ಗ್ರಾಮಕ್ಕೆ ಬಂದಾಗ ಅವರ ಮೇಲೆ ದಾಳಿ ಮಾಡಿದ 15 ದಿವಸದೊಳಗಾಗಿ ಈ ದುರಂತ ನಡೆದಿದೆ.

ಕಳೆದ ಮೂರು ವರ್ಷಗಳಲ್ಲಿ ಹಿಂದು ಕೋಮಿನ ಕೆಲವರ ನಡತೆ, ವರ್ತನೆಗಳು ಸಹಜವಾಗಿಯೇ ಮತ್ತೊಂದು ಕೋಮಿನ ಮೇಲೆ ಪರಿಣಾಮ ಬೀರಿದೆ. ಸಂದರ್ಭ ಸಿಕ್ಕಾಗ ಅದು ಘರ್ಷಣೆಗೆ ದಾರಿ ಮಾಡಿಕೊಡುತ್ತದೆ. ಇಡೀ ಗ್ರಾಮದ ನಿರಪರಾಧಿ ಜನರನ್ನು ಆಹುತಿ ತೆಗೆದುಕೊಳ್ಳುತ್ತದೆ.

ಕೊಲ್ಹಾರದ ಕೋಮು ಗಲಭೆಯ ಹಿನ್ನೆಲೆಯನ್ನು ಕಂಡು ಹಿಡಿದು ಸಾಧ್ಯವಾದರೆ ಇಂದಿನ ಸಮಯದಲ್ಲಿ ಕೋಮು ಸೌಹಾರ್ದತೆ ಕಾಪಾಡುವ ಅಗತ್ಯವನ್ನು ತಿಳಿಸಿ ಹೇಳುವ ಉದ್ದೇಶದಿಂದ ಗ್ರಾಮದಲ್ಲಿ ಕರ್ಫ್ಯೂ ಇದ್ದಕಾರಣ ಇತರ ಪಕ್ಷದವರು ಅಲ್ಲಿ ಹೋಗಲು ಹಿಂದೇಟು ಹಾಕುತ್ತಿದ್ದಾಗ ಸಿಪಿಐ(ಎಂ) ಜಿಲ್ಲಾ ಸಮಿತಿ ಪರವಾಗಿ ಎನ್.ಕೆ.ಉಪಾಧ್ಯಾಯ, ಭೀಮಸಿ ಕಲಾದಗಿ, ವಿ.ಎಂ.ಸೊನ್ನದ ಮತ್ತು ಬಸವಲಿಂಗಪ್ಪ ಕಪಾಲೆಯವನ್ನರನ್ನೊಳಗೊಂಡ ಒಂದು ನಿಯೋಗ ಕೊಲ್ಹಾರ ಎರಡೂ ಗ್ರಾಮಗಳಿಗೆ ಹೋಗಿ ಎರಡೂ ಕೋಮಿನ ಮುಖಂಡರನ್ನು, ಶಾಲೆ ಶಿಕ್ಷಕರನ್ನು, ಪೋಲೀಸ್ ಅಧಿಕಾರಿಗಳನ್ನು ಹಾಗೆಯೇ ಭಯಭೀತಿಯಾದ ಮನೆಯಿಂದ ಹೊರಬೀಳಲು ಅಂಜುತ್ತಿರುವವನ್ನು ಭೇಟಿ ಮಾಡಿ ಎರಡೂ ಅಭಿಪ್ರಾಯಗಳನ್ನು ಸಂಗ್ರಹಿಸಿತು.

ನಾವು ಗ್ರಾಮಕ್ಕೆ ಹೋದಾಗ ಪೋಲೀಸರೂ ಸಹಕರಿಸಿದರು. ಹಿರಿಯರು ಬಿಚ್ಚು ಮನಸ್ಸಿನಿಂದ ಮಾತಾಡಿದರು. ಶಾಸಕರು ಊರಲ್ಲಿರಲಿಲ್ಲ. ಅವರ ಮಕ್ಕಳು, ಸಂಬಂಧಿ ಜೊತೆ ಚರ್ಚೆ ಮಾಡಲಾಯಿತು.

ಮುಂದೇನಾಗುತ್ತದೋ ಎಂಬ ಭೀತಿಯಿಂದ ಜನ ನಲುಗಿದ್ದಾರೆ. ಸ್ಮಾಶನ ಮೌನ ಆವರಿಸಿತ್ತು. ಬಹಳಷ್ಟು ಜನ ಊರು ಬಿಟ್ಟಿದ್ದಾರೆ. ಅಂಗಡಿ ಮುಂಗಟ್ಟು, ಮನೆಗಳ ಬಾಗಿಲು ಮುಚ್ಚಿದ್ದವು. ಸುಶಿಕ್ಷಿತರು 'ಅವರು' 'ಇವರು' ಎಂದು ಹೇಳುತ್ತಿದ್ದರಲ್ಲದೇ ಜಾತಿ ಹೆಸರಿಸಲು ಹೆದರುತ್ತಿದ್ದಂತೆ ಕಂಡು ಬರುತ್ತಿತ್ತು.

ಮೂರು ವರ್ಷಗಳ ಹಿಂದೆ ಬಿಜೆಪಿ ಉಮೇದುವಾರ ಆರಿಸಿ ಬಂದ ನಂತರ ಕೋಮು ಸೌಹಾರ್ದತೆಗೆ ಅಪಾಯ ಕಂಡು ಬಂದಾಗಲೇ ಮೊಳಕೆಯಲ್ಲೇ ಅದನ್ನು ಸರಿಪಡಿಸುವ ಪ್ರಯತ್ನ ನಡೆಯಲಿಲ್ಲ. ಅದರ ರಾಜಕೀಯ ಲಾಭ ಪಡೆಯುವ ಕುತಂತ್ರ ಹಿಂದುತ್ವವಾದಿಗಳಿಂದ ನಡೆದು ಬಂದಿರುವ ಚಿನ್ಹೆಗಳಿವೆ. ಅದರಿಂದಾಗಿ ಸಹಜವಾಗಿಯೇ ಹಿರಿಯರ ಅಭಿಪ್ರಾಯ ಅಲ್ಲಗಳೆದು ಮತ್ತೊಂದು ಕೋಮಿನ ಯುವಕರು ತಮ್ಮದೇ ಪಂಥ ಪ್ರತಿಪಾದನೆ ಪ್ರಾರಂಬಿಸಿದಂತೆ ಕಂಡು ಬರುತ್ತದೆ. ಹೊಸ ಕೊಲ್ಹಾರದಲ್ಲಿ ಮುಳುಗಡೆ ಪ್ರಾಧಿಕಾರದ ಅಧಿಕಾರಿಗಳಿಂದ ದೊಡ್ಡ ತಪ್ಪಾಗಿದೆ. ಹಿಂದೂ-ಮುಸಲ್ಮಾನರಿಗೆ ನಿವೇಶನ ಪ್ರತ್ಯೇಕ ಪ್ರತ್ಯೇಕವಾಗಿ ವಿತರಿಸಲಾಗಿದೆ. ಸ್ಮಶಾನ ಭೂಮಿಯನ್ನು ಸಕಾಲದಲ್ಲೇ ಸಮರ್ಪಕವಾಗಿ ನಿರ್ಧರಿಸಲಿಲ್ಲ. ಮೂರು ವರ್ಷಗಳಿಂದ ಕೋಮು ವೈಷಮ್ಯಕ್ಕೆ ಚಾಲನೆ ಕಂಡುಬಂದಾಗ ಯಾರೂ ಅದನ್ನು ತಡೆಯಲಿಕ್ಕೆ ಪ್ರಯತ್ನ ಮಾಡಲಿಲ್ಲ. ಎಡ ಪ್ರಜಾಪ್ರಭುತ್ವ ವಿಚಾರಧಾರೆಯ ಅಭಾವದಿಂದಾಗಿ ಸಮಾಜದ್ರೋಹಿ-ಕೋಮುವಾದಿ ಶಕ್ತಿಗಳನ್ನೆದುರಿಸಲು ಅದರ ವಿರುದ್ಧ ಜನಜಾಗೃತಿ ಉಂಟು ಮಾಡಲು ಸಾಧ್ಯವಾಗಲಿಲ್ಲ. ಈಗ ಪರಿಸ್ಥಿತಿ ಇನ್ನೂ ಅಪಾಯದ ಅಂಚಿನಲ್ಲಿದೆ. ಜನರಲ್ಲಿ ಕೋಮು ಶಕ್ತಿಗಳ ಅಪಾಯದ ಕುರಿತು ಜನಜಾಗೃತಿ ಉಂಟು ಮಾಡಿ ಹೊಸ ಸೌಹಾರ್ದಮಯವಾತಾವರಣ ಸೃಷ್ಟಿಸಬೇಕಾಗಿದೆ. ಬೇರೆ ಯಾವ ಪಕ್ಷವೂ ಕೊಲ್ಹಾರಕ್ಕೆ ಭೇಟಿ ನೀಡಲು ಹಿಂಜರಿದಾಗ ಸಿಪಿಐ(ಎಂ) ಮುಖಂಡರ ಭೇಟಿ ಸಾರ್ವಜನಿಕರಲ್ಲಿ ಒಳ್ಳೆ ಅಭಿಮಾನ ಉಂಟು ಮಾಡಿದೆ.

ವರದಿ - **ಎನ್.ಕೆ.ಉಪಾಧ್ಯಾಯ**



ಕೃಷಿ ರಂಗವನ್ನು ಉಳಿಸಿ, ದೇಶವನ್ನು ರಕ್ಷಿಸಿ: ದೆಹಲಿಯಲ್ಲಿ ರೈತ-ಕೂಲಿಕಾರರ ಬೃಹತ್ ರ್‍ಯಾಲಿ

ದೆಹಲಿಯಲ್ಲಿ ದೊರೆಗಳ ನೀತಿಗಳ ವಿರುದ್ಧ ಪ್ರತಿಭಟಿಸಲು ರಾಷ್ಟ್ರದ ಬಹುತೇಕ ರಾಜ್ಯಗಳಿಂದ ಆಗಮಿಸಿದ್ದ ಲಕ್ಷಾಂತರ ರೈತ ಕೂಲಿಕಾರರ ಒಕ್ಕೊರಲಿನ ಘೋಷಣೆ-'ಕೃಷಿ ರಂಗವನ್ನು ಉಳಿಸಿ ದೇಶವನ್ನು ರಕ್ಷಿಸಿ' ಎಂಬುದಾಗಿತ್ತು.

ಅಖಿಲಭಾರತ ಕಿಸಾನ್ ಸಭಾ(AIKS) ಅಖಿಲ ಭಾರತ ಕೃಷಿಕೂಲಿಕಾರರ ಸಂಘ(AIWU)ಗಳು ಒಳಗೊಂಡು 7 ಎಡರೈತ ಕೂಲಿಕಾರರ ಸಂಘಟನೆಗಳು ನೀಡಿದ್ದ ಕರೆಯ ಮೇರೆಗೆ, ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳಿಂದ ತೀವ್ರ ಸಂಕಷ್ಟಕ್ಕೆ ಗುರಿಯಾಗಿರುವ ರೈತ ಕೂಲಿಕಾರರು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ದೆಹಲಿಗೆ ಹರಿದು ಬಂದಿದ್ದರು. ಈ ಹೋರಾಟದ ಸಾಗರಕ್ಕೆ ನಮ್ಮ ರಾಜ್ಯದ ಪುಟ್ಟಣ್ಣಯ್ಯನವರ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ(KRRS) ಮತ್ತು ಕೇಂದ್ರ ಮಾಜಿ ಸಚಿವ ರಾಮುವಲಿಯಾರವರ ನಾಯಕತ್ವ ಲೋಕಭಲೈ ರೈತ ಸಂಘಟನೆಗಳು ಸೇರಿಕೊಂಡು, ರ್‍ಯಾಲಿಗೆ ರಂಗು ರಂಗಿನ ಶೋಭೆಯನ್ನು ತಂದುಕೊಟ್ಟಿತು. ರಾಜ್ಯ ರೈತ ಸಂಘದ 'ಹಸಿರು' ರಾಮುವಲಿಯಾರವರ ಆಕರ್ಷಕ ಬಣ್ಣದ ಬಾವುಟಗಳು ಮೈದಾನದಲ್ಲಿ ತುಂಬಿದ್ದ ಕೆಂಬಾವುಟಗಳ ನಡುವೆ ಎದ್ದು ಕಾಣುತ್ತಾ [illegible] ಪ್ರತಿಬಿಂಬಿಸುತ್ತಿದ್ದವು.

ಕೆಂಪು ಕೋಟೆಯಿಂದ ಸಾಗಿದ ಆಕರ್ಷಕ ಬೃಹತ್ ರ್‍ಯಾಲಿ ರಾಮಲೀಲಾ ಮೈದಾನದಲ್ಲಿ ಸಮಾವೇಶಗೊಳ್ಳಲು ಸುಮಾರು 3 ಗಂಟೆಯನ್ನು ತೆಗೆದುಕೊಂಡಿತು. ಸಂಘಟಕರ ನಿರೀಕ್ಷೆ ಮೀರಿ ಆಗಮಿಸಿದ್ದ ಈ ಬೃಹತ್ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಎಐಕೆಎಸ್‌ನ ಉಪಾಧ್ಯಕ್ಷರಾದ ಕಾಂ.ಹರಿಕಿಷನ್ ಸಿಂಗ್ ಸುರ್ಜಿತ್ 1980 ರ ನಂತರದ ದಿನಗಳಲ್ಲಿ ಇದು ಅತಿ ದೊಡ್ಡ ಪ್ರಮಾಣದ ರೈತ ಕೂಲಿಕಾರರ ರ್‍ಯಾಲಿಯೆಂದು ಅಭಿನಂದಿಸುತ್ತಾ, ಇದು, ಕೇಂದ್ರದ ರೈತ ವಿರೋಧಿ ನೀತಿಗಳ ವಿರುದ್ಧ ರೈತರ ಜಾಗೃತಿಯ ಸಂಕೇತವೆಂದು ಹೇಳಿ, ಜಾಗತೀಕರಣದ ಧೋರಣೆಗಳು ಮತ್ತು ಬಿಜೆಪಿ ನಾಯಕತ್ವ ಸರ್ಕಾರ, ಸಾಮ್ರಾಜ್ಯಶಾಹಿಗಳಿಗೆ ಶರಣಾಗುತ್ತಿರುವ ನೀತಿಗಳ ವಿರುದ್ಧ ಸಮರಶೀಲ ಹೋರಾಟಗಳಲ್ಲಿ ನಡೆಸಬೇಕೆಂದು ಕರೆ ನೀಡಿದರು.

ಈ ರ್‍ಯಾಲಿಯಲ್ಲಿ ಕರ್ನಾಟಕ ರಾಜ್ಯದಿಂದ ಸುಮಾರು 6000 ರೈತ-ಕೂಲಿಕಾರರು ಭಾಗವಹಿಸಿದ್ದರು. ರಾಜ್ಯ ರೈತ ಸಂಘದ ಸುಮಾರು 2500 ಜನ ರೈತರೂ ಸಹ ರ್‍ಯಾಲಿಯಲ್ಲಿ ಪಾಲುಗೊಂಡಿದ್ದುದು ಗಮನಾರ್ಹ ಅಂಶವಾಗಿದೆ.

ಎಲ್ಲ ಸಂಘಟನೆಗಳ ಮುಖಂಡರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಐಎಂಎಫ್-ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರಿ ಸಂಘಟನೆಯ ಶರತ್ತುಗಳಿಗೆ ತಲೆಬಾಗಿ ರೈತರಿಗೆ ಸಂಕಷ್ಟವನ್ನು ತಂದೊಡ್ಡಿರುವ ಬಿಜೆಪಿ ನಾಯಕತ್ವದ ಕೇಂದ್ರ ಸರ್ಕಾರ ರೈತ ವಿರೋಧಿ ನೀತಿಗಳನ್ನು ಖಂಡಿಸಿ, ಹೋರಾಟಗಳನ್ನು ತೀವ್ರಗೊಳಿಸಬೇಕೆಂದು ಕರೆ ನೀಡಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷರಾದ ಪುಟ್ಟಣ್ಣಯ್ಯನವರು, ಹಸಿರು-ಕೆಂಬಾವುಟಗಳು ಸೇರಿ ಹೋರಾಟವನ್ನು ಶುರುಮಾಡಿದ್ದೇವೆ. ಇದನ್ನು ಮುಂದುವರಿಸೋಣ, ರೈತರ ಶತ್ರುಗಳಾದ ಐಎಂಎಫ್-ಡಬ್ಲ್ಯುಟಿಓ-ವಿಶ್ವಬ್ಯಾಂಕ್ ಧೋರಣೆಗಳನ್ನು ಹಿಮ್ಮೆಟ್ಟಿಸೋಣವೆಂದರು.

ಫೆಬ್ರವರಿ 5-7, 2001 3 ದಿನಗಳ ಕೇಂದ್ರ ಸರ್ಕಾರದ ಕಛೇರಿಗಳ ಪಿಕೆಟಿಂಗ್ 7 ರಂದು ಜೈಲ್‌ಭರೋ

ಕೃಷಿಗೆ ಮಾರಕವಾಗಿರುವ ಆಮದು ನೀತಿಯನ್ನು ವಾಪಸು ಪಡೆಯಬೇಕು, ಕೃಷಿಗೆ ನೀಡುತ್ತಿರುವ ಸಬ್ಸಿಡಿಗಳನ್ನು ಕಡಿತಮಾಡಬಾರದು, ಸಮಗ್ರ ಭೂಸುಧಾರಣೆ, ಬೆಳೆ ವಿಮೆ ಜಾರಿಯಾಗಬೇಕು, ಬಡರೈತರಿಗೆ ಸಾಲ ಸೌಲಭ್ಯ ವಿಸ್ತರಣೆಯಾಗಬೇಕು, ಕೃಷಿ ಕೂಲಿಕಾರರ ಜೀವನದ ಭದ್ರತೆಗಾಗಿ ಸಮಗ್ರ ಕೇಂದ್ರೀಯ ಕಾನೂನನ್ನು ರಚಿಸಬೇಕು, ಡಿಸಲ್, ಸೀಮೆಎಣ್ಣೆ ದರಗಳ ಏರಿಕೆಯನ್ನು ವಾಪಸು ಪಡೆಯಬೇಕು, ನಿರುದ್ಯೋಗ, ಸಾರ್ವಜನಿಕ ಕ್ಷೇತ್ರದ ಖಾಸಗೀಕರಣ ನೀತಿಗಳನ್ನು ಕೈಬಿಡಬೇಕು ಇತ್ಯಾದಿ ಬೇಡಿಕೆಗಳನ್ನು ಆಗ್ರಹಿಸಿ ರಾಷ್ಟ್ರಾದ್ಯಂತ ಫೆಬ್ರವರಿ 5-7, 2001 [illegible] ಕಛೇರಿಗಳನ್ನು ಪಿಕೆಟಿಂಗ್ ನಡೆಸಲು ರ್‍ಯಾಲಿ ಕರೆ ನೀಡಿದೆ.


ಈ ಫೆಬ್ರವರಿಯ ಹೋರಾಟಕ್ಕೆ ಪೂರ್ವಭಾವಿಯಾಗಿ ಜನವರಿಯಲ್ಲಿ ರಾಜ್ಯ ಮಟ್ಟದ ರ್‍ಯಾಲಿಗಳನ್ನು ಸಂಘಟಿಸಲು ತೀರ್ಮಾನಿಸಲಾಗಿದೆ.

'ಕೃಷಿ ರಂಗವನ್ನು ಉಳಿಸಿ, ದೇಶವನ್ನು ರಕ್ಷಿಸಿ'ಸಲು ನಡೆಯುತ್ತಿರುವ ಈ ಹೋರಾಟವನ್ನು ಯಶಸ್ವಿಗೊಳಿಸಲು ದೊಡ್ಡ ಪ್ರಮಾಣದಲ್ಲಿ ರೈತ-ಕೂಲಿಕಾರರು ಭಾಗವಹಿಸುವುದರ ಜೊತೆಗೆ ವಿದ್ಯಾರ್ಥಿ-ಯುವಜನ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಮಹಿಳಾ ಸಂಘಟನೆಗಳು, ಸಕ್ರಿಯವಾಗಿ ಭಾವಹಿಸಬೇಕೆಂದು ರ್‍ಯಾಲಿಯು [illegible]

ಭಾರತ ಕಮ್ಯುನಿಸ್ಟ್ ಚಳುವಳಿಗೆ 80 ವರ್ಷಗಳು

ಭಾರತ ಕಮ್ಯುನಿಸ್ಟ್ ಚಳುವಳಿ ಪ್ರಾರಂಭವಾಗಿ ಅಕ್ಟೋಬರ್ 17 ರಂದು 80 ವರ್ಷಗಳು ಕಳೆದವು. ಹಳೆಯ ಸೋವಿಯತ್ ಯೂನಿಯನ್ನಿನ ದಕ್ಷಿಣ ನಗರವಾದ ತಾಷ್ಕೆಂಟ್‌ನಲ್ಲಿ ಈ ಚಳುವಳಿಯ ಉದಯವಾಯಿತು. ಅದರ ಪ್ರಥಮ ಸಭೆಯಲ್ಲಿ ಎಂ.ಎನ್.ರಾಯ್ ಅವರಪತ್ನಿ ರೆವಲಿನ್ ರಾಯ್, ಅಂಬಾನಿ ಮುಖರ್ಜಿ, ಅವರ ಪತ್ನಿ ರೋಸಾ ಗೋಫ್, ಮಹಮದ್ ಅಲಿ, ಮೊಹಮದ್ ಶಾಫಿಕ್, ಎಂ.ಪಿ.ಬಿ.ಟಿ.ಆಚಾರ್ಯ ಈ ಏಳು ಜನರು ಉಪಸ್ಥಿತರಿದ್ದರು. ಶಾಫಿಕ್ ಅವರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.

ಪೇಷಾವರ್ ಮಾಸ್ಕೋ ಪಿತೂರಿ ಮೊಕದ್ದಮೆ ನಡೆಯುವ ಸಮಯದಲ್ಲಿ ಬಾಂಬೆ, ಕಲ್ಕತ್ತಾ, ಮದ್ರಾಸ್, ಲಾಹೋರ್, ಬನಾರಸ್ ಮುಂತಾದ ಕಡೆಗಳಲ್ಲಿ ಕಮ್ಯುನಿಸ್ಟ್ ಗುಂಪುಗಳು ರೂಪುಗೊಂಡವು. ಈ ಗುಂಪುಗಳಿಗೆ ಎಸ್.ಎ.ಡಾಂಗೆ, ಮುಜಾಫರ್ ಅಹಮದ್, ಗುಲಾಂ ಹುಸೇನ್, ನಳಿನಿ ಗುಪ್ತಾ ಮುಂತಾದವರು ಮುಖಂಡತ್ವ ಕೊಟ್ಟಿದ್ದರು. ಇವುಗಳಲ್ಲಿ ಬನಾರಸ್ ಗುಂಪು ಬಿಟ್ಟು ಉಳಿದ ನಾಲ್ಕು ಗುಂಪುಗಳು ಸಮಾಜವಾದದ ಧೋರಣೆಯನ್ನು ಪ್ರಚಾರ ಮಾಡಲು ಪತ್ರಿಕೆ ಆರಂಭಿಸಿದವು. ಕಲ್ಕತ್ತಾ ಗುಂಪು ಆರಂಭಿಸಿದ ಪತ್ರಿಕೆಯೇ ಗಣವಾಣಿ. ಮುಜಾಫರ್ ಅಹಮದ್ ಇದರ ಸಂಪಾದಕರಾಗಿದ್ದರು. ಬಾಂಬೆ ಗುಂಪಿನ ಪತ್ರಿಕೆಯ ಹೆಸರು 'ಸೋಷಲಿಸ್ಟ್'. ಸಂಪಾದಕರಾಗಿದ್ದವರು ಎಸ್.ಎ.ಡಾಂಗೆ. ಮದ್ರಾಸ್ ಗುಂಪಿನ ಪತ್ರಿಕೆ ಲೇಬರ್ ಅಂಡ್


ಎಂ.ಎನ್.ರಾಯ್

ಕಿಸಾನ್ ಗೆಜೆಟ್. ಸಿಂಗಾರಪೇಟೆ ಚೆಟ್ಟಿಯವರ ಸಂಪಾದಕತ್ವದಲ್ಲಿ ಪ್ರಾರಂಭವಾಯಿತು. ಲಾಹೋರ್ ಪತ್ರಿಕೆ ಇಂಕ್ವಿಲಾಬ್ ಹೆಸರಿನಲ್ಲಿ ಗುಲಾಂ ಹುಸೇನ್ ಸಂಪಾದಕತ್ವದಲ್ಲಿ ಆರಂಭವಾಯಿತು. ಈ ನಾಲ್ಕು ಪತ್ರಿಕೆಗಳಲ್ಲದೆ ಬಹಳ ಗುಪ್ತವಾಗಿ ವಿತರಣೆಯಾಗುತ್ತಿದ್ದ ಇನ್ನೊಂದು ಪತ್ರಿಕೆ ವ್ಯಾನ್ ಗಾರ್ಡ್. 1922-1924 ರ ಕಾಲಘಟ್ಟದಲ್ಲಿ ಪ್ರಸಾರವಾಗುತ್ತಿದ್ದ ಇನ್ನೊಂದು ಪತ್ರಿಕೆ ಮಾಸ್ ಆಫ್ ಇಂಡಿಯಾ. ಈ ಪತ್ರಿಕೆಗಳು 1925 ರಿಂದ 1927 ರ ವರೆಗೆ ಭಾರತದಲ್ಲಿ ಸಮಾಜವಾದಿ ಧೋರಣೆಯನ್ನು ಪ್ರಚಾರ ಮಾಡುತ್ತಿದ್ದವು. ಈ ನಡುವೆ ಕಮ್ಯುನಿಸ್ಟ್ ಹಾಗೂ ಸಮಾಜವಾದಿ ಚಿಂತನೆವುಳ್ಳವರು ಬೆಳೆದು ಬರಲು ಆರಂಭಿಸಿದರು. ಕಾನಪುರ, ಕರಾಚಿಯಂತಹ ಕೈಗಾರಿಕಾ ಕೇಂದ್ರಗಳಲ್ಲಿ ಕಮ್ಯುನಿಸ್ಟ್ ಗುಂಪುಗಳ ನಡುವೆ ಸಂಬಂಧ ಏರ್ಪಡಿಸಿದ್ದ ಪ್ರಕ್ರಿಯೆಯಲ್ಲಿ ಎಂ.ಎನ್.ರಾಯ್‌ರವರ ಕೊಡುಗೆ ಮಹತ್ವದ್ದಾಗಿತ್ತು.

ಈ ಕಮ್ಯುನಿಸ್ಟ್ ಗುಂಪುಗಳು ರೂಪುಗೊಳ್ಳುವ ಮುಂಚೆಯೇ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಸಮ್ಮೇಳನದಲ್ಲಿ ಭಾರತ ಸೇರಿದಂತೆ ಹಿಂದುಳಿದ ರಾಷ್ಟ್ರಗಳ ರಾಷ್ಟ್ರೀಯ ವಿಮೋಚನಾ ಚಳುವಳಿಗಳು ಹೇಗೆ ಕೆಲಸ ಮಾಡಬೇಕು ಎಂಬ ವಿಷಯದಲ್ಲಿ ಗಂಭೀರ ಹಾಗೂ ತೀಕ್ಷ್ಣವಾದ ವಾದಗಳು ನಡೆದಿದ್ದವು. ಅದರ ವಿದ್ಯಮಾನಗಳನ್ನು ಕ್ರೋಢೀಕರಿಸಿ ಕಾಂ. ಇ.ಎಂ.ಎಸ್. ಹೀಗೆ ಹೇಳುತ್ತಾರೆ.


1. ಭಾರತ ಮತ್ತು ಚೀನಾ ಸೇರಿದಂತೆ ಉತ್ತರ ರಾಷ್ಟ್ರಗಳ ಜವಾಬ್ದಾರಿ ಸಾಮ್ರಾಜ್ಯಶಾಹಿಗೆ ವಿರುದ್ಧವಾದ ಹೋರಾಟ ಸಂಘಟಿಸುವುದು.

2. ಈ ಹೋರಾಟದಲ್ಲಿ ಕಾರ್ಮಿಕ ವರ್ಗದ ತರಹವೇ ರಾಷ್ಟ್ರೀಯ ಭೂರ್ಜ್ವಾಸಿಗೂ ಆಸಕ್ತಿ ಇದೆ. ಆದುದರಿಂದ ರಾಷ್ಟ್ರೀಯ ಭೂರ್ಜ್ವಾಸಿಯನ್ನೂ ಸೇರಿಸಿ ಒಂದು ಸಾಮ್ರಾಜ್ಯಶಾಹಿ ವಿರೋಧ ಚಳುವಳಿ ಕಟ್ಟಿ ಬೆಳೆಸಬೇಕಾಗಿದೆ.

ಈ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಲ್ಲಿ ಮುಖ್ಯ ಶಕ್ತಿ ರೈತರದ್ದಾಗಿರುತ್ತದೆ. ಆಸ್ತಿ ವಿಷಯದಲ್ಲಿ ರಾಷ್ಟ್ರೀಯ ಭೂರ್ಜ್ವಾಸಿ ಜೊತೆಯಲ್ಲಿ ಸಂಬಂಧವಿರುವುದಾದರೂ ರೈತರದು ಒಂದು ಕ್ರಾಂತಿಕಾರಿ ವರ್ಗವಾಗಿರುತ್ತದೆ. ಜಮೀನ್ದಾರಿ ಸಂಪ್ರದಾಯ ಸೇರಿದಂತೆ ಎಲ್ಲಾ ಬಂಡವಾಳಶಾಹಿ ಸಮಸ್ಯೆಗಳ ಜೊತೆ ಕಾನೂನು ವಿರುದ್ಧ ಹೋರಾಟವನ್ನು ಈ ವರ್ಗ ಮಾಡಿಕೊಂಡು ಬಂದಿದೆ. ಆದುದರಿಂದ ರೈತರ ಜೊತೆ ದೃಢವಾದ ಐಕ್ಯತೆ ಕಟ್ಟಿ ಬೆಳೆಸಿದರೆ ಕಾರ್ಮಿಕ ವರ್ಗವು ರಾಷ್ಟ್ರೀಯ ಭೂರ್ಜ್ವಾಸಿಯ ಜೊತೆ ಸಾಮ್ರಾಜ್ಯಶಾಹಿ ವಿರೋಧಿ ಐಕ್ಯತೆ ತರಲು ಸಾಧ್ಯ. ಈ ಸತ್ಯವನ್ನು ಮನಗಾಣದೆ ರೈತ ಕ್ರಾಂತಿಯ ಕಣ್ಣೋಟವಿಲ್ಲದೆ, ಭೂರ್ಜ್ವಾಸಿ ಜೊತೆ ಐಕ್ಯತೆಗೆ ಹೊರಟರೆ ಅವಸರವಾದವಾಗುತ್ತದೆ.

3. ಭಾರತ ಸೇರಿದಂತೆ ಪೂರ್ವ ರಾಷ್ಟ್ರಗಳಲ್ಲಿ ಇರುವ ಕಾರ್ಮಿಕ ವರ್ಗ ಬಹಳ ದುರ್ಬಲವಾಗಿದೆ. ಆದರೆ ಇರುವಂತಹ ಕಾರ್ಮಿಕ ವರ್ಗವು ರಾಷ್ಟ್ರೀಯ ಕ್ರಾಂತಿಕಾರಿಗಳು ಸೇರಿ ಒಂದು ಕಮ್ಯುನಿಸ್ಟ್ ಪಕ್ಷವನ್ನು ರೂಪೀಕರಿಸಬೇಕಾಗಿದೆ. (ಸಮಾಜವಾದಕ್ಕಿರುವ ಭಾರತದ ದಾರಿ ಇ.ಎಂ.ಎಸ್. - ಪುಟ 14-15)

ಈ ಪರಸ್ಪರ ಸಂಬಂಧಪಟ್ಟ ಮೂರು ಜವಾಬ್ದಾರಿಗಳ ಆಧಾರದಲ್ಲಿ 1920 ರಲ್ಲಿ ಎಲ್ಲಾ ಕಮ್ಯುನಿಸ್ಟರು ತಮ್ಮ ಕೆಲಸ ಆರಂಭಿಸಿದರು. ಕಾಂಗ್ರೆಸ್ ಮತ್ತು ಇತರೆ ಸಾಮ್ರಾಜ್ಯಶಾಹಿ ವಿರೋಧಿ ಸಂಘಟನೆಗಳ ಮುಂದಾಳುಗಳು ಹಾಗೂ ಕಮ್ಯುನಿಸ್ಟರು ಸೇರಿ ಕಾಂಗ್ರೆಸ್ ಒಳಗೆ ಎಡಪಕ್ಷಕ್ಕೆ ರೂಪಕೊಡಲು ಒಂದು ಸಂಘಟಿತವಾದ ಶ್ರಮ ನಡೆಸಿದರು. ಇದರ ಪರವಾಗಿ ಕಾಂಗ್ರೆಸ್ ಒಳಗೆ ಹಾಗೂ ಆಚೆ ಕೆಲಸಮಾಡುತ್ತಿದ್ದ ಮಿತವಾದಿ ನಾಯಕತ್ವದ ನೇತೃತ್ವದಲ್ಲಿ ಡೊಮಿನಿಯನ್ ಜವಾಬ್ದಾರಿ ಎಂಬ ಘೋಷಣೆಗೆ ಬದಲಾಗಿ ಸಂಪೂರ್ಣ ಸ್ವಾತಂತ್ರ್ಯ ಎಂಬ ಘೋಷಣೆ ಬೆಳೆಸಲು ಕಮ್ಯುನಿಸ್ಟರಿಗೆ ಹಾಗೂ ಎಡ ಪಕ್ಷಗಳಿಗೆ ಸಾಧ್ಯವಾಯಿತು. 1921 ರಲ್ಲಿ ಅಹಮದಾಬಾದ್‌ನಲ್ಲಿಯೂ, 1922 ರಲ್ಲಿ


ಎವಲಿನ್ ರಾಯ್

ಗಯಾದಲ್ಲಿಯೂ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾರತದ ಕಮ್ಯುನಿಸ್ಟ್ ಪಕ್ಷ ಒಂದು ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿತು. 'ಸಂಪೂರ್ಣ ಸ್ವಾತಂತ್ರ್ಯ', ಸಮಾನ ಆರ್ಥಿಕತೆ, ಸಾಮಾಜಿಕ ಪರಿಸರಣೆಗಳು ಇಂತಹ ಘೋಷಣೆಗಳನ್ನು ಅಧಿಸೂಚನೆಯಲ್ಲಿ ಮುಂದಿಡಲಾಯಿತು. ಈ ಘೋಷಣೆಯನ್ನು ಎತ್ತಿದ ಕಮ್ಯುನಿಸ್ಟರನ್ನು ಎಡಪಕ್ಷಗಳನ್ನು ಜೊತೆಯಲ್ಲಿ ಸೇರಿಸಿಕೊಂಡರೆ ಸ್ವಾತಂತ್ರ್ಯ ಚಳುವಳಿ ಯಶಸ್ವಿಯಾಗಲು ಸಾಧ್ಯವೆಂದು ಕಾಂಗ್ರೆಸ್ ಮನಗಂಡಿತು. 1929 ರಲ್ಲಿ ನಡೆದ ಲಾಹೋರ್ ಸಮ್ಮೇಳನದಲ್ಲಿ ಸಮಾಜವಾದಿ ಚಿಂತನೆಯಿರುವ ಜವಾಹರಲಾಲ್ ನೆಹರೂರವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಲು ತಯಾರಿ ನಡೆಯಿತು.

1920 ರ ಪ್ರಾರಂಭದಲ್ಲಿ ಭಾರತದ ಕೆಲವು ಮುಖ್ಯ ಕೇಂದ್ರಗಳಲ್ಲಿ ಕಮ್ಯುನಿಸ್ಟ್ ಗುಂಪುಗಳು ಪ್ರಾರಂಭಗೊಂಡವು ಎಂದು ಆರಂಭದಲ್ಲಿಯೇ ಹೇಳಲಾಗಿದೆ. ಆ ಕಾಲಘಟ್ಟದಲ್ಲಿ ಈ ಗುಂಪುಗಳು ಮುಖ್ಯವಾಗಿ ಮಾಡಿದ ಕೆಲಸವೆಂದರೆ ಕಮ್ಯುನಿಸ್ಟ್ ಧೋರಣೆಯನ್ನು ಪ್ರಚಾರ ಮಾಡುವುದು. ಇದರ ಜೊತೆಯಲ್ಲಿಯೇ ಸಕ್ರಿಯವಾಗಿ ಕಾರ್ಮಿಕರನ್ನು ಸಂಘಟಿಸುವುದು, ಅವರ ಬೇಡಿಕೆಗಳ ಹೋರಾಟಕ್ಕೆ ಮುಖಂಡತ್ವ ಕೊಡುವುದು ಇದರ ಫಲವಾಗಿ ಕಾರ್ಮಿಕ ಸಂಘಗಳ ಸದಸ್ಯತ್ವ ಜಾಸ್ತಿಯಾಯಿತು. ಕಾರ್ಮಿಕರ ಹೋರಾಟಕ್ಕೆ ಹೊಸ ಒಂದು ಚೇತನ ಬಂದಿತು.

ಇದರಿಂದ ಬ್ರಿಟಿಷ್ ಸರಕಾರಕ್ಕೆ ಒಂದು ರೀತಿಯಲ್ಲಿ ಭಯ ಆರಂಭವಾಯಿತು. ಕಮ್ಯುನಿಸ್ಟರು ಕಾರ್ಮಿಕರ ನಡುವೆ ಸಕ್ರಿಯವಾಗಿ ಕೆಲಸ ಮಾಡುವ ಅರಿವು ಇವರಿಗೆ ಉಂಟಾಯಿತು. ಆದುದರಿಂದ ಪಕ್ಷವನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಲು ಬ್ರಿಟಿಷ್ ಸರಕಾರ ತೀರ್ಮಾನಿಸಿತು. ಇದರ ಭಾಗವಾಗಿ 1923 ಮೇ ತಿಂಗಳಲ್ಲಿ ಕಾನ್ಪುರದಲ್ಲಿ ಶೌಕತ್ ಉಸ್ಮಾನಿಯಾ, ಕಲ್ಕತ್ತದಲ್ಲಿ ಮುಜಾಫರ್ ಅಹಮದ್, ಬಾಂಬೆಯಲ್ಲಿ ಡಾಂಗೆಯವರ ಬಂಧನವಾಯಿತು. ನಂತರ ಕೆಲವು ದಿನಗಳಲ್ಲಿ ಲಾಹೋರ್‌ನಲ್ಲಿ ಗುಲಾಂ ಹುಸೇನ್‌ರವರ ಬಂಧನವಾಯಿತು.

1918 ರ ರೆಗ್ಯುಲೇಷನ್ ಕಾಯಿದೆ -3 ರ ಪ್ರಕಾರ ಇವರನ್ನು ವಿಚಾರಣೆ ಇಲ್ಲದೆ ಜೈಲಿಗೆ ಹಾಕಲಾಯಿತು. ಇಂಡಿಯನ್ ಪಿನಲ್ ಕೋರ್ಟ್‌ನ 121 ಸೆಕ್ಷನ್ ಪ್ರಕಾರ 1924 ರ ಮಾರ್ಚ್ ತಿಂಗಳಲ್ಲಿ ಕಾನಪುರ ನ್ಯಾಯಾಲಯದಲ್ಲಿ ಇದರ ವಿರುದ್ಧ ಚಾರ್ಜ್‌ಶೀಟ್ ಹಾಕಲಾಯಿತು. ಇದರಲ್ಲಿ ಎಂಟು ಜನರನ್ನು ಅಪರಾಧಿಗಳಾಗಿ ಮಾಡಲಾಯಿತು. ಮೇಲೆ ಹೆಸರಿಸಿದ ನಾಲ್ಕು ಜನರನ್ನು ಬಿಟ್ಟು ನಳಿನಿಗುಪ್ತಾ, ಸಿಂಗಾರವೇಲು ಚೆಟ್ಟಿಯಾರ್, ರಾಮಚಂದ್ರ ಲಾಲ್ ಶರ್ಮಾ, ಎಂ.ಎಸ್.ರಾಯ್‌ರವರನ್ನು ಅಪರಾಧಿಗಳಾಗಿ ಮಾಡಲಾಯಿತು. ಇವರ ವಿರುದ್ಧ ನಡೆದ ಮೊಕದ್ದಮೆಯೇ 'ಕಾನ್ಪುರ ಪಿತೂರಿ ಮೊಕದ್ದಮೆ' ಎಂದು ಪ್ರಸಿದ್ಧವಾಯಿತು. ಅಂದಿನ ಇಂಟಲಿಜೆನ್ಸ್ ಬ್ಯೂರೋ ನಿರ್ದೇಶಕರಾದ ಲೆಫ್ಟಿನೆಂಟ್ ಕರ್ನಲ್ ಸಿಸಿಲ್ ಕೆ. ಈ ಬಗ್ಗೆ ಹೀಗೆ ವಿವರಣೆ ಕೊಡುತ್ತಾರೆ "ಇದೊಂದು ಪ್ರತ್ಯೇಕ ಘಟನೆಯಲ್ಲ. ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ದೊಡ್ಡ ರೀತಿ ಬೆಳೆದು ಬರುತ್ತಿದೆ. ಈ ಅಪಾಯ ಎಲ್ಲಾ ಕಡೆ ವ್ಯಕ್ತವಾಗುತ್ತಿದೆ. ಒಂದು ಕಡೆ ಬಂಗಾಳದ ಕ್ರಾಂತಿಕಾರಿಗಳು ಹಲವಾರು ರೀತಿ ಎಂ.ಎಸ್.ರಾಯ್‌ರವರ ಸ್ನೇಹಿತರಾಗಿದ್ದಾರೆ. ಅಸಹಕಾರ ಚಳುವಳಿ ವಿಫಲವಾದ ನಂತರ ಇವರ ಹಳೆಯ ಕೆಲಸಕಾರ್ಯಗಳನ್ನು ಪುನರಾರಂಭಿಸಿದ್ದಾರೆ. ಒಂದು ಕಡೆ ಸಿ.ಆರ್.ದಾಸ್ ಕಾಂಗ್ರೆಸ್‌ನಲ್ಲಿರುವ ಎಡಪಂಥೀಯರ ನಡುವೆ ವಿಚಾರ ವಿನಿಮಯ ಮಾಡುತ್ತಿದ್ದಾರೆ. ಇವರು ಕಾರ್ಮಿಕ ವರ್ಗವನ್ನು ಸಂಘಟಿಸಲು ಆರಂಭಿಸಿರುತ್ತಾರೆ.



ಎಂ.ಎಸ್.ರಾಯ್‌ರವರ ಕಮ್ಯುನಿಸ್ಟ್ ಗುಂಪು ಅಪಾಯಕಾರಿ ರೀತಿಯಲ್ಲಿ ಬೆಳೆಯಲು ಸಾಧ್ಯವಿದೆ...

ಲೆಫ್ಟಿನೆಂಟ್ ಕರ್ನಲ್ ಸಿಸಿಲ್ ಕೆ.ಯ ಕೋರಿಕೆ ಪ್ರಕಾರ ಪತ್ರಿಕೆಗಳು ಈ ಮೊಕದ್ದಮೆಯನ್ನು ಕಾನ್ಪುರ ಬೋಲ್ಶೆವಿಕ್ ಪಿತೂರಿ ಮೊಕದ್ದಮೆ ಎಂದು ವಿಶ್ಲೇಷಿಸಿದವು. ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ವಿವಾದವನ್ನು ಸ್ಟೇಷನ್ ನ್ಯಾಯಾಲಯಕ್ಕೆ ಕಳುಹಿಸಲಾಯಿತು. 1924 ರ ಮೇಯಲ್ಲಿ ಮೊಕದ್ದಮೆ ಬಗ್ಗೆ ತೀರ್ಪು ಹೊರಡಿತು. ತೀರ್ಪು ನೀಡಿದ ನ್ಯಾಯಾಧೀಶ ಹೆಚ್.ಎನ್.ಹೋಂ ಒಬ್ಬ ಕುಪ್ರಸಿದ್ಧ ವ್ಯಕ್ತಿಯಾಗಿದ್ದರು. ಚೌರಿ-ಚೌರಾ ಘಟನೆಯಲ್ಲಿ 172 ಭಾರತೀಯರನ್ನು ಗಲ್ಲಿಗೇರಿಸಲು ತೀರ್ಪು ನೀಡಿದ ಈ ವ್ಯಕ್ತಿ ಎಸ್.ಎ.ಡಾಂಗೆ, ಶೌಕತ್ ಉಸ್ಮಾನಿ, ಮುಜಾಫರ್ ಅಹಮದ್ ಇವರಿಗೆ ನಾಲ್ಕು ವರ್ಷ ಕಠಿಣ ಶಿಕ್ಷೆ ವಿಧಿಸಿದರು. ಇವರನ್ನು ವಿವಿಧ ಜೈಲುಗಳಿಗೆ ಕಳುಹಿಸಲಾಯಿತು. ನಂತರ ಅಲಹಾಬಾದ್ ಹೈಕೋರ್ಟ್‌ಗೆ ಇವರೆಲ್ಲರೂ ಅಪೀಲ್ ಸಲ್ಲಿಸಿದರು. ಬ್ರಿಟನ್‌ನಲ್ಲಿ ಅಭಿಪ್ರಾಯ ಸ್ವಾತಂತ್ರ್ಯ ಇದೆ. ಕಮ್ಯುನಿಸ್ಟ್ ಪಕ್ಷಕ್ಕೆ ಅಲ್ಲೇ ಸಂವಿಧಾನ ಪ್ರಕಾರ ಮಾನ್ಯತೆಇದೆ. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸುವುದು ಪ್ರಜಾಪ್ರಭುತ್ವಕ್ಕೆ ಹಾಗೂ ಅಭಿವ್ಯಕ್ತ ಸ್ವಾತಂತ್ರ್ಯಕ್ಕೆ


ಅಂಬಾನಿ ಮುಖರ್ಜಿ

ವಿರುದ್ಧವಾಗಿದೆ ಎಂದು ಮುಜಾಫರ್ ಅಹಮದ್ ವಾದ ಮಾಡಿದರು. ಆದರೆ ಅಲಹಾಬಾದ್ ಹೈಕೋರ್ಟ್ ಈ ವಾದಕ್ಕೆ ಕಿವಿಗೊಡದೆ ಸೆಷನ್ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು. ಕಾನ್ಪುರ ಪಿತೂರಿ ಮೊಕದ್ದಮೆಯಲ್ಲಿದ್ದ ಎಂ.ಎನ್.ರಾಯ್ 1924 ಮೇ 21 ರಂದು ಬ್ರಿಟಿಷ್ ಸರಕಾರಕ್ಕೆ ಒಂದು ಬಹಿರಂಗ ಪತ್ರದಲ್ಲಿ ಈ ರೀತಿ ಬರೆದಿರುತ್ತಾರೆ

"ಸಮಾಜವಾದ ಕಮ್ಯುನಿಸ್ಟ್ ಧೋರಣೆಗಳನ್ನು ಪ್ರಚಾರ ಮಾಡುವುದು, ಕಾರ್ಮಿಕ ವರ್ಗದ ಆಶಯ ಧೋರಣೆ ಪ್ರಚಾರ ಮಾಡುವುದು ಗ್ರೇಟ್ ಬಿಟನ್ನಿನಲ್ಲಿಯೂ ಹಾಗೂ ಅದರ ಅಧೀನ ರಾಷ್ಟ್ರಗಳಲ್ಲಿಯೂ ನಿಷೇಧ ಮಾಡಲಾಗಿದೆಯೇ? ಕೇವಲ ಬ್ರಿಟಿಷ್ ಭಾರತದಲ್ಲಿ ಮಾತ್ರ ಏಕೆ ಈ ನಿಷೇಧ? ಬ್ರಿಟಿಷ್ ಸಾಮ್ರಾಜ್ಯತ್ವದ ಇತರೆ ಯಾವುದಾದರೂ ರಾಷ್ಟ್ರಗಳಲ್ಲಿ ಸೋಷಲಿಸ್ಟ್ ಕಮ್ಯುನಿಸ್ಟ್ ಪಕ್ಷಗಳು ಹಾಗೂ ಕಾರ್ಮಿಕ ವರ್ಗದ ಪಕ್ಷಗಳು ಕಾರ್ಯನಿರ್ವಹಿಸಿದಂತೆ ನಿಷೇಧ


ಪುಟ 11 ಕ್ಕೆ

ಹೋರಾಟದ ಹೊಸ

ದೇಶವನ್ನು ಮತ್ತೊಂದುಸಾರಿ ವಸಾಹತು ದೇಶವನ್ನಾಗಿ ಮಾರ್ಪಡಿಸಲು ಸಾಮ್ರಾಜ್ಯವಾದಿ ದೇಶಗಳು ವಿಶ್ವಬ್ಯಾಂಕನ್ನು, ಡಬ್ಲ್ಯುಟಿಓವನ್ನು ಸಾಧನವನ್ನಾಗಿ ಉಪಯೋಗಿಸುತ್ತಿದ್ದು ಇವುಗಳ ಪಿತೂರಿಯನ್ನು ಎಂದಿಗೂ ಸಹಿಸಲಾಗದು ಮತ್ತು ಇದರ ವಿರುದ್ಧ ಭಾರತದ ಕಾರ್ಮಿಕವರ್ಗ ಸಮರಧೀರ ಚಳುವಳಿಯನ್ನು ನಡೆಸುತ್ತದೆ ಎನ್ನುವ ಸಂದೇಶದೊಂದಿಗೆ ಡಿಸೆಂಬರ್ 27 ರಿಂದ 31 ರವರೆಗೆ ಸಿಐಟಿಯು ನ 10ನೇ ಅಖಿಲ ಭಾರತ ಸಮ್ಮೇಳನ ಹೈದರಾಬಾದಿನಲ್ಲಿ ಯಶಸ್ವಿಯಾಗಿ ಮುಕ್ತಾಯವಾಯಿತು.

32 ಲಕ್ಷ ಕಾರ್ಮಿಕರನ್ನು ಪ್ರತಿನಿಧಿಸಿ ಭಾರತದ ಎಲ್ಲಾ ದಿಕ್ಕುಗಳಿಂದ ಬಂದಿದ್ದ 2600 ಕ್ಕೂ ಹೆಚ್ಚು ಪ್ರತಿನಿಧಿಗಳು ಐದು ದಿನಗಳ ಕಾಲ ಹೈದಾರಾಬಾದಿನ ಸೈಂಟ್ ಮೇರೀಸ್ ಶಾಖೆಯ ಆವರಣದಲ್ಲಿ ನಿರ್ಮಿಸಲಾಗಿದ್ದ ಬೃಹತ್ ಆವರಣದಲ್ಲಿ (ವಿಮಲಾ ರಣದಿವೆ ನಗರ) ಭಾರತದ ಮುಂದಿನ ಹೋರಾಟದ ದಿಕ್ಕನ್ನು ಹಾಗೂ ದುಡಿವ ಜನರ ನೋವಿನ ಧ್ವನಿಗೆ ಪ್ರತಿಧ್ವನಿಯಾಗುವ ಬಗ್ಗೆ ಚರ್ಚಿಸಿ ಹಲವು ನಿರ್ಣಯಗಳನ್ನು ಕೈಗೊಂಡರು.

ಅಂತರ್ರಾಷ್ಟ್ರೀಯವಾಗಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ಏನೆಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದರೂ ಹಿಂಜರಿತವನ್ನು ಅನುಭವಿಸುತ್ತಿದ್ದು ಮತ್ತೊಂದು ಗಂಭೀರ ಬಿಕ್ಕಟ್ಟಿಗೆ ಸಿಕ್ಕಿಕೊಳ್ಳುವ ಸಂದರ್ಭದಲ್ಲಿ ನಮ್ಮ ಸಮ್ಮೇಳನವು ನಡೆಯುತ್ತಿದೆ ಎಂದು ಸಿಐಟಿಯುನ ಅಧ್ಯಕ್ಷರಾದ ಇ.ಬಾಲಾನಂದನ್ ರವರು ಅಧ್ಯಕ್ಷೀಯ ಭಾಷಣ ಮಾಡುತ್ತಾ ತಿಳಿಸಿದರು. ಐಎಂಎಫ್-ವಿಶ್ವಬ್ಯಾಂಕ್-ವಿಶ್ವ ವ್ಯಾಪಾರ ಸಂಘಟನೆಗಳ ಮೂಲಕ ಜಾರಿ ಮಾಡುತ್ತಿರುವ ಸಾಮ್ರಾಜ್ಯಶಾಹಿ ಪ್ರೇರಿತ ಆರ್ಥಿಕ ನೀತಿಗಳಿಂದಾಗಿ ಸಂಪತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೇಂದ್ರೀಕರಣವಾಗುತ್ತಿದ್ದು ಜಗತ್ತಿನ ಶೇ 80 ರಷ್ಟು ಜನತೆಗೆ ಇದರಿಂದ ಮಾರಕವಾಗಿದೆ. ಈ ಬೆಳವಣಿಗೆಗಳ ಬಗ್ಗೆ ಯೋಚಿಸದೆ ಭಾರತ ಸರ್ಕಾರ ಇಂತಹ ನೀತಿಗಳನ್ನೇ ಜಾರಿಗೊಳಿಸುತ್ತಿದೆ.


ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವ ಎಸ್.ಸೂರ್ಯನಾರಾಯಣ ರಾವ್



ಸಿಐಟಿಯು ಅಖಿಲ ಭಾರತ ಸಮ್ಮೇಳನ

ದೇಶ ಸಾಲದ ಬಲೆಯಲ್ಲಿ ಸಿಕ್ಕಿಕೊಳ್ಳುತ್ತಿದೆ. 1999 ಮಾರ್ಚ್ 31 ಕ್ಕೆ ಕೇಂದ್ರ ಸರ್ಕಾರದ ಒಟ್ಟು ಸಾಲ 10,12,486 ಕೋಟಿ ರೂ.ಗಳು. ಇದು ನಿವ್ವಳ ರಾಷ್ಟ್ರೀಯ ಉತ್ಪನ್ನದ ಶೇ 57.44 ರಷ್ಟು. 1994-95 ರ ನಂತರ ಸರ್ಕಾರಕ್ಕೆ ಬರುತ್ತಿರುವ ಆದಾಯವು ಅಸಲು ಮತ್ತು ಬಡ್ಡಿಯನ್ನು ಕಟ್ಟಲು ಸಾಕಾಗುತ್ತಿಲ್ಲವಾದ್ದರಿಂದ ಸರ್ಕಾರವು ಇದನ್ನು ಕಟ್ಟಲು ಹೊಸ ಸಾಲಗಳನ್ನು ಮಾಡುವಂತಾಗಿದೆ. 2000 ದ ಏಪ್ರಿಲ್-ಆಗಸ್ಟ್ ಸಮಯಕ್ಕೆ ದೇಶ ಪಾವತಿಸಬೇಕಾದ ಸಾಲ 350 ಕೋಟಿ ಡಾಲರುಗಳು. ವಿಶ್ವಬ್ಯಾಂಕ್ ಹೊಸದಾಗಿ ಕೊಡುವುದಾಗಿ ಹೇಳಿರುವ 300 ಕೋಟಿ ರೂ.ಗಳ ಸಾಲದ ಆಶ್ವಾಸನೆಯು ಹಳೆಯ ಸಾಲವನ್ನು ಕಟ್ಟಬೇಕಾಗುತ್ತದೆ. ಈ ರೀತಿ ದೇಶದ ಸಾಲದ ಬಲೆಗೆ(Debt Trap)ಗೆ ಸಿಕ್ಕಿಕೊಂಡಿದೆ.

ತಮ್ಮ ಸೈನಿಕ ಬಲದಿಂದ ಜಗತ್ತಿನ ದೇಶಗಳ ಮೇಲೆ ಅಧಿಪತ್ಯವನ್ನು ಸಾಧಿಸಲು ಅಮೆರಿಕಾ ಅನುಸರಿಸುತ್ತಿರುವ ನೀತಿಗಳ ಅಪಾಯಗಳ ಬಗ್ಗೆ ಹೆಚ್ಚಿನ ದೇಶಗಳು ಗುರುತಿಸುತ್ತಿವೆ. ಅಂತರಿಕ್ಷವನ್ನು ಕೂಡಾ ಆಯುಧಾಗಾರವಾಗಿ ಮಾರ್ಪಡಿಸುವ ಅಮೆರಿಕಾದ ಬಯಕೆಯು ಮಾನವ ಅಭಿವೃದ್ಧಿಗೆ ಅಡ್ಡಿಯಾಗಲಿದೆ. ಇದಕ್ಕೆ ಮಿಗಿಲಾಗಿ ಅಮೆರಿಕಾದ ನೀತಿಗಳು ಜಗತ್ತಿನ ದೇಶಗಳ ಸಾರ್ವಭೌಮತೆ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕೆ ಪೂರಕವಾಗಿದೆ.

ಅಮೆರಿಕಾದ ಸಾಮ್ರಾಜ್ಯವಾದಕ್ಕೆ ವಿರುದ್ಧವಾಗಿ ವಿಶಾಲ ಪ್ರಜಾಪ್ರಭುತ್ವ ಚಳುವಳಿಯನ್ನು ಕಟ್ಟಬೇಕಾಗಿದೆ. ಇದರಲ್ಲಿ ಸಿಐಟಿಯು ಮುಂಚೂಣಿ ಪಾತ್ರ ವಹಿಸಬೇಕಾಗಿದೆ.

ಎರಡನೇ ತಲೆಮಾರಿನ ಸುಧಾರಣೆಗಳನ್ನು ಜಾರಿಗೆ ತರುವ ಭಾಗವಾಗಿ ಹಣಕಾಸು-ಸಂಸ್ಥೆಗಳು, ಟೆಲಿಕಾಂ, ವಿದ್ಯುತ್, ಕಲ್ಲಿದ್ದಲು, ಬಂದರು, ಇಂಡಿಯನ್ ಏರ್‌ಲೈನ್ಸ್ ಮುಂತಾದವುಗಳನ್ನು ನಾಮಮಾತ್ರ ಬೆಲೆಗೆ ದೇಶ-ವಿದೇಶಗಳ ಗುತ್ತೇದಾರಿ ಬಂಡವಾಳದಾರರಿಗೆ ಒಪ್ಪಿಸಲಾಗುತ್ತಿದೆ. ಸಣ್ಣ ಉದ್ದಿಮೆಗಳು ನಶಿಸಿಹೋಗುತ್ತಿವೆ. ಮುಕ್ತ ಆಮದು ನೀತಿಯಿಂದಾಗಿ ಸಾಂಪ್ರದಾಯಿಕ ಮತ್ತು ಕೃಷಿ ಉತ್ಪನ್ನಗಳ ತೊಂದರೆಗೊಳಗಾಗಿದ್ದು ಬೆಲೆಗಳು ಕುಸಿದು ಹೋಗಿವೆ. ನಮ್ಮ ಆಹಾರ ಭದ್ರತೆ ಮತ್ತು ಸ್ವಾವಲಂಬನೆಯನ್ನು ಇದು ನಾಶ ಮಾಡುತ್ತದೆ. ಕೆಲಸದ ಅವಕಾಶಗಳಿಲ್ಲದೆ ನಿರುದ್ಯೋಗಿ ಯುವಜನರು ತೀವ್ರ ನಿರಾಶೆ ಮತ್ತು ಅತೃಪ್ತಿಯಿಂದ ಬಳಲುತ್ತಿದ್ದಾರೆ. ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಮುಚ್ಚುತ್ತಿರುವುದು ಮತ್ತು ನೇಮಕಾತಿಯ ಮೇಲೆ ನಿಷೇಧ ಹೇರಿರುವುದರಿಂದ ನಿರುದ್ಯೋಗ ಪರಿಸ್ಥಿತಿ ಬಿಗಡಾಯಿಸುತ್ತಿದೆ.

ಹೋರಾಟದ ಪರ್ವವಿದು-ಐಕ್ಯತೆಯನ್ನು ಕಾಪಾಡಿ

ಪ್ರಧಾನ ಕಾರ್ಯದರ್ಶಿ ಕಾ: ಎಂ.ಕೆ.ಪಂಧೆಯುವರು ತಮ್ಮ ವರದಿಯನ್ನು ಮಂಡಿಸುತ್ತಾ ಎಲ್ಲಾ ರಾಜ್ಯದಲ್ಲೂ ಕಾರ್ಮಿಕವರ್ಗ ನಡೆಸುತ್ತಿರುವ ಹೋರಾಟಗಳನ್ನು ಖಾಸಗೀಕರಣದ ವಿರುದ್ಧ ಹೆಚ್ಚುತ್ತಿರುವ ಪ್ರತಿರೋಧವನ್ನು ಸಂಘಟಿಸಿ ಬೆಳೆಸಬೇಕೆಂದು ಕರೆ ನೀಡಿದರು. ಕಾರ್ಮಿಕವರ್ಗ ಎದುರಿಸುತ್ತಿರುವ ಸಮಸ್ಯೆಗಳು, ಸವಾಲುಗಳು, ಹೋರಾಟಗಳು, ಅದರಲ್ಲಿ ಸಿಐಟಿಯು ಪಾತ್ರ, ಮತ್ತಷ್ಟು ಬಲಿಷ್ಠವಾಗಬೇಕಾದ ಅಗತ್ಯತೆ, ಪರಿಹರಿಸಿಕೊಳ್ಳಬೇಕಾದ ನ್ಯೂನತೆಗಳು ಮುಂತಾದವುಗಳನ್ನು ಪಂಧೆಯವರು ಪ್ರತಿನಿಧಿಗಳ ಮುಂದಿರಿಸಿದರು.

ಆರ್ಥಿಕ ಪರಿಸ್ಥಿತಿಯನ್ನು ವಿವರಿಸುತ್ತಾ ಬಹುರಾಷ್ಟ್ರೀಯ ಕಂಪನಿಗಳಿಗೆ ಶರಣಾಗುತ್ತಿರುವುದು, ಕೈಗಾರಿಕೆ ಮತ್ತು ಮೂಲ ರಚನೆಯ ಬೆಳವಣಿಗೆಯ ಕುಸಿತ, ಕೃಷಿಯಲ್ಲಿ ಬೆಳವಣಿಗೆ ಕುಸಿತ, ವಿದೇಶಿ ವ್ಯಾಪಾರದ ಕುಸಿತ, ವಿದೇಶ ಬಂಡವಾಳದ ಪ್ರಮೆ ನಾಶವಾಗಿರುವುದು, ಕೈಗಾರಿಕಾ ಕುಸಿತವಿದ್ದರೂ ಬಂಡವಾಳದಾರರ ಲಾಭಗಳು ಹೆಚ್ಚಾಗಿರುವುದು, ಕಾರ್ಮಿಕರು ಮತ್ತು ಕೃಷಿಕಾರ್ಮಿಕರ ವೇತನಗಳು ನಿಜವಾದ ಲೆಕ್ಕದಲ್ಲಿ ಕುಸಿದಿರುವುದು, ವಿಪರೀತವಾಗಿ ಹೆಚ್ಚಿರುವ ಬೆಲೆಗಳು, ತೀವ್ರಗೊಳ್ಳುತ್ತಿರುವ ನಿರುದ್ಯೋಗ ಮುಂತಾದವುಗಳನ್ನು ವಿವರಿಸಿದರು.

ಈ ಪರಿಸ್ಥಿತಿ ಬಿಗಡಾಯಿಸುತ್ತಿದ್ದು ಎಲ್ಲಾ ಜನವಿಭಾಗಗಳಲ್ಲೂ, ಮುಖ್ಯವಾಗಿ ಕಾರ್ಮಿಕವರ್ಗದಲ್ಲಿ ಹೋರಾಟಗಳು ತೀವ್ರಗೊಳ್ಳುತ್ತಿವೆ. ಇದೇ ಸಂದರ್ಭದಲ್ಲಿ ಕಾರ್ಮಿಕ ಹಕ್ಕುಗಳ ಮೇಲೆ ದಬ್ಬಾಳಿಕೆಗಳು ಹೆಚ್ಚಾಗುತ್ತಿವೆ. ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ ಈ ಹಿನ್ನೆಲೆಯಲ್ಲೇ ರಚನೆಯಾಗಿವೆ. ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ನಾಶ ಮಾಡುವ ಪ್ರಯತ್ನ ತೀವ್ರಗೊಂಡಿದೆ.

ನಾವಿಂದು ನಡೆಸುತ್ತಿರುವ ಆರ್ಥಿಕ ನೀತಿಗಳ ಹಾಗೂ ಕೋಮುವಾದಿ, ವಿಚ್ಛಿದ್ರಕಾರಿ ಶಕ್ತಿಗಳ

ನಾಯ್ಡು ಸರ್ಕಾರದ ಕಿರುಕುಳ!

ಸಮ್ಮೇಳನವನ್ನು ಯಶಸ್ವಿಯಾಗದಂತೆ ತಡೆಯಲು ನಾಯ್ಡು ಸರ್ಕಾರ ಮಾಡಿದ ಪ್ರಯತ್ನಗಳಾವುವೂ ಯಶಸ್ವಿಯಾಗಲಿಲ್ಲ. ಗೋಡೆಬರಹ ಬರೆವವರ ಮೇಲೆ ಪೋಲೀಸ್ ಕೇಸುಗಳು, ಭಿತ್ತಿ ಪತ್ರ ಅಂಟಿಸಿದರೆ ಕೇಸ್, ಪ್ರತಿನಿತ್ಯ ಪೊಲೀಸ್ ಕೇಸ್‌ಗಳನ್ನು ಹಾಕಿ ಬೆದರಿಸುವುದು.. ಅಷ್ಟು ಮಾತ್ರವಲ್ಲ, ಹೈದರಾಬಾದಿನ ಜನರ ಬೆಂಬಲವನ್ನು ಕಂಡು ಕಮರಿಹೋದ ತೆಲುಗುದೇಶಂನ ನಾಯಕರು ಬೇಕಂತಲೇ ಬಲವಂತವಾಗಿ ಹಣ ಸಂಗ್ರಹ ಮಾಡುತ್ತಿದ್ದಾರೆ ಎಂದು ಹೈದರಾಬಾದ್ ಸಿಐಟಿಯು ಕಾರ್ಯದರ್ಶಿ ಮೇಲೆ ಸುಳ್ಳು ಕೇಸ್ ಹಾಕಿ ಜೈಲಿಗೆ ಕಳುಹಿಸಿದರು. ನಗರದ ಸಹಾಯಕ ಪೊಲೀಸ್ ಕಮಿಷನರ್ ಸಿಐಟಿಯು ಕಛೇರಿಗೆ ನುಗ್ಗಿ ಕೆಲವು ಮುಖಂಡರನ್ನು ಬಂಧಿಸಬೇಕೆಂಬ ಬೆದರಿಕೆ ಹಾಕಿದ್ದೂ ಉಂಟು. 31 ರಂದು ನಡೆದ ಬಹಿರಂಗ ಸಭೆಗೆ ವಿವಿಧ ಜಿಲ್ಲೆಗಳಿಂದ ಜನರು ಬರದಂತೆ ತಡೆಯಲು ಕಿರುಕುಳಗಳನ್ನು ಸರ್ಕಾರ ನಡೆಸಿತು.

ಆದರೆ ನಾಯ್ಡು ಸರ್ಕಾರದ ಎಲ್ಲಾ ಕಿರುಕುಳಗಳನ್ನೂ, ದಬ್ಬಾಳಿಕೆಗಳನ್ನೂ ಜನ ತಿರಸ್ಕರಿಸಿದರು. 31 ರಂದು ನಡೆದ ಬಹಿರಂಗ ಸಭೆಯಲ್ಲಿ 50 ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಳ್ಳುವುದರ ಮೂಲಕ ಸಿಐಟಿಯು ಹೋರಾಟವನ್ನು ಜನ ಬೆಂಬಲಿಸಿದರು.

ಪ್ರಭುತ್ವದ ಅಧಿಕಾರ ದುರುಪಯೋಗ ಮಾಡಿಕೊಂಡು ಬಿಜೆಪಿ-ಆರ್‌ಎಸ್‌ಎಸ್‌ಗಳು ಕೊಂಡೊಯ್ಯುತ್ತಿರುವ ಕೋಮುವಾದವು ಹೊಸರೂಪಗಳನ್ನು ಪಡೆಯುತ್ತಿದೆ.ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ದೇವಸ್ಥಾನ ಕಟ್ಟಬೇಕಾಗಿದೆ ಎಂದು ವಾಜಪೇಯಿ ನೇರವಾಗಿ ಹೇಳುತ್ತಿದ್ದಾರೆ. ಆರ್‌ಎಸ್‌ಎಸ್ ನ ಅಜೆಂಡಾವನ್ನು ಜಾರಿಗೊಳಿಸುವ ವಾಜಪೇಯಿ ಸರ್ಕಾರದ ಈ ಗಂಡಾಂತರಕಾರಿ ಪ್ರಯತ್ನವನ್ನು ತಡೆಯಲು ಕಾರ್ಮಿಕವರ್ಗ ಒಟ್ಟಾಗಬೇಕಾಗಿದೆ ಎಂದು ಬಾಲಾನಂದನ್‌ರವರು ಹೇಳಿದರು.

ಪ್ರತಿನಿಧಿಗಳು

ಸಿಐಟಿಯುನ ಚರಿತ್ರೆಯಲ್ಲೇ ಅತ್ಯಂತ ಹೆಚ್ಚು ಪ್ರತಿನಿಧಿಗಳು ಹೈದಾರಾಬಾದಿನ 10ನೇ ಸಮ್ಮೇಳನದಲ್ಲಿ ಭಾಗವಹಿಸಿದ್ದರು. 21 ರಾಜ್ಯಗಳಿಂದ 2603 ಪ್ರತಿನಿಧಿಗಳು ಮತ್ತು ವೀಕ್ಷಕರು ಭಾಗವಹಿಸಿದ್ದರು. 15 ಸಹೋದರ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಎಐಟಿಯುಸಿ, ಹೆಚ್‌ಎಂಎಸ್ ಮತ್ತು ಟಿಯುಸಿಸಿ ಸಂಘಟನೆಗಳಿಂದ ಸೌಹಾರ್ದವಾಗಿ ಭಾಗವಹಿಸಿದ್ದರು.

ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ, ಫಿಲಿಫೈನ್ಸ್, ವಿಯೆಟ್ನಾಂ, ಜಪಾನ್, ಫ್ರಾನ್ಸ್ ದೇಶಗಳಿಂದ ಹಾಗೂ ಸಿಗ್ಟೂರ್(Sigtur) ಮತ್ತು IUF ನಿಂದ 23 ವಿದೇಶದ ಪ್ರತಿನಿಧಿಗಳು ಭಾಗವಹಿಸಿ ಶುಭಕೋರಿದರು. ಜಗತ್ತಿನಾದ್ಯಂತ ಜಾಗತೀಕರಣದ ವಿರುದ್ಧ ಹೆಚ್ಚುತ್ತಿರುವ ಪ್ರತಿರೋಧದ ಬಗ್ಗೆ ತಿಳಿಸಿದರು. ಜಗತ್ತಿನ ವಿವಿಧ ದೇಶಗಳ ಕಾರ್ಮಿಕ ಸಂಘಟನೆಗಳು ಹೆಚ್ಚೆಚ್ಚು ಸಮನ್ವಯದೊಂದಿಗೆ ಹೋರಾಟಗಳನ್ನು ನಡೆಸಬೇಕೆಂಬ ಆಶಯವನ್ನು ಇವರು ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಭಾರತದೊಳಗೆ ಸಿಐಟಿಯು ನಡೆಸುತ್ತಿರುವ ಹೋರಾಟಗಳನ್ನು ಪ್ರಶಂಸಿಸಿದರು.

ಇವರಲ್ಲದೆ ಚೈನಾ, ಕ್ಯೂಬಾ, ರಷ್ಯಾ, ಇಟಲಿ, ಇಂಗ್ಲೆಂಡ್, ಇರಾಕ್, ಕೊರಿಯಾ, ಸೈಪ್ರಸ್ ದೇಶಗಳ ಕಾರ್ಮಿಕ ಸಂಘಟನೆಗಳು ಶುಭ ಸಂದೇಶಗಳನ್ನು ಕಳುಹಿಸಿದ್ದರು.

ಮಹಿಳಾ ಪ್ರತಿನಿಧಿಗಳನ್ನು ಶೇ 15 ರಷ್ಟು ಕರೆತರಬೇಕೆನ್ನುವ ತೀರ್ಮಾನಕ್ಕಿಂತಲೂ ಹೆಚ್ಚಿನ ಪ್ರತಿನಿಧಿಗಳು ಕರೆದುಕೊಂಡು ಹೋಗಿದ್ದಕ್ಕೆ ಪ್ರಶಂಸೆ ನೀಡಲಾಯಿತು.



ಕ್ಯ : ಜನರ ನೋವಿಗೆ ಪ್ರತಿಧ್ವನಿ

ವರದಿ - **ಕೆ.ಪ್ರಕಾಶ್**

ಪ್ರದೇಶಗಳ ಹೆಚ್ಚೆಚ್ಚು ಕಾರ್ಮಿಕರ ಬೆಂಬಲವನ್ನು ಪಡೆಯುತ್ತಿದೆ. ರಾಷ್ಟ್ರವ್ಯಾಪಿ ಹೋರಾಟಗಳ ಅಲೆಗಳು ಮೇಲೇಳುತ್ತವೆ. ವಿಶ್ವಬ್ಯಾಂಕ್ ದೊರೆಗಳ ದೇಶೀಯ ಆಜ್ಞಾಪಾಲಕರ ಎಲ್ಲಾ ದಾಳಿ ದಬ್ಬಾಳಿಕೆಗಳನ್ನು ಎದುರಿಸಿ ವಿದ್ಯುತ್, ಟೆಲಿಕಾಂ, ಪೋಸ್ಟಲ್, ಬ್ಯಾಂಕ್ ಮತ್ತು ವಿಮಾ, ಕಲ್ಲಿದ್ದಲು ಕಾರ್ಮಿಕರು ನಡೆಸಿದ ಹೋರಾಟಗಳು ಮುಂಬರುವ ಬೃಹತ್ ಹೋರಾಟಗಳ ಸೂಚನೆಯಾಗಿದೆ. ಅತ್ಯಂತ ವೇಗವಾಗಿ ಬದಲಾಗುತ್ತಿರುವ ಪರಿಸ್ಥಿತಿಯು ಹೆಚ್ಚೆಚ್ಚು

2. ಸಾಮ್ರಾಜ್ಯಶಾಹಿಯ ಆರ್ಥಿಕ ದಾಳಿ, 3. ಕೋಮುವಾದದ ವಿರುದ್ಧ ಹೋರಾಟ ಮತ್ತು ಕಾರ್ಮಿಕ ಚಳುವಳಿಯ ಜವಾಬ್ದಾರಿ, 4. ಜಾತಿ ಮತ್ತು ಸಾಮಾಜಿಕ ದಬ್ಬಾಳಿಕೆಗಳು, 5. ದುಡಿಯುವ ಮಹಿಳೆ-ಒಂದು ವರ್ಗ ದೃಷ್ಟಿಕೋನ, 6. ಅನೌಪಚಾರಿಕ ಕ್ಷೇತ್ರದ ಆರ್ಥಿಕತೆ ಮತ್ತು ಕಾರ್ಮಿಕ

ಪ್ರತಿನಿಧಿಗಳು ಮಾತನಾಡಿದರು. ಕರ್ನಾಟಕದಿಂದ ಕಾಂ. ಶಂಕರ್ ಮತ್ತು ಕಾಂ. ವರಲಕ್ಷ್ಮಿ ಮಾತನಾಡಿದರು. ಸಾಧಾರಣವಾಗಿ ಚರ್ಚೆಗಳಲ್ಲಿ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿದರು. ಮತ್ತು ರಾಜ್ಯಗಳ ನಿರ್ದಿಷ್ಟ ಪರಿಸ್ಥಿತಿಯನ್ನು ವಿವರಿಸಿದರು. ಕೈಗಾರಿಕೆಗಳ ನಾಶ, ಕೃಷಿ ಉತ್ಪನ್ನಗಳ ಬೆಲೆ ಕುಸಿತ, ರಿಟ್ರೆಂಚ್‌ಮೆಂಟ್, ಕಾರ್ಮಿಕ ವಿರೋಧಿಯಾಗಿ ಬರುತ್ತಿರುವ ನ್ಯಾಯಾಂಗದ ಮಧ್ಯ ಪ್ರವೇಶಗಳು, ವ್ಯಾಪಕವಾಗಿ

ಹೋರಾಟದ ಹುಮ್ಮಸ್ಸಿನಿಂದ ಸಮ್ಮೇಳನದ ತಯಾರಿ

1919 -ಏಪ್ರಿಲ್ 13 ಪಂಜಾಬಿನ ಜಲಿಯನ್ ವಾಲಾಬಾಗ್ - ಒಂದು ಸಾವಿರಕ್ಕೂ ಹೆಚ್ಚು ಸ್ವಾತಂತ್ರ್ಯ ಪ್ರೇಮಿಗಳ ನರಮೇಧ. ಬ್ರಿಟಿಷ್ ವಸಾಹತುವಾದಿಗಳ ದುಷ್ಟ ರೌಲತ್ ಕಾಯ್ದೆಯ ವಿರುದ್ಧ ಪ್ರತಿಭಟಿಸಲು ಸೇರಿದ್ದವರ ಮೇಲೆ ಬಂದೂಕಿನ ಗುಂಡುಗಳ ರಾಕ್ಷಸ ನರ್ತನ.

2000-ಆಗಸ್ಟ್ 28, ಹೈದರಾಬಾದಿನ ಬಷೀರ್ ಬಾಗ್ - ಸಾವಿರಾರು ಜನರಿಗೆ ಗಾಯಗಳು, 23 ಜನರಿಗೆ ಗುಂಡೇಟು, 3 ಜನರಬಲಿ. ವಿಶ್ವಬ್ಯಾಂಕ್ ಮೂಲಕ ವಿದ್ಯುತ್ ರಂಗವನ್ನು ಕಬಳಿಸಲು ಹೊರಟಿರುವ ಸಾಮ್ರಾಜ್ಯಶಾಹಿಗಳ ಎಂಜಲು ಹಣಕ್ಕೆ ಕಾದುಕೂತ ರಣಹದ್ದಾಗಿರುವ ಚಂದ್ರಬಾಬು ನಾಯ್ಡುವಿನ ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟನೆ ಮಾಡಿದ್ದಕ್ಕೆ ಸಂದ ಪ್ರತಿಫಲ.

ಬಷೀರ್ ಬಾಗ್‌ನಲ್ಲಿ ಸಾವಿರಾರು ಜನರನ್ನು ಕೊಲ್ಲಲಿಲ್ಲ. ಮುಂದೆ ಜನಸಮೂಹದ ಹೋರಾಟದ ಅಲೆಗಳು ಮೇಲೆದ್ದಾಗ ಅಂತಹ ದಮನ ಮಾಡಲೂ ಸಿದ್ಧ ಎಂಬ ಸ್ಯಾಂಪಲ್ ಪ್ರದರ್ಶನವಾಯಿತು. ಸಾವಿರಾರು ಬಂದೂಕಿನ ಗುಂಡುಗಳು ಸ್ವತಂತ್ರವಾಗಿ ಹಾರಾಡಿದ್ದವು.

ಆದರೆ ದಮನಗಳನ್ನು-ದಬ್ಬಾಳಿಕೆಗಳನ್ನು ಸಹಿಸುವುದಿಲ್ಲ, ಸಮಸ್ಯೆಗಳನ್ನು ಎದುರಿಸುತ್ತೇವೆ, ಜಾಗತೀಕರಣವನ್ನು ವಿಶ್ವಬ್ಯಾಂಕಿನ ಶರತ್ತುಗಳನ್ನು ಎದುರಿಸುತ್ತೇವೆಂಬ ದುಡಿಯುವ ಜನರ ದೃಢತೆಗೆ ಅತ್ಯಂತ ಯಶಸ್ವಿಯಾಗಿ ಅಭೂತಪೂರ್ವವಾಗಿ ನಡೆದ ಸಿಐಟಿಯು ಸಮ್ಮೇಳನವು ಸಾಕ್ಷಿ.

ವಿಶ್ವಬ್ಯಾಂಕಿನ ಷರತ್ತಿನಂತೆ ವಿದ್ಯುತ್ ದರಗಳನ್ನು ವಿಪರೀತವಾಗಿ ಏರಿಸಿರುವ ಆಂಧ್ರ ಸರ್ಕಾರದ ವಿರುದ್ಧ ಸಿಪಿಐ(ಎಂ) ನೇತೃತ್ವದಲ್ಲಿ ಸಿಐಟಿಯು ಸೇರಿದಂತೆ ಹಲವಾರು ಪಕ್ಷಗಳು ಮತ್ತು ಸಂಘಟನೆಗಳು ಮೂರು ತಿಂಗಳುಗಳ ಕಾಲ ವ್ಯಾಪಕವಾದ ಪ್ರಚಾರ-ಪ್ರತಿಭಟನೆಗಳನ್ನು ನಡೆಸಿದರೂ ಸರ್ಕಾರ ಪ್ರತಿಕ್ರಿಯೆ ನೀಡದಿದ್ದಾಗ ಆಗಸ್ಟ್ 28 ರಂದು ಚಲೋ ಹೈದರಾಬಾದ್‌ನ್ನು ಸಂಘಟಿಸಿದಾಗ ನಾಯ್ಡು ಸರ್ಕಾರ ಸಾಮ್ರಾಜ್ಯಶಾಹಿಗಳನ್ನು ಓಲೈಸಲು ಕೈಗೊಂಡ ಕ್ರಮವಿದು.

ಆದರೆ ಸಿಐಟಿಯು ಮತ್ತು ಎಡಪಕ್ಷಗಳು ನಡೆಸಿರುವ ಹೋರಾಟದ ಛಾಯೆ ಆಂಧ್ರದ ಜನರ ಮನಸ್ಸಿನಲ್ಲಿ ಇನ್ನೂ ಹಾಗೇ ಇದೆ. ಈ ಜನಪರ ಹೋರಾಟಗಳು ಕಾರ್ಮಿಕವರ್ಗದಲ್ಲಿ ಅದ್ಭುತವಾದ ಜಾಗೃತಿಯನ್ನು ಚೈತನ್ಯವನ್ನು ತಂದುಕೊಟ್ಟಿದೆ. ಈ ಹಿನ್ನಲೆಯಲ್ಲಿ ಸಿಐಟಿಯು 10ನೇ ಸಮ್ಮೇಳನ ಜರುಗಿದೆ. ಕಳೆದ 3 ತಿಂಗಳಿಂದ ನೂರಾರು ಸಭೆಗಳು, ಹತ್ತಾರು ತಂಡಗಳಿಂದ ರಾಜ್ಯಾದ್ಯಂತ ಬೀದಿ ನಾಟಕಗಳು, ಹಾಡುಗಳು, ವಿಚಾರ - ಸಂಕಿರಣಗಳು, ಹತ್ತು ಲಕ್ಷಕ್ಕೂ ಮೀರಿ ಕರಪತ್ರಗಳು, ವ್ಯಾಪಕ ಗೋಡೆಬರಹಗಳು, ಪೋಸ್ಟರ್ಸ್, ಬಂಟಿಂಗ್ಸ್, ಬ್ಯಾನರ್ಸ್‌ಗಳೊಂದಿಗೆ ಅದ್ಭುತ ತಯಾರಿಯನ್ನು ನಡೆಸಲಾಯಿತು.

ಸಮ್ಮೇಳನಕ್ಕೆ 20 ಜಿಲ್ಲೆಗಳಿಂದ ಬಂದಿದ್ದ 500 ಕ್ಕೂ ಹೆಚ್ಚು ಸ್ವಯಂ ಸೇವಕರು ನಿರ್ವಹಿಸಿದ ಉತ್ಸಾಹಯುತ ಕೆಲಸವು ಪ್ರಶಂಸನೀಯವಾದದ್ದು. ಪ್ರತಿನಿಧಿಗಳ ಒಂದೊಂದು ಅಗತ್ಯಕ್ಕೂ ಸ್ಪಂದಿಸುತ್ತಾ ಚುರುಕಾಗಿ ಓಡಾಡುತ್ತಿದ್ದ ಸಣ್ಣ ವಯಸ್ಸಿನ ಹುಡುಗ-ಹುಡುಗಿಯರನ್ನು ಕಂಡು ಅಭಿಮಾನ ಪಡದವರಾರು? ಆಗಸ್ಟ್ 28 ರ ಹೋರಾಟದಲ್ಲಿ ಪೋಲೀಸ್ ದಬ್ಬಾಳಿಕೆಯೆದುರು ದೃಢವಾಗಿ ನಿಂತರವರಲ್ಲಿ ಇವರೂ ಇದ್ದರು ಎಂಬ ಸಂಗತಿ ಮತ್ತಷ್ಟು ಅಭಿಮಾನವನ್ನು ಮೂಡಿಸುತ್ತಿತ್ತು.

ಆಂಧ್ರ ಪ್ರಜಾನಾಟ್ಯ ಮಂಡಳಿಯವರು ವಿಶೇಷವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ವೀರ ತೆಲಂಗಾಣ ಹೋರಾಟದ ಕುರಿತ ಬೀದಿ ನಾಟಕವಂತೂ ರೋಮಾಂಚನವನ್ನುಂಟು ಮಾಡಿತು. ತೆಲುಗು ಚಿತ್ರರಂಗದ ಹಲವಾರು ನಟರುಗಳೂ ಇವುಗಳಲ್ಲಿ ಭಾಗವಹಿಸಿದ್ದರು. ಆಗಸ್ಟ್ 28 ರ ವಿದ್ಯುತ್ ಏರಿಕೆ ವಿರುದ್ಧ ಹೋರಾಟದ ವೀಡಿಯೋ ಕ್ಯಾಸೆಟ್‌ನ್ನು ಪ್ರತಿನಿಧಿಗಳಿಗೆ ವಿಶೇಷವಾಗಿ ತೋರಿಸಲಾಯ್ತು. ಪೋಲೀಸ್ ದೌರ್ಜನ್ಯಗಳ, ಅಮಾನವೀಯ ಕ್ರೌರ್ಯಗಳ ಫೋಟೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಪ್ರಜಾಶಕ್ತಿ ಬುಕ್‌ಹೌಸ್‌ನವರ ಪುಸ್ತಕ ಪ್ರದರ್ಶನ ದೊಡ್ಡ ಸಂಖ್ಯೆಯಲ್ಲಿ ಪ್ರತಿನಿಧಿಗಳನ್ನು ಆಕರ್ಷಿಸಿತು. ಹಣಕಾಸು ಸಂಗ್ರಹದ ಕಥೆ ಕರ್ನಾಟಕದಂತಹ ರಾಜ್ಯಗಳಿಗಂತೂ ಒಂದು ಅಮೂಲ್ಯವಾದ ಪಾಠ. ಸುಮಾರು 4 ಕೋಟಿ ರೂ.ಗಳಿಗೂ ಹೆಚ್ಚು ಸಂಗ್ರಹ! ಆಂಧ್ರದ ಜನತೆ, ಮುಖ್ಯವಾಗಿ ಹೈದರಾಬಾದಿನ ಕಾರ್ಮಿಕವರ್ಗ ಮತ್ತು ಸಾಮಾನ್ಯ ಜನ ಹಣ ನೀಡಲು ನಿರಾಕರಿಸಿದ ಉದಾಹರಣೆಗಳೇ ಇಲ್ಲ. ಮುಂದಿನ ಹೋರಾಟಗಳ ಮತ್ತು ಸಂಘಟನೆಯ ಬೆಳವಣಿಗೆಗೆ ಅದ್ಭುತ ಚೈತನ್ಯ - ತಾಕತ್ತು ಸೃಷ್ಟಿಯಾಗಿದೆ.

ಅನುಕೂಲಕರವಾಗಿ ಪರಿಣಮಿಸುತ್ತಿದೆ. ಈ ಸವಾಲುಗಳನ್ನು ಸ್ವೀಕರಿಸಲು ನಮ್ಮ ಸಂಘಟನಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ ಎಂದು ಸ್ವವಿಮರ್ಶಾತ್ಮಕವಾಗಿ ವರದಿಯಲ್ಲಿ ತಿಳಿಸಿದರು.

ಸಂಘಟನೆ

ಅಖಿಲ ಭಾರತ ಕೇಂದ್ರದ ಜವಾಬ್ದಾರಿ ಮತ್ತು ಗುರಿಗಳು, ರಾಜ್ಯ ಸಮಿತಿಗಳು, ಸದಸ್ಯತ್ವ ವಿಸ್ತರಣೆ ಮತ್ತು ಸಂಘಟನೆ, ಪ್ರಜಾಸತ್ತಾತ್ಮಕ ಕೆಲಸ ನಿರ್ವಹಣೆ, ಶಿಕ್ಷಣ, ಕಾರ್ಯಕರ್ತರ ತರಬೇತಿ, ಸೈದ್ಧಾಂತಿಕ ಕೆಲಸ, ಕೈಗಾರಿಕಾವಾರು ಒಕ್ಕೂಟಗಳು, ದುಡಿಯುವ ಮಹಿಳೆ ಈ ಮುಂತಾದ ಅಂಶಗಳ ಬಗ್ಗೆ ವಿವರವಾದ ವರದಿಯನ್ನು ಮತ್ತು ಇವುಗಳಿಗೆ ಸಂಬಂಧಿಸಿ ಗುರಿಗಳನ್ನು ನಿಗದಿಪಡಿಸಿದ ಸಂಘಟನಾ ವರದಿಯನ್ನು ಕಾಂ. ಕನ್ಯಾ ಬ್ಯಾನರ್ಜಿಯವರು ಮಂಡಿಸಿದರು.

ಆಯೋಗಗಳು

1. ಸಾಮ್ರಾಜ್ಯಶಾಹಿಯ ಸೈದ್ಧಾಂತಿಕ ದಾಳಿ, ಚಳುವಳಿ ಮುಂದಿರುವ ಸವಾಲುಗಳು 7. ನಿರುದ್ಯೋಗ ಮತ್ತು ಕಾರ್ಮಿಕ ಚಳುವಳಿಯ ಮುತುವರ್ಜಿ.

ಚರ್ಚೆಗಳು

ಪ್ರಧಾನ ಕಾರ್ಯದರ್ಶಿಯವರ ವರದಿಯ ಮೇಲೆ ಎಲ್ಲಾ ರಾಜ್ಯಗಳನ್ನು ಪ್ರತಿನಿಧಿಸಿ 42 ಬೆಳೆಯುತ್ತಿರುವ ಹೋರಾಟಗಳು, ಜಾಗತೀಕರಣ-ಖಾಸಗೀಕರಣ ವಿವಿಧ ಆಯಾಮಗಳ ಪರಿಣಾಮಗಳನ್ನು ಪ್ರತಿನಿಧಿಗಳು ತಮ್ಮ ಚರ್ಚೆಯಲ್ಲಿ ತಿಳಿಸಿದರು.

ಸಂಘಟನಾ ವರದಿಯ ಮೇಲೆ ನಡೆದ ಚರ್ಚೆಯಲ್ಲಿ 17 ಜನ ಮಾತನಾಡಿದರು. ಕರ್ನಾಟಕದಿಂದ ಕಾಂ. ವಿ.ಜೆ.ಕೆ.ನಾಯರ್ ಮಾತನಾಡಿದರು. ಅತ್ಯಂತ ತೀಕ್ಷ್ಣವಾಗಿ ನಡೆದ ಈ ಚರ್ಚೆಯಲ್ಲಿ ಬದಲಾಗುತ್ತಿರುವ ಸಂದರ್ಭಕ್ಕೆ ಸರಿಯಾಗಿ ಕೆಲಸ ಮಾಡುವ ರೀತಿಯಲ್ಲಿ ಸಂಘಟನೆಯನ್ನು ಕಟ್ಟುವ ಮಹತ್ವದ ಬಗ್ಗೆ ಚರ್ಚೆಗಳು ನಡೆದವು.

ಏಳು ಪ್ರತ್ಯೇಕ ಅಂಶಗಳ ಬಗ್ಗೆ ರಚಿಸಲಾಗಿದ್ದ ಆಯೋಗವಾರು ಚರ್ಚೆಗಳು ಮಹತ್ವದ್ದಾಗಿದ್ದವು. ಇಡೀ ಸಮ್ಮೇಳನದ ಪ್ರತಿನಿಧಿಗಳನ್ನು ಏಳು ಭಾಗಗಳಾಗಿ ವಿಂಗಡಿಸಿ ಇಡೀ ಒಂದು ದಿನ ಚರ್ಚೆಗಳನ್ನು ನಡೆಸಲಾಯಿತು. ಈ ಮೂಲಕ ಅತ್ಯಂತ ಹೆಚ್ಚಿನ ಪ್ರತಿನಿಧಿಗಳನ್ನು ಚರ್ಚೆಗಳಲ್ಲಿ ತೊಡಗಿಸುವ ಪ್ರಯತ್ನ ನಡೆಯಿತು. ಒಟ್ಟಾರೆ ಚರ್ಚೆಗಳ ಸಾರಾಂಶವನ್ನು ಮತ್ತು ಮುಂದಿನ ಗುರಿಗಳನ್ನು ಪ್ರತಿ ಆಯೋಗದ ಅಧ್ಯಕ್ಷರು ನಂತರ ಸಮ್ಮೇಳನಕ್ಕೆ ತಿಳಿಸಿದರು.

ಪ್ರಜಾಸತ್ತಾತ್ಮಕವಾಗಿ ನಡೆದ ಚರ್ಚೆಗಳ ಆಧಾರದಲ್ಲಿ ಕಾರ್ಯದರ್ಶಿ ವರದಿ, ಸಂಘಟನಾ ವರದಿ ಮತ್ತು ಆಯೋಗವಾರು ವರದಿಗಳನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು. ○

ನಿರ್ಣಯಗಳು

- ಜನವರಿ 24: ಅಗತ್ಯ ವಸ್ತುಗಳ ಏರುತ್ತಿರುವ ಬೆಲೆಗಳು, ಕಾರ್ಮಿಕರು ಮತ್ತು ಅವರ ಹೋರಾಟಗಳ ಮೇಲೆ ಹೆಚ್ಚುತ್ತಿರುವ ದಾಳಿಗಳು, ಕಾರ್ಮಿಕ ಕಾನೂನುಗಳಲ್ಲಿ ತೀವ್ರ ಬದಲಾವಣೆಗಳು, ಸರ್ಕಾರಿ ಮತ್ತು ಇತರೆ ಎಲ್ಲಾ ವಲಯಗಳಲ್ಲಿನ ಕೈಗಾರಿಕೆಗಳಲ್ಲಿ ಉದ್ಯೋಗ ಕಡಿತ ಹಾಗೂ ಕೈಗಾರಿಕಾ ರೋಗಗ್ರಸ್ತತೆಯ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನಾ ದಿನ.
- ಫೆಬ್ರವರಿ-7: ರೈತರು ಮತ್ತು ಕೃಷಿ ಕಾರ್ಮಿಕರು ಫೆ.5 ರಿಂದ 7 ರವರೆಗೆ ನಡೆಸುವ ಹೋರಾಟಕ್ಕೆ ಸೌಹಾರ್ದ ಬೆಂಬಲ. 7 ರಂದು ಕೇಂದ್ರ ಮತ್ತು ರಾಜ್ಯ ಸರ್ಕಾರಿ ಕಛೇರಿಗಳನ್ನು ಸಿಐಟಿಯು ಕಾರ್ಮಿಕರು ಪಿಕೆಟಿಂಗ್ ಮಾಡುವುದು.
- ಆರ್ಥಿಕ ನೀತಿಗಳು, ಕೋಮುವಾದ, ಪ್ರತ್ಯೇಕವಾದದ ವಿರುದ್ಧ ನಿರಂತರವಾದ ಹೋರಾಟಗಳನ್ನು ನಡೆಸುವುದು.
- ಜನವರಿ 10 ರಂದು ನಡೆಯುವ ರಾಜ್ಯ ಸರ್ಕಾರಿ ನೌಕರರ ಮುಷ್ಕರಕ್ಕೆ ಬೆಂಬಲ
- ಅಪಾಯಕಾರಿ ಔಷಧಿಗಳ ಮಾರಾಟ ಮತ್ತು ಔಷಧಿಗಳ ಕಳ್ಳದಾಸ್ತಾನನ್ನು ರದ್ದು ಪಡಿಸಬೇಕೆಂದು ಒತ್ತಾಯಿಸಿ FMRAI ಜನವರಿ 8 ರಿಂದ 12 ವರೆಗೆ ನಡೆಸುವ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಬೆಂಬಲ.
- ಸಂಘಟನಾ ನ್ಯೂನತೆಗಳಿಂದ ಹೊರಬರುವುದು. ಸದಸ್ಯತ್ವವನ್ನು 32 ಲಕ್ಷದಿಂದ 40 ಲಕ್ಷಕ್ಕೆ ಏರಿಸುವುದು. ಇವುಗಳಿಗೆ ಪೂರಕವಾಗಿ 1993 ರ ಭುವನೇಶ್ವರ ದಸ್ತಾವೇಜನ್ನು ಜಾರಿಗೊಳಿಸುವುದು.

ನೂತನ ಸಮಿತಿ

ಸಮ್ಮೇಳನವು 35 ಸದಸ್ಯರ ಸೆಕ್ರೆಟಾರಿಯೇಟ್‌ನ್ನು ಆಯ್ಕೆ ಮಾಡಿತು. (ಕಳೆದ ಬಾರಿ ಈ ಸಂಖ್ಯೆ 37 ಇತ್ತು). ಅಧ್ಯಕ್ಷರಾಗಿ ಇ.ಬಾಲಾನಂದನ್, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಕೆ.ಪಂಧೆಯವರು ಪುನರಾಯ್ಕೆಯಾದರು. ಹಳೆಯ ಸೆಕ್ರೆಟಾರಿಯೇಟ್‌ನಲ್ಲಿದ್ದ ಆರು ಸದಸ್ಯರನ್ನು ಹಲವಾರು ಕಾರಣಗಳಿಗೆ ಕೈಬಿಟ್ಟು 4 ಹೊಸ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳಲಾಯ್ತು. ಇದೇ ಸಂದರ್ಭದಲ್ಲಿ 470 ಸದಸ್ಯರ ಜನರಲ್ ಕೌನ್ಸಿಲ್ ಮತ್ತು 139 ಸದಸ್ಯರ ವರ್ಕಿಂಗ್ ಕಮಿಟಿಯನ್ನು ಆಯ್ಕೆ ಮಾಡಲಾಯಿತು.

ಕರ್ನಾಟಕದಿಂದ 11 ಜನ ಜನರಲ್ ಕೌನ್ಸಿಲ್ ಸದಸ್ಯರು ಅದರಲ್ಲಿ 3 ವರ್ಕಿಂಗ್ ಕಮಿಟಿ ಸದಸ್ಯರು ಆಯ್ಕೆಯಾದರು.

ಕಾಂ. ಎಸ್.ಸೂರ್ಯನಾರಾಯಣರಾವ್ ಅವರು ಅಖಿಲ ಭಾರತ ಉಪಾಧ್ಯಕ್ಷರಾಗಿ ಪುನರಾಯ್ಕೆಯಾದರು.ವಿ.ಜೆ.ಕೆ. ನಾಯರ್, ಬಿ.ಮಾಧವ, ಇ.ಕೆ.ಎನ್.ರಾಜನ್ ಇವರು ವರ್ಕಿಂಗ್ ಕಮಿಟಿ ಸದಸ್ಯರಾಗಿ, ಪ್ರಸನ್ನ ಕುಮಾರ್, ಮೀನಾಕ್ಷಿ ಸುಂದರಂ, ಗೋಪಾಲಗೌಡ ಹೆಚ್.ಎನ್., ಸುಕುಮಾರ್, ಜೆ.ಬಾಲಕೃಷ್ಣ ಶೆಟ್ಟಿ, ಎಸ್.ವರಲಕ್ಷ್ಮಿ ಮತ್ತು ಸೈಯಬ್ ಮುಜೀಬ್ ಇವರುಗಳು ಜನರಲ್ ಕೌನ್ಸಿಲ್ ಸದಸ್ಯರಾಗಿ ಆಯ್ಕೆಗೊಂಡರು.







ಕರ್ನಾಟಕದಿಂದ ಆಯ್ಕೆಯಾದ ವರ್ಕಿಂಗ್ ಕಮಿಟಿ ಸದಸ್ಯರು







ತ್ರಿಪುರಾ: ಹೊಸ ಗೆಲುವು ಸಾಧಿಸಿದ ಎಡರಂಗ

ತ್ರಿಪುರಾದ ನಗರ ಪಂಚಾಯತ್ ಚುನಾವಣೆಗಳಲ್ಲಿ ಈ ಬಾರಿ ಎಡರಂಗ ಅಭೂತಪೂರ್ವ ಯಶಸ್ಸನ್ನು ಸಾಧಿಸಿದೆ. ಕೇಂದ್ರ ಸರ್ಕಾರದ ತಾರತಮ್ಯ ಜನತೆಯ ಬಗ್ಗೆ ಕಡು ದ್ವೇಷ, ತೀವ್ರ ಅನಭಿವೃದ್ಧಿ, ಸೀಮಿತ ಸಂಪನ್ಮೂಲಗಳನ್ನೇ ಬಳಸಿ ಸಾಗಬೇಕಾದ ಅನಿವಾರ್ಯ ಹಾದಿ, ಛಿದ್ರಕಾರಿ, ಪ್ರತ್ಯೇಕತಾವಾದಿಗಳ ಸತತ ಧಾಳಿ, ಕೊಲೆ, ಅನ್ಯಭಾಷಿಕರ ವಿರುದ್ಧ ಬುಡಕಟ್ಟು ಜನರನ್ನು ಎತ್ತಿ ಕಟ್ಟುವ, ಜನಾಂಗೀಯ ಕಲಹ ಹಬ್ಬಿಸುವ ಪ್ರಯತ್ನಗಳು, ದೇಶದ ಒಳಗೂ ಹಾಗೂ ಹೊರಗಿನಿಂದ ಎಡರಂಗ ಸರ್ಕಾರವನ್ನು ಅಸ್ಥಿರಗೊಳಿಸುವ ಹಲವು ಪಿತೂರಿಗಳು... ಈ ನಡುವೆಯೇ ಎಡರಂಗ ಸರ್ಕಾರ ನಗರವಲಯದಲ್ಲಿಯೂ ಅಪಾರ ಜನಪ್ರಿಯತೆಯನ್ನು ಗಳಿಸಿರುವುದು ಅತ್ಯಂತ ಉತ್ಸಾಹದಾಯಕವಾಗಿದೆ.

ಹಿಂದೆ ಅಗರ್ತಲಾ ನಗರ ಪಂಚಾಯತ್ ಕಾಂಗ್ರೆಸ್‌ನ ಹಿಡತದಲ್ಲಿತ್ತು. ಈಬಾರಿ ಎಡರಂಗ ಗೆದ್ದಿದೆ. ಗಮನಾರ್ಹವಾದದ್ದೆಂದರೆ ಈ ಹಿಂದೆ ಗಣನೀಯ ಸಂಖ್ಯೆಯಲ್ಲಿದ್ದ ಬಂಗಾಳಿ ಭಾಷಿಕ ಪ್ರದೇಶಗಳಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿತ್ತು. ಆದರೆ ಈಸಲ ಅಲ್ಲೆಲ್ಲಾ ಎಡರಂಗದ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಹೀಗೆ ಒಟ್ಟು 12 ನಗರ ಪಂಚಾಯತ್‌ಗಳಲ್ಲಿಯೂ ಎಡರಂಗ ಗೆದ್ದಿದೆ. ಚುನಾವಣೆ ನಡೆದ 143 ಸ್ಥಾನಗಳಲ್ಲಿ ಎಡರಂಗ 126 ರಲ್ಲಿ ಜಯಭೇರಿ ಹೊಡೆದಿದೆ. (ಸಿಪಿಐ(ಎಂ)-117, ಕಾಂಗ್ರೆಸ್-13, ತೃಣಮೂಲ-3....) ದೇಶಾದ್ಯಂತ ಬೊಬ್ಬೆ ಹೊಡೆದ ಬಿಜೆಪಿ ಅಭ್ಯರ್ಥಿಗಳನ್ನೇ ನಿಲ್ಲಿಸಲಾಗದೇ ಹೇಳ ಹೆಸರಿಲ್ಲವಾಗಿದೆ. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಆಳುವ ಪಕ್ಷಗಳು ತಲೆಕೆಳಗಾಗುತ್ತಿದ್ದಾರೆ. ತ್ರಿಪುರಾದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಬಲಗಳಿಸುತ್ತಾ ಸಾಗುತ್ತಿರುವುದು ಮಹತ್ವದ ಅಂಶ.

ತ್ರಿಪುರಾದಲ್ಲಿ ಇತ್ತೀಚೆಗೆ ನಡೆದ ನಗರ ಪಂಚಾಯತ್ ಮತ್ತು ಮುನ್ಸಿಪಲ್ ಕೌನ್ಸಿಲ್‌ಗೆ ಚುನಾವಣೆಗಳಲ್ಲಿ ಆಡಳಿತರೂಢ ಎಡರಂಗವು ಅಭೂತಪೂರ್ವ ಗೆಲುವು ಸಾಧಿಸಿದೆ. ಅಗರ್ತಲಾ ಮುನ್ಸಿಪಲ್ ಕೌನ್ಸಿಲ್‌ನ 17 ವಾರ್ಡುಗಳಲ್ಲಿ ಎಡರಂಗವು 15 ಸ್ಥಾನಗಳನ್ನು ಗೆದ್ದುಕೊಂಡು ಅಧಿಕಾರಕ್ಕೆ ಬಂದಿದೆ. ಅದರಲ್ಲಿ ಸಿಪಿಐ(ಎಂ) ಪಕ್ಷ ಮಾತ್ರವೇ 12 ಸ್ಥಾನಗಳನ್ನು ಪಡೆದು ಏಕೈಕ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ತ್ರಿಪುರಾದ ಪ್ರಮುಖ ವಿರೋಧ ಪಕ್ಷಗಳಾದ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪಕ್ಷಗಳು ತಲಾ ಒಂದೊಂದು ಸ್ಥಾನವನ್ನು ಗಳಿಸಿ ಧೂಳೀಪಟವಾಗಿದೆ.

1995 ರಲ್ಲಿ ನಡೆದ ನಗರ ಪಂಚಾಯತ್ ಚುನಾವಣೆಯಲ್ಲಿ ಎಡರಂಗವು ಅಗರ್ತಲಾ ಮುನ್ಸಿಪಲ್ ಚುನಾವಣೆಯಲ್ಲಿ ಸೋತಿತ್ತು.

ರಾಜ್ಯದ 12 ನಗರ ಪಂಚಾತ್‌ಗಳಲ್ಲಿ ಎಡರಂಗವು ಎಲ್ಲಾ 12 ಪಂಚಾಯತ್‌ಗಳಲ್ಲಿಯೂ ಪುನಃ ಅಧಿಕಾರಕ್ಕೆ ಬಂದಿದೆ. ಚುನಾವಣೆ ನಡೆದ 143 ಸ್ಥಾನಗಳ ಪೈಕಿ ಎಡರಂಗವು 126 ರಲ್ಲಿ ಜಯಗಳಿಸಿದೆ. (ಅದರಲ್ಲಿ ಸಿಪಿಐಎಂ-117) ಉಳಿದಂತೆ ಕಾಂಗ್ರೆಸ್-13, ತೃಣಮೂಲ ಕಾಂಗ್ರೆಸ್-3, ನಾಗರೀಕ ಮಂಚ್-1 ಸ್ಥಾನಗಳನ್ನು ಗಳಿಸಿವೆ.

ಡಿಸೆಂಬರ್ 16 ರಂದು ರಾಜ್ಯದ 12 ನಗರ ಪಂಚಾಯತ್‌ನ 142 ಸ್ಥಾನಗಳಿಗೆ ಮತ್ತು ಅಗರ್ತಲಾ ಮುನ್ಸಿಫಲ್ ಕೌನ್ಸಿಲ್ ಚುನಾವಣೆಗಳು ಯಾವೊಂದು ಅಹಿತಕರ ಘಟನೆಗಳಿಗೆ ಆಸ್ಪದಕೊಡದಂತೆ ಶಾಂತಯುತವಾಗಿ ನಡೆದು ರಾಜ್ಯದ ಪಟ್ಟಣ ಪ್ರದೇಶಗಳ ಜನರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ಶೇ 71 ರಷ್ಟು ಮತದಾನವಾಗಿತ್ತು.


ಆಡಳಿತರೂಢ ಸಿಪಿಐ(ಎಂ) ನೇತೃತ್ವದ ಎಡರಂಗವು ಉತ್ತರ ತ್ರಿಪುರಾದ ಕೈಲಾಶ್ ನಗರ ಮತ್ತು ಕುಮಾರ್ ಘಾಟ್ ನ ಎಲ್ಲಾ ಸ್ಥಾನಗಳನ್ನು ದಕ್ಷಿಣ ತ್ರಿಪುರಾದ ಬೆಲೊನಿಯಾ, ಪಶ್ಚಿಮ ತ್ರಿಪುರಾದ ಕೌವಯ್, ಸೊವಾಮುರ ಮತ್ತು ರಾಣಿಬಜಾರ್ ಹಾಗೂ ದೆವೈ ಜಿಲ್ಲೆಯ ಕಮಲಾಪುರ ನಗರ ಪಂಚಾಯತ್‌ಗಳನ್ನು ಗೆದ್ದುಕೊಂಡಿದೆ.

ವಿರೋಧ ಪಕ್ಷವಾದ ಕಾಂಗ್ರೆಸ್ ಉತ್ತರ ತ್ರಿಪುರಾ ಧರ್ಮನಗರದ 3 ಸ್ಥಾನಗಳಲ್ಲಿ ಉದಯಪುರ, ಅಮರಾಪುರಗಳಲ್ಲಿ ತಲಾ ಒಂದೊಂದು ಸ್ಥಾನಗಳನ್ನು, ಉತ್ತರ ತ್ರಿಪುರಾ ಜಿಲ್ಲೆಯ ತೆಲ್ಯೆಯೂರ ನಗರ ಪಂಚಾಯತ್‌ನ 5 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

1995 ರ ಚುನಾವಣೆಯಲ್ಲಿ ಕಾಂಗ್ರೆಸ್-ಅಗರ್ತಲಾ ಮತ್ತು ಅಮರಾಪುರ ನಗರ ಪಂಚಾಯತ್‌ಗಳಲ್ಲಿ ಗೆದ್ದಿತ್ತು. ಚುನಾವಣಾ ಪೂರ್ವದಲ್ಲೆ ಎಡರಂಗವು ಕೊವೈ ನಗರ ಪಂಚಾಯತ್‌ನ ಒಂದು ಸ್ಥಾನವನ್ನು ಅವಿರೋಧವಾಗಿ ಗೆದ್ದುಕೊಂಡಿತ್ತು.

ಧೂಳಿಪಟವಾದ ಕಾಂಗ್ರೆಸ್..... ತೃಣಮೂಲ..

ತ್ರಿಪುರಾದ 12 ನಗರ ಪಂಚಾಯತ್‌ನ 142 ಸ್ಥಾನಗಳಿಗೆ ಚುನಾವಣೆ ಹತ್ತಿರವಾಗುತ್ತಿದಂತೆಯೇ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್‌ಗಳ ಬಹುತೇಕ ಧೂಳಿಪಟವಾಗುವ ಎಲ್ಲಾ ಲಕ್ಷಣಗಳು ಕಂಡು ಬರತೊಡಗಿದವು. ಯಾಕೆಂದರೆ - ಚುನಾವಣೆಗಿಂತ ಮೊದಲು ಜನತೆಯ ಮುಂದೆ ಆಡಳಿತಾರೂಢ ಎಡರಂಗವನ್ನು ದ್ವೇಷಿಸುವ ಭಾಷಣಗಳು, ಘೋಷಣೆಗಳು, ಅರ್ಥವಿಲ್ಲದ ಅಬ್ಬರದ ಪ್ರಚಾರವನ್ನು ಬಿಟ್ಟು ಬೇರೇನನ್ನೂ ಇಡಲು ಸಾಧ್ಯವಾಗಲೇ ಇಲ್ಲ. ಇಡೀ ಪ್ರಚಾರದ ಸಮಯವೆಲ್ಲವನ್ನೂ ರಾಜ್ಯ ಸರ್ಕಾರವನ್ನು ದ್ವೇಷಿಸುವುದಕ್ಕಾಗಿಯೇ ಬಳಸಿದವು. ಇದರಿಂದಾಗಿ ಚುನಾವಣೆ ಸಮೀಪಿಸುತ್ತಿದ್ದಂತೆ ಅವರೆಷ್ಟೇ ಅತ್ಯಾಧುನಿಕ ಸೌಂಡ್ ಸಿಸ್ಟಂಗಳನ್ನು, ವಾಹನಗಳನ್ನು, ಅಕ್ರಮ ಹಣ ಬಳಸಿ ದುಂದು ಪ್ರಚಾರವನ್ನು ಕೈಗೊಂಡರೂ ದಿನೇ ದಿನೇ ಅವರ ಪ್ರಚಾರ ಸಭೆಗಳು ಎಡರಂಗದ ಪ್ರಚಾರಸಭೆಗಳ ಎದುರು ಕಳೆಗುಂದಲಾರಂಭಿಸಿದ್ದವು. ಇದು ಸಹಜವೇ ಆಗಿತ್ತು. ಜನತೆ ಎದುರಿಸುವ ಜ್ವಲಂತ ಪ್ರಶ್ನೆಗಳು ಅವರಿಗೆ ಪ್ರಧಾನವಾಗಿ ಕಾಣಲೇ ಇಲ್ಲ. ಮತ್ತು ರಾಜ್ಯದ ಜನತೆಯ ಪ್ರಶ್ನೆಯ ಆಧಾರದಲ್ಲಿ ಚುನಾವಣೆಯನ್ನು ಎದುರಿಸದೇ ಕುರುಡಾಗಿ ರಾಜ್ಯದ ಎಡರಂಗ ಸರ್ಕಾರವನ್ನು, ಮತ್ತು ತ್ರಿಪುರಾದ ಶಾಂತಿಗಾಗಿ ಹೋರಾಡುತ್ತಿರುವ ಅದರ ಕಾರ್ಯಕರ್ತರನ್ನು ವಿರೋಧಿಸುವುದೇ ಆಗಿತ್ತು.



ಜನಪ್ರಿಯ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್

1998 ರಲ್ಲಿ ತ್ರಿಪುರಾದ ಎಲ್ಲಾ ಅಕ್ರಮಗಳನ್ನು ಅನುಸರಿಸಿ - ಪ್ರಜಾಪ್ರಭುತ್ವಕ್ಕೆ ಅಪರಾಧವೆಸಗುವ ರೀತಿಯಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನಡೆಸಿದ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯ ಆಡಳಿತವನ್ನು, ರಾಜ್ಯದ ಎಲ್ಲ ಪ್ರಜಾಪ್ರಭುತ್ವ ಹಕ್ಕುಗಳನ್ನು ಸಂಸ್ಥೆಗಳ ಮೇಲೆ ಸರ್ವಾಧಿಕಾರಿ ರೀತಿಯಲ್ಲಿ ದಮನ ನಡೆಸಿದ್ದ ಕೃತ್ಯಗಳನ್ನು ರಾಜ್ಯದ ಜನತೆಯಿಂದ ಮರೆ ಮಾಚಲು ಸಾಧ್ಯವೇ? ಅದರ ಐದು ವರ್ಷದ ಆಡಳಿತದಲ್ಲಿ ಅಗರ್ತಲಾ ಮುನ್ಸಿಪಲ್ ಕೌನ್ಸಿಲ್-ವಿಸರ್ಜನೆಯಾದದ್ದು, ಸಾರ್ವಜನಿಕ ಹಣದ ಲೂಟಿ, ಇತ್ಯಾದಿಗಳಿಗೆ ಮುಕ್ತಿ ದೊರಕಿದ್ದು, ಎಡರಂಗವು ಅಧಿಕಾರಕ್ಕೆ ಬಂದ ನಂತರ ಜಾರಿಗೊಳಿಸಿದ ನಗರ ಪಾಲಿಕಾ ಕಾಯ್ದೆ ರಚನೆಯಿಂದ ಮಾತ್ರ. 1994 ರಲ್ಲಿ ಎಡರಂಗವು ರಾಜ್ಯದ 11 ನಗರ ಪಂಚಾಯತ್‌ಗಳನ್ನು ಗೆದ್ದುಕೊಂಡರೂ ಅಗರ್ತಲಾ ಮುನ್ಸಿಪಲ್ ಕೌನ್ಸಿಲ್ ಮತ್ತು ಅಮರಪುರ ನಗರ ಪಂಚಾಯತ್‌ಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಆದರೆ ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಡೆದಿರುವ ಸ್ಥಾನಗಳು ಅದರ ದುರಾಡಳಿತವನ್ನು ವಿಮರ್ಶೆಗೊಳಪಡಿಸಲು ಅವಕಾಶ ನೀಡಿದಂತಿದೆ.

ಎಡರಂಗದ ಪ್ರಚಾರದ ವೈಖರಿ:

ನವೆಂಬರ್ 20 ರಂದು ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆ ಮುಗಿಯುತಿದ್ದಂತೆ ರಾಜ್ಯದಾದ್ಯಂತ ಎಡರಂಗ ತನ್ನ ವಿಶಿಷ್ಟತೆಯ ಪ್ರಚಾರವನ್ನು ಕೈಗೊಂಡಿತು. ಮೆರವಣಿಗೆಗಳು, ಸಭೆಗಳು ವಾಹನಗಳ ಮೂಲಕ ಪ್ರಚಾರ, ಕಾಲ್ನಡಿಗೆ ಜಾಥಾ ಇತ್ಯಾದಿಗಳು ಆರಂಭಗೊಂಡು ಪ್ರಚಾರ ಅಂತ್ಯಗೊಳ್ಳುವ ಹೊತ್ತಿಗಾಗಲೇ ಜನರು ಸ್ವಯಂ ಸ್ಫೂರ್ತಿಯಿಂದ ಎಡರಂಗದ ರ‍್ಯಾಲಿಗಳಲ್ಲಿ ಪ್ರಚಾರಸಭೆಗಳಲ್ಲಿ ಭಾಗವಹಿಸುವಂತಹ ಸ್ಫೂರ್ತಿದಾಯಕ ವಾತಾವರಣ ಸೃಷ್ಟಿಯಾಗಿತ್ತು.

ಪ್ರಚಾರ ಕೊನೆಗೊಳ್ಳುವ ಮೊದಲನೇ ದಿನವಂತೂ ಸಹಸ್ರಾರು ಪುರುಷರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಅಗರ್ತಲಾದ ಬೀದಿ-ಬೀದಿಗಳಲ್ಲಿ ಹಾಡುಗಳು, ಘೋಷಣೆಗಳ ಮೂಲಕ ರಾಜ್ಯದ ಅಭಿವೃದ್ಧಿಗಾಗಿ, ಹೋರಾಡುವುದು ಮತ್ತು ಪ್ರತ್ಯೇಕತೆಯನ್ನು ವಿರೋಧಿಸುತ್ತ, ಮೆರವಣಿಗೆಗಳನ್ನು ನಡೆಸಿದರು. ಇದರೊಂದಿಗೆ ರಾಜ್ಯಾದ್ಯಂತ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ತೀವ್ರ ರೀತಿಯ ಪ್ರಚಾರಗಳನ್ನು, ಬೀದಿಸಭೆಗಳ ಮೂಲಕ, ಬೃಹತ್ ಮೆರವಣಿಗೆಗಳನ್ನು - ಕಾರ್ಯಕರ್ತರನ್ನು ಮುಖಂಡರುಗಳು ಅಭ್ಯರ್ಥಿಗಳು ಒಟ್ಟಾಗಿ ನಡೆಸಿದರು. ಸುಮಾರು 5 ರಿಂದ 7 ಕಿ.ಮಿ. ಉದ್ದದ ಮೆರವಣಿಗೆಗಳು ರಾಜ್ಯಾದ್ಯಂತ ಪಟ್ಟಣಗಳಲ್ಲಿ, ವಾರ್ಡ್‌ಗಳಲ್ಲಿ ನಡೆದವು.

ಒಂದೆಡೆ ಅತ್ಯಾಧುನಿಕ ಎಲೆಕ್ಟ್ರಾನಿಕ್ಸ್ ಸೌಂಡ್ ಸಿಸ್ಟಂಗಳನ್ನು, ಕಾರುಗಳನ್ನು ಅಕ್ರಮ ಸಂಪಾದಿಸಿದ ಹಣವನ್ನು ಬಳಸಿ ವಿರೋಧ ಪಕ್ಷಗಳು ಅಬ್ಬರದ ಪ್ರಚಾರಕ್ಕೆ ಇಳಿದಿದ್ದರೆ, ಮತ್ತೊಂದೆಡೆ ಅಸಂಖ್ಯಾತ ಪ್ರಚಾರದ ಸಭೆಗಳನ್ನು ಎಡರಂಗವನ್ನು ಬೆಂಬಲಿಸುವ ಜನರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುತ್ತಿದ್ದರು. ಅಲ್ಲದೆ ಮೋಟರ್ಸ್ ವರ್ಕರ್ಸ್ ಯೂನಿಯನ್ ಸಂಘದ ಕಾರ್ಯಕರ್ತರು ತಮ್ಮ ಸ್ವಂತ ವಾಹನಗಳನ್ನು ಬಳಸಿ ದಿನಗಟ್ಟಲೆ ಎಡರಂಗ ಅಭ್ಯರ್ಥಿಗಳ ಗೆಲುವಿಗಾಗಿ ಕೆಲಸ ಮಾಡುತ್ತಿದುದ್ದು ಸರ್ವ ಸಾಮಾನ್ಯವಾಗಿತ್ತು. ತಮ್ಮೆಲ್ಲ ಭಾರವನ್ನು ಅವರು ಎಡರಂಗದ ಗೆಲುವಿಗಾಗಿ ಮೀಸಲಿಟ್ಟು ಕೆಲಸ ಮಾಡುತ್ತಿದ್ದರು. ಇದೇ ತೆರನಾದ ವಾತಾವರಣ ಇಡೀ ರಾಜ್ಯಾದ್ಯಂತ ನಿರ್ಮಾಣಗೊಂಡು - ರಾಜ್ಯದ ನಗರ ಪಂಚಾಯತ್ ಚುನಾವಣೆಗಳಲ್ಲಿ ಎಡರಂಗ ಅಭೂತಪೂರ್ವ ಗೆಲುವು ಸಾಧಿಸಲು ಸಹಕಾರಿಯಾಯಿತು.

ನಗರ ಪಂಚಾಯತ್ ಚುನಾವಣೆಯಲ್ಲಿ ಎಡರಂಗಕ್ಕೆ ಅಭೂತಪೂರ್ವ ಗೆಲುವು ತಂದುಕೊಟ್ಟ ರಾಜ್ಯದ ಜನತೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಹಾರ್ದಿಕವಾಗಿ ಅಭಿನಂದಿಸಿದೆ.

- ಮಹಾಂತೇಶ್

ಉದ್ಯೋಗ-ಶಿಕ್ಷಣಕ್ಕಾಗಿ ಸಂಸತ್ತಿನ ಮುಂದೆ ವಿದ್ಯಾರ್ಥಿ-ಯುವಜನರ ರಣಕಹಳೆ



ನವೆಂಬರ್ 27 ರಂದು ದೆಹಲಿಯ ಬೀದಿ ಬೀದಿಗಳಲ್ಲಿ ಎಸ್‌ಎಫ್‌ಐ-ಡಿವೈಎಫ್‌ಐ ಬಾವುಟ ಹಾರಾಡಿತು. ಎಲ್ಲಿ ನೋಡಿದರೂ ವಿದ್ಯಾರ್ಥಿ ಯುವಜನರು.

ರ‍್ಯಾಲಿಯ ಆರಂಭದಲ್ಲಿ ಡಿವೈಎಫ್‌ಐ ಅಧ್ಯಕ್ಷರಾದ ಕೃಷ್ಣದಾಸ್, ಕಾರ್ಯದರ್ಶಿ ಮಹಮದ್ ಸಲೀಂ, ಎಸ್‌ಎಫ್‌ಐ ಅಧ್ಯಕ್ಷರಾದ ಕೃಷ್ಣಪ್ರಸಾದ್ ಮೊದಲಾದ ಕೇಂದ್ರ ಸಮಿತಿ ಪದಾಧಿಕಾರಿಗಳು ನಾಯಕತ್ವ ವಹಿಸಿ

ದೆಹಲಿಯ ಪ್ರಮುಖ ಬೀದಿಗಳಲ್ಲಿ ಸಾಗಿದ ರ‍್ಯಾಲಿಯನ್ನು ಜನಪಥ ರಸ್ತೆಯಲ್ಲಿ ಪೋಲೀಸರು ತಡೆದು ನಿಲ್ಲಿಸಿದಾಗ ಅಲ್ಲೇ ಸಾರ್ವಜನಿಕ ಸಭೆ ನಡೆಸಲಾಯಿತು.

ಖಾಸಗೀಕರಣ, ಕೇಸರೀಕರಣ ವಿರೋಧಿಸಿ ಜನವರಿ 19 ರಂದು ದೇಶದಾದ್ಯಂತ ಪಿಕೆಟಿಂಗ್ ಮತ್ತು ತರಗತಿ ಬಹಿಷ್ಕಾರಕ್ಕೆ ಕರೆ ನೀಡಲಾಯಿತು

ದೆಹಲಿಯನ್ನು ಅಲ್ಲೋಲಕಲ್ಲೋಲಗೊಳಿಸಿದ ಸುಪ್ರೀಂ ಕೋರ್ಟ್ ತೀರ್ಪು

ಸುಪ್ರೀಂ ಕೋರ್ಟ್ ದೆಹಲಿಯಲ್ಲಿರುವ ಹೆಚ್ಚಿನ ಸಣ್ಣ ಕೈಗಾರಿಕೆಗಳನ್ನು ನಗರ ಪ್ರದೇಶದಿಂದಾಚೆಗೆ ಸ್ಥಳಾಂತರ ಮಾಡಬೇಕೆಂದು ಪಟ್ಟು ಹಿಡಿದು ದೆಹಲಿ ಸರ್ಕಾರದ ಮೇಲೆ ಒತ್ತಾಯ ಹೇರುವ ತೀರ್ಪು, ದೆಹಲಿಯನ್ನು ಇತ್ತೀಚೆಗೆ ಅಲ್ಲೋಲ ಕಲ್ಲೋಲ ಗೊಳಿಸಿತು. ಹಲವು ದಿನಗಳ ಗಲಭೆ, ಒಂದುದಿನದ ಬಂದ್ ಮೂಲಕ ಕಾರ್ಮಿಕರು, ಸಣ್ಣ ಕೈಗಾರಿಕಾ ಘಟಕಗಳ ಮಾಲಕರು, ನಾಗರಿಕರು ಇದನ್ನು ತೀವ್ರವಾಗಿ ಪ್ರತಿಭಟಿಸಿದರು. ಸುಪ್ರೀಂ ಕೋರ್ಟ್ ತೀರ್ಮಾನ ಕಾರ್ಮಿಕರ ಬದುಕುವ ಹಕ್ಕು, ಪರಿಸರ ಮಾಲಿನ್ಯ ಮತ್ತು ಬೆಳವಣಿಗೆಯ ನಡುವೆ ತಾಕಲಾಟ, ನಗರ ಯೋಜನೆ ಮತ್ತಿತರ ವಿಷಯಗಳಲ್ಲಿ ನ್ಯಾಯಾಂಗ ಸೇರಿದಂತೆ ಪ್ರಭುತ್ವದ ಅಂಗಗಳ ವರ್ಗ ತಾರತಮ್ಯ ಧೋರಣೆ - ಮುಂತಾದ ಹಲವು ವಿಷಯಗಳ ಬಗ್ಗೆ ಇಂದಿನ ಪರಿಸ್ಥಿತಿ ಬಗ್ಗೆ ಬೆಳಕು ಚೆಲ್ಲಿದೆ.

ದೆಹಲಿಯನ್ನು, ದೇಶವನ್ನು ಕಾಡಿದ ಈ ಅಲ್ಲೋಲ ಕಲ್ಲೋಲಗಳ ಬಗ್ಗೆ ಬೆಳಕು ಚೆಲ್ಲುವ ಲೇಖನ

ನವೆಂಬರ್ ಎರಡನೇ ವಾರದಲ್ಲಿ ದೆಹಲಿ ಅಲ್ಲೋಲಕಲ್ಲೋಲವಾಯಿತು. ಸುಪ್ರೀಂ ಕೋರ್ಟು ದೆಹಲಿಯ 'ವಿವಾದಿತ' ಕೈಗಾರಿಕಾ ಘಟಕಗಳನ್ನು ಸ್ಥಳಾಂತರಿಸಲು ಕೋರ್ಟಿನ ತೀವ್ರ ಜಾರಿ ಮಾಡದ ಅಪಮಾನ ಮಾಡಿರುವ ಆಪಾದನೆ ಮೇಲೆ ಮುಖ್ಯ ಕಾರ್ಯದರ್ಶಿಗಳ ಮೇಲೆ ಕಾರ್ಯಾಚರಣೆ ಜರುಗಿಸುವ ನೋಟೀಸು ಬೆದರಿಕೆ ಹಾಕಿತು. ಈ ಒತ್ತಡಕ್ಕೆ ಮಣಿದ ದೆಹಲಿ ಸರ್ಕಾರ ದೆಹಲಿಯ 'ವಾಸಯೋಗ್ಯ' ಪ್ರದೇಶಗಳ ಎಲ್ಲಾ ಕೈಗಾರಿಕಾ ಘಟಕಗಳನ್ನು ತಕ್ಷಣ ಮುಚ್ಚುವಂತೆ ನೋಟೀಸು ನೀಡಿತು. ಆ ಕೈಗಾರಿಕೆಗಳು ಮುಚ್ಚಲು ನಿರಾಕರಿಸಿದಾಗ, ಅವುಗಳಿಗೆ ನೀರು, ವಿದ್ಯುತ್ ಪೂರೈಕೆ ನಿಲ್ಲಿಸಲಾಯಿತು. ಇದು ಹಿಂದೆಂದೂ ದೆಹಲಿ ಕಂಡು ಕೇಳರಿಯದ ರೀತಿಯ ಗಲಭೆಗಳಿಗೆ ಹಾದಿ ಮಾಡಿಕೊಟ್ಟಿತು. ಪ್ರಮುಖ ಕೈಗಾರಿಕಾ, ವಾಸದ ಪ್ರದೇಶಗಳಲ್ಲಿ ರಸ್ತೆ ತಡೆ, ರ್‍ಯಾಲಿ, ಪೋಲೀಸರ ಜತೆ ಘರ್ಷಣೆ ನಡೆದವು. ಒಂದು ದಿನ 'ಬಂದ್' ಆಚರಿಸಲಾಯಿತು. ಈ ಎಲ್ಲಾ ಪ್ರತಿಭಟನೆಗಳಲ್ಲಿ ಕೈಗಾರಿಕಾ ಘಟಕಗಳ ಕಾರ್ಮಿಕರು, ಮಾಲೀಕರು, ಸಾಮಾನ್ಯ ನಾಗರಿಕರು ದೊಡ್ಡ ಸಂಖ್ಯೆಯಲ್ಲಿ ಪಾಲುಗೊಂಡರು. ಈ ಅಲ್ಲೋಲ-ಕಲ್ಲೋಲದ ಒತ್ತಡದಿಂದ ಸದ್ಯಕ್ಕೆ ಯಥಾಸ್ಥಿತಿ ಮರಳಿದ್ದರೂ (ಅಂದರೆ ಕೈಗಾರಿಕೆಗಳು ಕೆಲಸಮಾಡಲು ಆರಂಭಿಸಿದ್ದರೂ) ಜನವರಿಯಲ್ಲಿ ಪುನಃ ಕೋರ್ಟು ಕೇಸಿನ ವಿಚಾರಣೆ ಪುನರಾರಂಭಿಸಿದರೆ ದೆಹಲಿ ಸರ್ಕಾರ ಕೈಗಾರಿಕೆಗಳ ಸ್ಥಳಾಂತರದ ಬಗ್ಗೆ ಯಾವರೀತಿಯ ಯೋಜನೆ ಮುಂದಿಡುತ್ತದೆ ಎಂಬ ಬಗ್ಗೆ ಆತಂಕ ಇನ್ನೂ ಹೆಚ್ಚಿದೆ. ಪುನಃ ಗಲಭೆಗಳು ಭುಗಿಲೇಳುವ ಸಾಧ್ಯತೆ ಇದೆ. ಈ ಘಟನಾವಳಿ ಹಿನ್ನೆಲೆ, ಅಡಕವಾಗಿರುವ ವಿಷಯಗಳ ಬಗ್ಗೆ ನೋಡೋಣ.

ಸಣ್ಣ ಕೈಗಾರಿಕೆಗಳನ್ನು ನಗರದಾಚೆಗೆ ಸಾಗಿಸಲು ಸುಪ್ರೀಂ ಕೋರ್ಟ್ ಪಟ್ಟು

ಹಿನ್ನೆಲೆ

ಈ ಇಡೀ ಘಟನಾವಳಿ ಆರಂಭವಾಗಿದ್ದು ಎಂ.ಸಿ.ಮೆಹತಾ ಎಂಬ ವಿಶಾಲ ಮತ್ತು ಪರಿಸರ ಕಾರ್ಯಕರ್ತ 1985 ರಲ್ಲಿ ದೆಹಲಿಯ 'ಪರಿಸರ ಮಾಲಿನ್ಯ'ಕ್ಕೆ ಕಾರಣವಾಗುವ ಕೈಗಾರಿಕಾ ಘಟಕಗಳನ್ನು ನಗರ ಪ್ರದೇಶದಾಚೆಗೆ ಸ್ಥಳಾಂತರಿಸಬೇಕು ಎಂದು ಕೋರ್ಟು 'ಸಾರ್ವಜನಿಕ ಹಿತಾಸಕ್ತಿ ಕೇಸು' ಹಾಕಿದಾಗ. ಈ ಕೇಸಿನ ಮೇಲೆ ತೀರ್ಪು ನೀಡುತ್ತಾ ಸುಪ್ರೀಂ ಕೋರ್ಟು 1995 ರಲ್ಲಿ ಕೇಂದ್ರೀಯ ಪರಿಸರ ಮಾಲಿನ್ಯ ನಿಯಂತ್ರಣ ಬೋರ್ಡಿಗೆ ಸುಮಾರು ಒಂದು ಸಾವಿರ 'ಅಪಾಯಕಾರಿ' ಘಟಕಗಳನ್ನು ಮುಚ್ಚಲು ಅಥವಾ ದೆಹಲಿಯಾಚೆಗೆ ಸ್ಥಳಾಂತರಿಸಲು ಆಜ್ಞೆ ಮಾಡಿತು. ಇದರ ಜತೆಗೆ ದೆಹಲಿಯ ಮಾಸ್ಟರ್ ಪ್ಲಾನ್ 'ಉಲ್ಲಂಘಿಸಿ' 'ವಾಸಯೋಗ್ಯ' ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಕೈಗಾರಿಕಾ ಘಟಕಗಳನ್ನು ಸ್ಥಳಾಂತರಿಸಬೇಕು ಎಂಬುದು ಆಜ್ಞೆಯಲ್ಲಿತ್ತು.

ಸಾವಿರ ಘಟಕಗಳನ್ನು ಸ್ಥಳಾಂತರಿಸುವ ಆಜ್ಞೆ ಜಾರಿಯಾಗಿದ್ದರೂ, 'ವಾಸಯೋಗ್ಯ' ಪ್ರದೇಶಗಳಲ್ಲಿರುವ ಘಟಕಗಳನ್ನು ಸ್ಥಳಾಂತರ ಮಾಡಲು ಪಟ್ಟು ಹಿಡಿದು ಕೂತಿತು. ಕಳೆದ ಕೆಲವು ವರ್ಷಗಳಲ್ಲಿ ಅಧಿಕಾರಕ್ಕೆ ಬಂದ ದೆಹಲಿ ಸರ್ಕಾರಗಳು ಲಕ್ಷಾಂತರ ಕಾರ್ಮಿಕರ ಜೀವನ ಹಕ್ಕಿಗೆ ಸಂಬಂಧಿಸಿದ ಈ ಸಂಕೀರ್ಣ ಸಮಸ್ಯೆಯನ್ನು ಎದುರಿಸಲಾಗದೆ, ಅದನ್ನು ಜಾರಿ ಮಾಡಲಿಲ್ಲ. ಇಷ್ಟು ವರ್ಷಗಳ ನಂತರವೂ ತನ್ನ ಆಜ್ಞೆಯನ್ನು ಜಾರಿ ಮಾಡಿಲ್ಲ ಎಂದು ಸಿಟ್ಟಿಗೆದ್ದ ಸುಪ್ರೀಂ ಕೋರ್ಟು ಮುಖ್ಯಕಾರ್ಯದರ್ಶಿಗಳ ಮೇಲೆ 'ಕೋರ್ಟಿನ ಅಪಮಾನ'ದ ನೋಟೀಸು ಕೊಡುವ ಬೆದರಿಕೆ ಹಾಕಿತು. ದೆಹಲಿ ಸರ್ಕಾರ ಈ ಬೆದರಿಕೆಗೆ ತರಾತುರಿಯಿಂದ ಗಾಬರಿಯ ಪ್ರತಿಕ್ರಿಯೆಯಿಂದ ಈ ಬಿಕ್ಕಟ್ಟು ಆರಂಭವಾಯಿತು.

ಮೊದಮೊದಲು ದೆಹಲಿಯ ಕಾಂಗ್ರೆಸ್ ಸರ್ಕಾರ ಹಿಂದಿನ ಬಿಜೆಪಿ ಸರ್ಕಾರಗಳು, ಈಗಿನ ಕೇಂದ್ರ ಸರ್ಕಾರದ ಮೇಲೆ ಈ ಸಮಸ್ಯೆಯ ಮೂಲ ಕಾರಣದ ಆರೋಪ ಹೊರಿಸಲು ಪ್ರಯತ್ನಿಸಿತು. ಕಾಂಗ್ರೆಸ್-ಬಿಜೆಪಿಗಳ ನಡುವೆ ಈ ಬಗ್ಗೆ ಆರೋಪ-ಪ್ರತ್ಯಾರೋಪ ನಡೆಯಿತು.

ಸಮಸ್ಯೆ ಏನು?

ನಿಜವಾದ ಸಮಸ್ಯೆ ಏನು? ದೆಹಲಿಯಲ್ಲಿ ಮತ್ತು ಸುತ್ತಮುತ್ತ ಹೆಚ್ಚುತ್ತಿರುವ ವಲಸೆ ಮತ್ತು ಯೋಜಿತ ಕೈಗಾರಿಕಾ ಬೆಳವಣಿಗೆಯ ಅಭಾವದಿಂದ, ಕೈಗಾರಿಕಾ 8 ಸಾವಿರದಿಂದ 1971 ರಲ್ಲಿ 26 ಸಾವಿರಕ್ಕೆ ಬೆಳೆದು, 1956 ರ ಹೊತ್ತಿಗೆ ಒಂದು ಕಾಲು ಲಕ್ಷ ಘಟಕಗಳಾಗಿತ್ತು. ಇವುಗಳು ಬಹುತೇಕ 10-12 ಕಾರ್ಮಿಕರು ಕೆಲಸಮಾಡುವ ಸಣ್ಣ ಕೈಗಾರಿಕೆಗಳಾಗಿದ್ದು ಸುಮಾರು 15 ರಿಂದ 20 ಲಕ್ಷ ಕಾರ್ಮಿಕರು ಇವುಗಳಲ್ಲಿ ಕೆಲಸಮಾಡುತ್ತಾರೆ. ದೆಹಲಿಯ ಮಾಸ್ಟರ್ ಪ್ಲಾನ್, ಮುಂತಾದವು ನಿಗದಿಪಡಿಸಿದ 'ಕೈಗಾರಿಕಾ ಪ್ರದೇಶ'ಗಳನ್ನು ಮೀರಿ ಕೈಗಾರಿಕಾ ಘಟಕಗಳು ಬೆಳೆದಿವೆ. ಇವುಗಳಲ್ಲಿ ರಿಜಿಸ್ಟರ್ ಆಗದ ಘಟಕಗಳೂ ಹಲವು. ಆದರೆ ಇವೆಲ್ಲವೂ 'ಕಾನೂನು ಬಾಹಿರ' ಘಟಕಗಳಲ್ಲ. ದೆಹಲಿಯಲ್ಲಿ ದರ್ಬಾರು ನಡೆಸುವ ಹಲವು ಸಂಘಟನೆಗಳ ಅರಾಜಕತೆಯ ಮಧ್ಯ ಇವು ಸಿಕ್ಕಿ ಹಾಕಿಕೊಂಡಿವೆ. ದೆಹಲಿಯ 'ಕೈಗಾರಿಕಾ ಪ್ರದೇಶ'ಗಳನ್ನು ನಿಗದಿ ಪಡಿಸುವುದು DDA (ದೆಹಲಿ ಬೆಳವಣಿಗೆ ಪ್ರಾಧಿಕಾರ). ಕೈಗಾರಿಕೆಗೆ 'ಲೈಸೆನ್ಸ್' ನೀಡುವುದು ಮುನಿಸಿಪಾಲಿಟಿ. ಈ ಕೈಗಾರಿಕೆಗಳಲ್ಲಿ ಹೆಚ್ಚಿನವು 'ಲೈಸೆನ್ಸ್' ಪಡೆದ ಘಟಕಗಳೇ.

ಆದರೆ ಸುಪ್ರೀಂ ಕೋರ್ಟಿನ ಪ್ರಕಾರ ಒಂದು ಕಾಲು ಲಕ್ಷ ಘಟಕಗಳಲ್ಲಿ ಸುಮಾರು 93 ಸಾವಿರ ಘಟಕಗಳು 'ಕಾನೂನು ಬಾಹಿರ'ವಾಗಿ ದೆಹಲಿ ಮಾಸ್ಟರ್ ಪ್ಲಾನ್ 'ಕೈಗಾರಿಕಾ ಪ್ರದೇಶ'ಎಂದು ನಿಗದಿತ ಪ್ರದೇಶಗಳ ಹೊರಗೆ ಇರುವವು. ಅವನ್ನು ದೆಹಲಿಯಾಚೆಗೆ ದೂರಕ್ಕೆ ಸ್ಥಳಾಂತರಿಸಬೇಕು. ಏಕೆ? ಈ ಘಟಕಗಳು ದೆಹಲಿಯ 'ವಾಸಯೋಗ್ಯ' ಪ್ರದೇಶಗಳಲ್ಲಿ ಪರಿಸರ ಮಾಲಿನ್ಯ ಉಂಟು ಮಾಡುತ್ತವೆ.

ಪರಿಸರ ಮಾಲಿನ್ಯ, ಮಾಸ್ಟರ್ ಪ್ಲಾನ್

ಸುಪ್ರೀಂ ಕೋರ್ಟು ಕೊಡುವ ಈ ಕಾರಣಗಳು ಸುಮಾರು 5 ಲಕ್ಷ ಕಾರ್ಮಿಕರು ವಲಸೆ ಮಾಡಲು ಬಲಾತ್ಕಾರ ಮಾಡುವಷ್ಟು ಬಲವಾಗಿಯೆ? ತಾರ್ಕಿಕವಾಗಿ ಪರಿಶೀಲಿಸಿದರೆ ಹಾಗೆನಿಸುವುದಿಲ್ಲ. ಪರಿಸರ ಮಾಲಿನ್ಯದ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ಈಗಾಗಲೇ ಮಾಲಿನ್ಯ ಬೋರ್ಡು 'ಕಲುಷಿತ' ಎಂದು ನಿಗದಿಪಡಿಸಿದ ಕೈಗಾರಿಕೆಗಳ ಬಗ್ಗೆ ಈಗಾಗಲೇ ಕ್ರಮ ಜರುಗಿಸಲಾಗಿತ್ತು. ದೊರೆತಿರುವ ಮಾಹಿತಿ ಪ್ರಕಾರ ದೆಹಲಿಯ ವಾಯು ಮಾಲಿನ್ಯದಲ್ಲಿ ಸಿಂಹಪಾಲು (ಶೇ 64) ವಾಹನಗಳಿಂದ ಆಗುವ ಮಾಲಿನ್ಯದ್ದು. ಥರ್ಮಲ್ ವಿದ್ಯುತ್ ಘಟಕಗಳ ಪಾಲು (ಶೇ.16) ಕೈಗಾರಿಕೆಗಳ ಒಟ್ಟು ಪಾಲು ಶೇಕಡಾ 12 ಅಷ್ಟೆ! ಉಳಿದ ಶೇಕಡ 8 ಮನೆಗಳಿಂದ ಬರುವಂಥದು. ಇದೇ ರೀತಿ ಜಲಮಾಲಿನ್ಯದಲ್ಲೂ ಮೂರನೇ ಎರಡು ಭಾಗ ಚರಂಡಿ ವ್ಯವಸ್ಥೆಯ ಕೊಳಚೆಯದ್ದೇ ಸಿಂಹಪಾಲು. [illegible] ಬಗ್ಗೆ

ಇನ್ನು 'ಮಾಸ್ಟರ್ ಪ್ಲಾನ್' ಎಷ್ಟರ ಮಟ್ಟಿಗೆ 'ಪವಿತ್ರ' ವಾದದ್ದು. 1961 ರಿಂದ 1991 ರವರೆಗೆ ಮತ್ತು 1991 ರಿಂದ - 2001 ದವರೆಗೆ ಜಾರಿಯಲ್ಲಿದ್ದ ಮಾಸ್ಟರ್ ಪ್ಲಾನ್‌ಗಳು ಇನ್ನೂ ಗುರುತರ ಉಲ್ಲಂಘನೆಗೆ ಒಳಗಾಗಿವೆ. 1961 ರ ಮಾಸ್ಟರ್ ಪ್ಲಾನನ್ನು 'ಏಶ್ಯಾಡ್ ಕ್ರೀಡೆ'ಗಳು(1982) ಸಮಯದಲ್ಲಿ ಕಟ್ಟಲಾದ ಏಶ್ಯಾಡ್ ಗ್ರಾಮ, ಫ್ಲೈ ಓವರ್‌ಗಳು, ರಸ್ತೆಗಳು ಇತ್ಯಾದಿಗಳನ್ನು ಬೇಕಾಬಿಟ್ಟಿ ಉಲ್ಲಂಘಿಸಲಾಯಿತು. ಇದೇ ರೀತಿ ಕೈಗಾರಿಕಾ ಘಟಕಗಳಲ್ಲದೆ ಇತರ ಬೇಕಾದಷ್ಟು ಉಲ್ಲಂಘನೆಗಳು ನಡೆಯುತ್ತಿವೆ.

ಹಾಗಾದರೆ ಸಣ್ಣ ಕೈಗಾರಿಕೆಗಳಿಗೆ ಏಕಿಷ್ಟು ಬೊಬ್ಬೆ! - ವರ್ಗ ತಾರತಮ್ಯವೇ?

ಪರಿಸರ ಮಾಲಿನ್ಯವೇ ಮುಖ್ಯ ಅಂಗವಾದರೆ, ಸ್ಥಳಾಂತರಿಸುವುದು ಹೇಗೆ ಪರಿಹಾರವಾಗಬಲ್ಲದು, ಪರಿಸರ ಮಾಲಿನ್ಯಕ್ಕೆ ರಾಸಾಯನಿಕ ಕಲ್ಮಶ ನಿವಾರಣ ಪರಿಹಾರಗಳು ಲಭ್ಯವಿದೆ. ಸ್ಥಳಾಂತರಿಸುವುದಕ್ಕಿಂತ ಇವು ಹೆಚ್ಚು ಪರಿಣಾಮಕಾರಿ ಪರಿಹಾರವಲ್ಲವೇ? ಅತ್ಯಂತ ಕಲುಷಿತ ಕೈಗಾರಿಕಾ ಘಟಕಗಳನ್ನು ಆಗಲೇ ಸ್ಥಳಾಂತರಿಸಲಾಗಿದೆ. ಉಳಿದ ಸಾಮಾನ್ಯ ಕೈಗಾರಿಕೆಗಳಿಗೆ ಈ ಅತಿರೇಕದ ಶಿಕ್ಷೆ ಏಕೆ?

ದೆಹಲಿಯ (ಅಥವಾ ಇನ್ನಾವುದೇ ನಗರದ) ಮಾಸ್ಟರ್ ಪ್ಲಾನ್ ವಲಸೆ, ನಗರ ಪ್ರದೇಶದ ಬೆಳವಣಿಗೆ, ಕೈಗಾರಿಕಾ ಮತ್ತಿತರ ಆರ್ಥಿಕ ಚಟುವಟಿಕೆಯ ಬೆಳವಣಿಗೆಯನ್ನು ಗಮನಕ್ಕೆ ತೆಗೆದುಕೊಂಡದ್ದಿಲ್ಲ. ಇಂತಹ ಮಾಸ್ಟರ್ ಪ್ಲಾನ್‌ನ್ನು ಜಾರಿಗೆ ತರಲು ಈ ಪಟ್ಟು ಏಕೆ? ಇದೇ ರೀತಿ ಕಾರ್ಮಿಕರ ಸಮಸ್ಯೆಗಳಿಗೆ ದಿವ್ಯ ನಿರ್ಲಕ್ಷ್ಯವೂ ದಂಗು ಬಡಿಸುವಂತಹದು. ಸುಪ್ರೀಂ ಕೋರ್ಟಿನ ಆಜ್ಞೆಯ ಮೇರೆಗೆ ಸ್ಥಳಾಂತರಿಸಲಾದ ಕಾರ್ಖಾನೆಗಳ ಕಾರ್ಮಿಕರ ಅವಸ್ಥೆ, ಸುಪ್ರೀಂ ಕೋರ್ಟ್ ಲಕ್ಷದಷ್ಟು ಘಟಕಗಳನ್ನು ಸ್ಥಳಾಂತರಿಸುವುದರ ಬಗ್ಗೆ ಪಟ್ಟು ಹಿಡಿದರೆ ಏನಾದೀತು ಎಂದು ತೋರಿಸುತ್ತದೆ. ಈ ಕಾರ್ಮಿಕರ ಸಮೀಕ್ಷೆಯೊಂದರ ಪ್ರಕಾರ ಮುಕ್ಕಾಲು ಭಾಗ ತಮ್ಮ ಕೆಲಸ ಕಳೆದುಕೊಂಡರು.

ಕೈಗಾರಿಕೆಗಳನ್ನು ಸ್ಥಳಾಂತರಿಸದೆ ಮುಚ್ಚಿಡಲಾಯಿತು. ಇಲ್ಲವೇ ದೂರದ ಕಾರ್ಮಿಕರಿಗೆ ತೀರಾ ಅನಾನುಕೂಲವಾದ ಜಾಗದಲ್ಲಿ ಪುನರಾರಂಭಿಸಲಾಯಿತು. ಸುಪ್ರೀಂ ಕೋರ್ಟು ಮೊದಲು ದೆಹಲಿಯ ಹೊರಾಂಗಣದಲ್ಲಿಬೇಕೆಂದು ಹೇಳಿದ್ದರೂ, ಸಡಿಲಿಸಿ ಎಲ್ಲಿ ಬೇಕಾದರೂ ಘಟಕಗಳನ್ನು ಸ್ಥಳಾಂತರಿಸಲು ಅನುಮತಿ ನೀಡಿತು. ಕಾರ್ಮಿಕರು ಮಾಲಿಕರು ಆಯ್ದ ಜಾಗದಲ್ಲಿ, ಹೋಗಿ ಸೇರಿಕೊಳ್ಳದಿದ್ದರೆ ಅವರಿಗೆ ಕೇವಲ ಒಂದು ವರ್ಷದ ವೇತನ ಪರಿಹಾರ ವಿಧಿಸಿತು. ಕಾರ್ಖಾನೆ ಕಾರ್ಮಿಕರಿಗೆ ಯಾವುದೇ ಪರಿಹಾರ ಸಿಗಲಿಲ್ಲ. ಹಲವಾರು ಕಾರ್ಮಿಕರು ರಿಜಿಸ್ಟರ್ ಆಗಿರಲಿಲ್ಲ. ಅಥವಾ ಘಟಕಗಳು ರಿಜಿಸ್ಟರ್ ಆಗಿರಲಿಲ್ಲ. ಕಾರ್ಮಿಕರ ಹಿತಾಸಕ್ತಿ ಬಗ್ಗೆ ಕೋರ್ಟುಗಳು ಯಾವುದೇ ವಿಶೇಷ ಎಚ್ಚರ ವಹಿಸಲಿಲ್ಲ.

ಇದಲ್ಲದೆ ಸ್ಥಳಾಂತರಿಸುವುದು 'ನ್ಯಾಯಸಮ್ಮತ' ಎಂದಿಟ್ಟುಕೊಂಡರೂ, ವ್ಯವಸ್ಥಿತವಾಗಿ ಸ್ಥಳಾಂತರಿಸುವುದಕ್ಕೆ ತಕ್ಕ ಯೋಜನೆ ಮಾಡಲು ತಕ್ಕ ಸಮಯ, ಇಂತಹ ವ್ಯವಸ್ಥೆಯಲ್ಲಿರುವ ಸಂಕೀರ್ಣತೆಯ ಬಗ್ಗೆ ಕೋರ್ಟು ಗಮನ ಹರಿಸಲು ನಿರಾಕರಿಸಿರುವುದು ಅಷ್ಟೇ ಆಶ್ಚರ್ಯಕರ.

ಕಾರ್ಮಿಕರಿಗೆ ಬದುಕುವ ಹಕ್ಕು ಇಲ್ಲವೇ?

ವಿಪರ್ಯಾಸವೆಂದರೆ ಇವೆಲ್ಲವನ್ನು ಮನುಷ್ಯನಿಗೆ ಬದುಕಲು ಬೇಕಾದ ಉತ್ತಮ ಪರಿಸರದ ಮಾನವ ಅಧಿಕಾರದ ಹೆಸರಲ್ಲಿ ಮಾಡಲಾಗುತ್ತಿದೆ. ಮಾನವಾಧಿಕಾರ ಸಾಧಿಸುವ ಸಕ್ರಿಯ ನ್ಯಾಯಾಂಗವನ್ನು ಆಳುವವರು, ಮಧ್ಯಮ ವರ್ಗದವರು ಕೊಂಡಾಡುತ್ತಿದ್ದಾರೆ. ದೆಹಲಿಯ ಮಧ್ಯಮ, ಉಚ್ಚ ಮಧ್ಯಮ ವರ್ಗಗಳು ವಾಸಿಸುವ ಕಾಲೋನಿಗಳಲ್ಲಿ 'ಮಾಲಿನ್ಯ' ಮಾಡುವ ಕೈಗಾರಿಕೆಗಳು ಇರಬಾರದು. ಅವು 'ಮಾಸ್ಟರ್ ಪ್ಲಾನ್'ನಲ್ಲಿದ್ದಂತೆ ಅಂದವಾಗಿ ಇರಬೇಕು. ಈ 'ಕೈಗಾರಿಕೆ'ಗಳು ಊರಾಚೆಗೆ ಎಲ್ಲಾದರೂ ಹಾಳಾಗಿ ಹೋಗಲಿ. ಇವರು ಬಳಸುವ ಕಾರು, ವಾಹನಗಳು 'ಮಾಲಿನ್ಯ' ಮಾಡಿದರೆ ಅಡ್ಡಿ ಇಲ್ಲ. ಅದು ಅವರ ಮಾನವ ಅಧಿಕಾರ. ಊರಾಚೆಗೆ 'ಮಾಲಿನ್ಯ' ಆದರೂ ಪರವಾಗಿಲ್ಲ. ಲಕ್ಷಾಂತರ ಕಾರ್ಮಿಕರ ಪ್ರಾಥಮಿಕ 'ಬದುಕುವ ಹಕ್ಕು' ಇದರಿಂದ ಇಲ್ಲದಂತಾಗುತ್ತದೆಯಾದರೆ ಆಗಲಿ. 'ಮಾಸ್ಟರ್ ಪ್ಲಾನ್'ಗಳು ಅತ್ಯಂತ ಹೇಯ ಮಾಲಿನ್ಯ ಸಹಿಸಿಕೊಂಡು ಕೊಳಗೇರಿಗಳಲ್ಲಿ ಬದುಕುವ ಲಕ್ಷಾಂತರ ಜನರ ಬಗ್ಗೆ ಮೌನವಾಗಿರುತ್ತವೆ. ಇಂತಹ ಪ್ರದೇಶಗಳ ಬಗ್ಗೆ ಮಾತನಾಡುವುದಿಲ್ಲ. ಈ ತೀರ್ಪಿನ ಬಗ್ಗೆ ತೀವ್ರ ಪ್ರತಿಭಟನೆ ವ್ಯಕ್ತವಾದಾಗ ಇದನ್ನು 'ಇಂತಹ ಗೂಂಡಾಗಿರಿಗೆ ನಾವು ಬಗ್ಗುವುದಿಲ್ಲ. ನೀವು ಬಗ್ಗಬಾರದು' ಎಂದು ದೆಹಲಿ ಸರ್ಕಾರಕ್ಕೆ ತಾಕೀತು ಮಾಡಿತು. ಕಾರ್ಮಿಕರು ಹೇಗಿದ್ದರೂ ದೆಹಲಿಗೆ 'ವಲಸೆ ಬಂದವರು'. ಸ್ಥಳಾಂತರಿಸಿದಾಗ ಪುನಃ ವಲಸೆ ಹೋಗುತ್ತಾರೆ. ಅವರ್ಕೇನಂತೆ ಇದು ಕಾರ್ಮಿಕರ ಬಗ್ಗೆ ಕೋರ್ಟಿನ ಮಾತುಗಳು ಕಾರ್ಯಾಂಗದಂತೆ ನ್ಯಾಯಾಂಗದಲ್ಲೂ ವರ್ಗ ತಾರತಮ್ಯದ ಧೋರಣೆ ತಾಂಡವವಾಡುತ್ತಿವೆ ಎಂಬ ಬಗ್ಗೆ ಇನ್ನೂ ಯಾರಿಗಾದರೂ ಸಂಶಯವಿದೆಯೇ.

ಸ್ಥಳಾಂತರದ ವಿರುದ್ಧ ಮಾಲೀಕರು ಮತ್ತು ಕಾರ್ಮಿಕರ ಪ್ರತಿಭಟನೆ



ಅಡಿಕೆ ತೆಂಗು ಬೆಳೆಯ ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿ ಕಾರಣ - ಜಿ.ವಿ.ಶ್ರೀರಾಮರೆಡ್ಡಿ

ಅಡಿಕೆ ಮತ್ತು ತೆಂಗು ಬೆಳೆಗಾರರು ಇಂದು ಬೆಲೆ ಕುಸಿತದಿಂದಾಗಿ ಕಂಗಾಲಾಗಿದ್ದಾರೆ. ಅವರ ಕುಟುಂಬ ಇದರಿಂದಾಗಿ ಸಂಪೂರ್ಣ ನಿರ್ನಾಮವಾಗುವ ಹಂತ ತಲುಪಿದ್ದಾರೆ. ಕರ್ನಾಟಕದ ರಾಜ್ಯದ ಇತರ ಕೃಷಿ ಬೆಳೆಗಾರರು ಕೂಡಾ ಇದೇ ರೀತಿಯ ಸ್ಥಿತಿಗೆ ತಲುಪಿರುತ್ತಾರೆ. ದೇಶದ ಉತ್ಪಾದನೆಯ ಮೂಲ ಆಧಾರ ಸ್ತಂಭವಾಗಿರುವ ರೈತ ಕಂಗಾಲಾಗಲು ಕಾರಣಕೇಂದ್ರದ ಆರ್ಥಿಕ ನೀತಿಯೇ ಕಾರಣ. ಎನ್‌ಡಿಎ ನೇತೃತ್ವದ ಕೇಂದ್ರ ಸರಕಾರ ಒಟ್ಟು 28 ತಿಂಗಳಲ್ಲಿ ಅಧಿಕಾರ ಇಡೀ ಕೃಷಿ ರಂಗವನ್ನು ದಿವಾಳಿ ಎಬ್ಬಿಸಿದೆ. ಇದರ ವಿರುದ್ಧ ರೈತರ ಹಿತ ಕಾಯ್ದು ಪ್ರಬಲ ಐಕ್ಯ ಆಂದೋಲನ ರೂಪಿಸಲು ರಾಜ್ಯಮಟ್ಟದ ಸಮಾವೇಶವನ್ನು ಮಂಗಳೂರಿನ ಡಾನ್‌ಬಾಸ್ಕೋ ಸಭಾಂಗಣದಲ್ಲಿ ಸಂಘಟಿಸಲಾಗಿತ್ತು. ಡಿಸೆಂಬರ್ 15 ರಂದು ನಡೆದ ಸಮಾವೇಶದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರೂ ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಉದ್ಘಾಟಿಸಿದರು. 1991 ರ ಕಾಂಗ್ರೆಸ್ ಸರಕಾರ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವುದರ ಮುಖಾಂತರ ಕೃಷಿ ರಂಗದಲ್ಲಿ ಬಿಕ್ಕಟ್ಟು ಪ್ರಾರಂಭವಾಗಿದೆ. ಗ್ಯಾಟ್ ಒಪ್ಪಂದದ ವಿರುದ್ಧ ಅಂದು ನಡೆಯುತ್ತಿರುವ ಹೋರಾಟದ ಬಗ್ಗೆ ಜನರು ಅಷ್ಟೊಂದು ತಲೆಕೆಡಿಸಿಕೊಂಡಿರಲಿಲ್ಲ. ಆದರೆ ಈಗ ಅದರ ಪರಿಣಾಮ ಅರ್ಥವಾಗುತ್ತಿದೆ. ಅಂದು ಗೇಲಿ ಮಾಡಿರುವ ಜನ ಇಂದು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಬಲಿಷ್ಟ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳ ಮೇಲೆ ತಮ್ಮ ಶರತ್ತುಗಳನ್ನು ಗ್ಯಾಟ್ ಒಪ್ಪಂದದ ಮುಖಾಂತರ, ಡಬ್ಲ್ಯುಟಿಒ, ವಿಶ್ವಬ್ಯಾಂಕ್, ಐ.ಎಂ.ಎಫ್. ಮುಖಾಂತರ ಶರತ್ತುಗಳನ್ನು ಹೇರುತ್ತಿದ್ದು, ಆ ಶರತ್ತನ್ನು ನಮ್ಮ ದೇಶದ ಸರಕಾರ ಜಾರಿಗೊಳಿಸಿರುವುದೇ ಇವತ್ತು ಕೃಷಿರಂಗ ಬಿಕ್ಕಟ್ಟಿಗೆ ಸಿಲುಕಲು ಕಾರಣವಾಗಿದೆ. ಎನ್‌ಡಿಎ ಕೇಂದ್ರ ಸರ್ಕಾರ ಕೃಷಿ ರಂಗಕ್ಕೆ ನೀಡುತ್ತಿರುವ ಸಬ್ಸಿಡಿ ಕಡಿತ ಮಾಡಿದೆ, ಬಜೆಟಿನಲ್ಲಿ ಕೃಷಿಗಾಗಿ ಬಿಡುತ್ತಿದ್ದ ಹಣದಲ್ಲಿ ಶೇ 60 ಕಡಿತ ಮಾಡಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಬಂಡವಾಳ ಹೂಡಿಕೆಗೆ ನೀಡುವ ಮೊತ್ತದಲ್ಲಿ 1998-99 ರಲ್ಲಿ ಶೇ 16 ಇಳಿಸಿದೆ. ಈ ರೀತಿ ಕೇಂದ್ರ ಸರ್ಕಾರ ಕೃಷಿರಂಗವನ್ನು ಸಂಪೂರ್ಣ ಕಡೆಗಣಿಸಿದೆ. ಕೃಷಿಗೆ 6,000 ಕೋಟಿ ರೂಪಾಯಿ ಸಬ್ಸಿಡಿ ಕೊಟ್ಟರೆ ದೇಶ ದಿವಾಳಿಯಾಗುತ್ತದೆ ಎನ್ನುವ ಕೇಂದ್ರ ಸರ್ಕಾರ ದೊಡ್ಡ ದೊಡ್ಡ ಬಂಡವಾಳಗಾರರು 60,000 ಕೋಟಿ ರೂಪಾಯಿಯನ್ನು ಬಾಕಿ ಇಟ್ಟಿರುವುದರ ಬಗ್ಗೆ ಚಕಾರವೆತ್ತುವುದಿಲ್ಲವೆಂದು ಅವರು ಹುಂಗಿಸಿದರು. ನಮ್ಮ ದೇಶದ ರೈತರಿಗೆ ಸಬ್ಸಿಡಿ ನೀಡಬಾರದೆಂದು ನಿರ್ದೇಶನ ನೀಡುವ ಅಮೆರಿಕಾ ಸರಕಾರ ವಿಶ್ವದಲ್ಲೇ ಅತಿ ಹೆಚ್ಚು ಸಬ್ಸಿಡಿಯನ್ನು ಅಲ್ಲಿನ ರೈತರಿಗೆ ನೀಡುತ್ತಿದೆ. ಇದು ವಿಪರ್ಯಾಸವೆಂದು ಅವರು ಹೇಳಿದರು.

ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದನಂತರ WTO ಒಪ್ಪಂದದ ಹೆಸರಿನಲ್ಲಿ ಆಮದಿನ ಮೇಲೆ ಇರುವ ಎಲ್ಲಾ ನಿರ್ಬಂಧವನ್ನು ತೆಗೆದು ಹಾಕಿದೆ. ಶ್ರೀರಾಮಕೃಷ್ಣ ಹೆಗಡೆಯವರು ವಾಣಿಜ್ಯ ಸಚಿವರಾಗಿದ್ದಾಗ ಪ್ರಾರಂಭವಾಗಿ 618 ಈಗ 714 ವಸ್ತುಗಳ ಮೇಲಿನ ನಿರ್ಬಂಧ ತೆಗೆದುಹಾಕಿರುವುದರಿಂದ ಅದರಲ್ಲಿ ಸೇರಿರುವ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯ ಬೆಲೆ ಇಲ್ಲದಂತಾಗಿದೆ. ಕೇಂದ್ರ ಸರಕಾರದ ಸಚಿವ ತಮ್ಮ ಜವಾಬ್ದಾರಿಯನ್ನು ಮರೆಮಾಚಿ ರಾಜ್ಯ ಸರ್ಕಾರಗಳ ಜವಾಬ್ದಾರಿ ಎನ್ನುತ್ತಾ ಸುಳ್ಳುಗಳ ಕಂತನ್ನೇ ಸೃಷ್ಟಿಸುತ್ತಾರೆ ಎಂದ ಅವರು ಎಳೆಎಳೆಯಾಗಿ ಕೇಂದ್ರ ಸರಕಾರದ ಆರ್ಥಿಕ ನೀತಿಯೇ ಅಡಿಕೆ ಮತ್ತು ತೆಂಗು ಬೆಳೆಗಳ ಬೆಲೆ ಕುಸಿತಕ್ಕೆ ಕಾರಣ ಎನ್ನುತ್ತಾ ಎಲ್ಲಾ ರೈತ ಸಂಘಟನೆಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಸರಕಾರದ ವಿರುದ್ಧ ಐಕ್ಯಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ ರಾಜ್ಯ ರೈತ ಸಂಘದ ಪ್ರದಾನ ಕಾರ್ಯದರ್ಶಿ ಎಚ್.ಆರ್.ಬಸವರಾಜಪ್ಪನವರು ಒಂದು ಕಾಲದಲ್ಲಿ ಅದೃಶ್ಯವಾಗಿದ್ದು ರೈತ ಚಳುವಳಿ ಇಂದು ಸಾಮಾನ್ಯವಾಗಿದೆ. ಯಾವುದೇ ದೇಶದಅಭಿವೃದ್ಧಿ ಹೊಂದಬೇಕಾದರೆ ಕಸುಬುದಾರರು ಮಾಡುವ ಕೃಷಿಗೆ ಲಾಭಾದಾಯಕವಾಗಬೇಕು. ಬರಗಾಲದ ಸಮಯದಲ್ಲಿ ಅನ್ನ ನೀಡಿದ ರೈತ ಇಂದು ಬಡವನಾಗಿದ್ದಾನೆ. ರೈತರಿಗೆ ಯಾರೂ ತಂತ್ರಜ್ಞಾನ ನೀಡಿಲ್ಲ. ಆತನೇ ಎಲ್ಲವನ್ನೂ ಕಲಿತುಕೊಂಡಿದ್ದಾನೆ. ಕಷ್ಟಪಟ್ಟು ದುಡಿದು ದೇಶದ ಮರ್ಯಾದೆ ಉಳಿಸಿದ್ದಾರೆ. ಇಂದು ಆತನ ಬೆಳೆಗೆ ಸರಿಯಾದ ಬೆಲೆ ಇಲ್ಲದೆ ಆತ್ಮಹತ್ಯೆ ಮಾಡುತ್ತಿದ್ದಾನೆ. ಮೂತ್ರಪಿಂಡ ಮಾರುತ್ತಿದ್ದಾನೆ ಎಂದು ಅವರು ವಿಷಾದವ್ಯಕ್ತಪಡಿಸಿದರು. ರೈತರು ಸಂಘಟಿತ ಹೋರಾಟ ಮಾಡದೆ ಈ ಸ್ಥಿತಿ ಉದ್ಭವವಾಗಿದೆ. ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕೆಂದು ಅವರು ನುಡಿದರು.

ವಿದೇಶಿ ರೈತರೊಂದಿಗೆ ಪೈಪೋಟಿ ಮಾಡಬೇಕೆಂದು ಹೇಳುವ ಸರಾಕರ ಹೊಸ ಆರ್ಥಿಕ ನೀತಿಯಿಂದಾಗಿ ಉದ್ಯೋಗ, ಕೈಗಾರಿಕೆ, ಕೃಷಿ, ನಮ್ಮ ಸಂಪತ್ತು ಅಭಿವೃದ್ಧಿಯಾಗುತ್ತದೆ ಎನ್ನುವ ಸರಾಕರ ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಉಪಯೋಗವಾಗುವ ಹಾಗೆ ಭೂಮಿಯನ್ನು ಅವರಿಗೆ ನೀಡಲು ಕಾನೂನು ತಿದ್ದುಪಡಿ ಮಾಡುತ್ತಿದ್ದಾರೆ. ನಮ್ಮ ಭೂಮಿ, ನಮ್ಮ ನೀರು, ನಮ್ಮ ಕಚ್ಚಾ ವಸ್ತುಗಳನ್ನು ಕಡಿಮೆ ಕ್ರಯದಲ್ಲಿ ಪಡೆದು ನಮಗೇನೆ ವಿಪರೀತ ಬೆಲೆಯಲ್ಲಿ ಮಾರುವ ಈ ವ್ಯವಸ್ಥೆಯಲ್ಲಿ ವಿದೇಶದವರೊಂದಿಗೆ ನಾವು ಯಾವ ರೀತಿ ಪೈಪೋಟಿ ಮಾಡಲು ಸಾಧ್ಯವೆಂದು ಅವರು ಸರಕಾರವನ್ನು ಟೀಕಿಸಿದರು. ಇಂದು ವಿದ್ಯುಚ್ಛಕ್ತಿ, ನೀರಾವರಿ ಖಾಸಗೀಕರಣವಾಗುತ್ತಿದೆ. ಎಲ್ಲವೂ ದುಬಾರಿಯಾಗುವ ಈ ಹೊತ್ತಿನಲ್ಲಿ ಮುಕ್ತ ಆಮದು ನೀತಿಯಿಂದ ರೈತ ಬೆಳೆದ ವಸ್ತುಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಸರಕಾರದ ನೀತಿಯ ವಿರುದ್ಧ ಹೋರಾಟವೇ ದಾರಿ ಎಂದು ಅವರು ರೈತರಿಗೆ ಕರೆ ನೀಡಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ರೈತ, ಕಾರ್ಮಿಕ ನಾಯಕರೂ ಆದ ಬಿ.ವಿ.ಕಕ್ಕಿಲಾಯರವರು ಮಾತನಾಡುತ್ತಾ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಭಾಗವಾಗಿ ಕೇಂದ್ರ ಸರಕಾರದ ಆರ್ಥಿಕ ನೀತಿ ಕೃಷಿಕರ ಮೇಲೆ ಪರಿಣಾಮ ಬೀರಿದ್ದು ರೈತರು ಸಂದರ್ಭಸಾಧಕ ನಿಲುವು ತೆಗೆದುಕೊಳ್ಳದೆ ಐಕ್ಯ ಹೋರಾಟ ನಡೆಸಬೇಕೆಂದು ಹೇಳಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಮಾತನಾಡುತ್ತಾ ಕೃಷಿಕರ ಬೆಳೆ ಬರುವ ಸಂದರ್ಬದಲ್ಲಿಯೇ ಬೆಲೆ ಕುಸಿತವಾಗುತ್ತಿದೆ. ಆಳುವ ವರ್ಗ ರೈತರನ್ನು ದಾರಿ ತಪ್ಪಿಸಲು ಬೇರೆ ಬೇರೆ ಹೇಳಿಕೆಗಲನ್ನು ನೀಡುತ್ತಿದೆ. ದೇಶಿಯ ಬಂಡವಾಳಗಾರರ ಹಿಡಿತದಲ್ಲಿದ್ದ ಮಾರುಕಟ್ಟೆಯನ್ನು ಈಗ ಅಂತರ್ರಾಷ್ಟ್ರೀಯ ಮಾರುಕಟ್ಟೆಗೆ ಒಯ್ಯಲಾಗಿದೆ. ಸರಕಾರದ ರೈತ ವಿರೋಧಿ ಆರ್ಥಿಕ ನೀತಿ ಎಲ್ಲಾ ರೈತರಿಗೆ ಪರಿಣಾಮ ಬೀರಿದೆ. ಶೇಂಗ, ಎಣ್ಣೆಕಾಳು ಬೆಳೆಗಳ ಬೆಲೆ ಕುಸಿತವಾದಾಗ ಬೇರೆ ಕೃಷಿಗೆಒಯ್ಯಬಹುದಾಗಿದೆ. ಆದರೆ ಅಡಿಕೆ, ತೆಂಗು ಬೆಳೆಗೆ ಬೆಲೆ ಕುಸಿತವಾದಾಗ ಬೇರೆ ಕೃಷಿಗೆ ಹೋಗಲು ಸಾಧ್ಯವಿಲ್ಲ. ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಿರುವ ಕಾಂಗ್ರೆಸ್ ಸರ್ಕಾರಕ್ಕೆ ಜನತೆ ಗೇಟ್ ಪಾಸ್ ನೀಡಿದ್ದಾರೆ. ಅದೇ ನೀತಿಯನ್ನು ಮುಂದುವರಿಸುತ್ತಿರುವ ಎನ್‌ಡಿಎ ಸರ್ಕಾರಕ್ಕೂ ಇದೇ ರೀತಿ ಗೇಟ್‌ಪಾಸ್ ನೀಡುವ ಪರಿಸ್ಥಿತಿ ಉದ್ಭವವಾಗಿದೆ ಎಂದರು.

ಸುಳ್ಯದ ವಕೀಲರೂ, ಕೃಷಿಕರೂ ಹಾಗೂ ರೈತ ಮುಖಂಡರೂ ಆಗಿರುವ ಸೂರ್ಯನಾರಾಯಣ ಭಟ್‌ರವರು ಮಾತನಾಡುತ್ತಾ ನಿಜವಾದ ಕಾರಣಗಳನ್ನು ಬದಿಗಿರಿಸಿ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಬೊಂಡ ಮೇಳವನ್ನು ಮಾಡುತ್ತಾ ಸರಕಾರದ ಪ್ರತಿನಿಧಿಗಳನ್ನು ಆಹ್ವಾನಿಸಿ ಏಕದಿನದ ಕಾರ್ಯಕ್ರಮ ನಡೆಸುತ್ತಿರುವುದನ್ನು ಟೀಕಿಸುತ್ತಾ, ಸರಕಾರದ ವಕ್ತಾರರು ರೈತರನ್ನು ದಾರಿತಪ್ಪಿಸುತ್ತಿದ್ದಾರೆ. ಇಂದು ಬೊಂಡಾ ಕುಡಿಯಿರಿ ಎನ್ನುತ್ತಾ ನಾಳೆ ಕಳ್ಳು ಕುಡಿಯಿರಿ, ಮುಂದೊಂದು ದಿನ ತೆಂಗಿನ ಗಿಡಗಳನ್ನು ಕಡಿದು ಮನೆಗಳಿಗೆ ಪಕಾಸು ಹಾಕಿರಿ ಎನ್ನುವ ದಿನ ದೂರವಿಲ್ಲವೆಂದ ಅವರು, ರೈತರ ಕೈಯಲ್ಲಿ ಹಣವಿಲ್ಲದಿದ್ದರೆ ಏನು ನಡೆಯುವುದಿಲ್ಲ, ರೈತರು ದೇಶದ ಆಧಾರಸ್ತಂಭ. ರೈತರು ಸರಕಾರದ ನೀತಿಯ ವಿರುದ್ಧ ಹೋರಾಟ ನಡೆಸುವುದು ಅನಿವಾರ್ಯ ಎಂದರು.

ಸ್ವತಃ ರೈತರೂ, ವಕೀಲರೂ ಆಗಿರುವ ಶಂಕರ ನಾರಾಯಣ ಭಟ್ಟರು ಮಾತನಾಡುತ್ತಾ ಕೇಂದ್ರ ಸರ್ಕಾರದ ಸಚಿವರು ರೈತರ ಉತ್ಪನ್ನಗಳಿಗೆ ಬೆಲೆ ಕುಸಿತವಾಗಿರುವ ಬಗ್ಗೆ ದಿನೇ ದಿನೇ ಸುಳ್ಳು ಸುಳ್ಳು ಹೇಳಿಕೆಗನ್ನು ನೀಡುತ್ತಿದ್ದಾರೆ. ಜಿಲ್ಲೆಯ ಉನ್ನತ ಮಟ್ಟದ ನಿಯೋಗವು ಕೇಂದ್ರ ಕೃಷಿ ಸಚಿವರಾದ ನಿತಿಶ್ ಕುಮರ್‌ರವರನ್ನು ಭೇಟಿಯಾದಾಗ ಸತ್ಯಶೋಧನ ಸಮಿತಿಯನ್ನು ನಡೆಸಲಾಗುವುದು ಎಂದು ತಿಳಿಸಿದ್ದರೂ, ಇನ್ನೂ ರಚಿಸಲಾಗಿದ್ದ. ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿಯ ವಿರುದ್ಧ ರೈತರು ಹೋರಾಡಬೇಕಾಗಿದೆ ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿಯವರು ಸಮಾವೇಶದಲ್ಲಿ ನಿರ್ಣಯವನ್ನು ಮಂಡಿಸಿದರು. ಸಮಾವೇಶದ ಅಧ್ಯಕ್ಷತೆಯನ್ನು ಜಿಲ್ಲೆಯ ರೈತ ಮುಖಂಡರಾದ ಕೆ.ಆರ್.ಶ್ರೀಯಾನ್‌ರವರು ವಹಿಸಿದ್ದು, ರೈತರು ಭ್ರಮನಿರಸನರಾಗದೆ ಕೇಂದ್ರ ಸರ್ಕಾರದ ತಪ್ಪು ನೀತಿಯ ವಿರುದ್ಧ, ಮುಕ್ತ ಆಮದು ನೀತಿಯ ವಿರುದ್ಧ ತೀವ್ರ ಹೋರಾಟ ನಡೆಸಬೇಕೆಂದು ಅವರು ಕರೆ ನೀಡಿದರು.

ವೇದಿಕೆಯಲ್ಲಿ ತುಮಕೂರು ರೈತ ಮುಖಂಡರಾದ ಉಮೇಶ್, ಉತ್ತರ ಕನ್ನಡ ರೈತ ಮುಖಂಡರಾದ ಶಾಂತಾರಾಮ ನಾಯಕ್‌ರವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಸ್ವಾಗತಿಸಿ, ಅಧ್ಯಕ್ಷರಾದ ಅಬ್ರಹಂ ಕರ್ಕಡರವರು ಧನ್ಯವಾದ ಅರ್ಪಿಸಿದರು. ವಿಶಾಲನೆಲೆಯಲ್ಲಿ ರೈತ ಸಮುದಾಯವನ್ನು ಸಂಘಟಿಸಲು ನಡೆದ ಯಶಸ್ವಿ ಸಮಾವೇಶ ಇದಾಗಿದೆ. ಹಂತಹಂತವಾಗಿ ಹೋರಾಟ ರೂಪಿಸಲಾಗುತ್ತಿದೆ.

ವರದಿ- **ನಾಗೇಶ್‌ಕುಮಾರ್**



"ಕೃಷಿ ಉಳಿಸಿ, ದೇಶ ರಕ್ಷಿಸಿ," ಆಂದೋಲನಕ್ಕೆ ಕರೆ

ಭತ್ತ, ಜೋಳ, ತೊಗರಿ ಬೆಳೆಗಾರರ ರಾಜ್ಯ ಮಟ್ಟದ ಸಮಾವೇಶ

ಕೇಂದ್ರಸರ್ಕಾರ ನಿಗದಿ ಮಾಡಿರುವ ಬೆಂಬಲ ಬೆಲೆಗಳನ್ನು ಪರೀಕ್ಷಿಸಿ ಭತ್ತ ಕ್ವಿಂಟಾಲ್‌ಗೆ 750-00 ಮೆಕ್ಕೆ ಜೋಳ -550-00, ಜೋಳ - 650.00ರೂ ಮತ್ತು ತೊಗರಿ-2000.00ರೂ. ಬೆಂಬಲ ಬೆಲೆ ನಿಗದಿ ಮಾಡಬೇಕು ಮತ್ತು ಬೆಲೆ ಕುಸಿತಗಳಿಂದ ರೈತರನ್ನು ರಕ್ಷಿಸಲು ತಕ್ಷಣ ಕೇಂದ್ರ ಸರ್ಕಾರ ಮಾರುಕಟ್ಟೆಯಲ್ಲಿ ಅಗತ್ಯ ಪ್ರಮಾಣದಲ್ಲಿ ಮಧ್ಯ ಪ್ರವೇಶಿಸಬೇಕೆಂದು ರಾಜ್ಯ ಮಟ್ಟದ ಈ ಸಮಾವೇಶ ಆಗ್ರಹಿಸಿದೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಒತ್ತಡವನ್ನು ತರಬೇಕೆಂದು ಸಮಾವೇಶ ಒತ್ತಾಯಿಸಿದೆ.

ತಕ್ಷಣ ಈ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರಗಳು ಮುಂದಾಗದಿದ್ದಲ್ಲಿ ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ, ಬೀದರ್ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಪ್ರಥಮ ಹಂತದ ಹೋರಾಟವಾಗಿ ಜನವರಿ 2001ರ 2ನೇ ವಾರದಲ್ಲಿ ಎಲ್ಲಾ ಕೃಷಿ ಮಾರುಕಟ್ಟೆ (ಎ.ಪಿ.ಎಂ.ಸಿ)ಗಳ ಎದುರು ಸಮೂಹಿಕ ಧರಣಿ ನಡೆಸಲು ಮತ್ತು ಫೆಬ್ರವರಿ 5 ರಿಂದ 7,2001,3 ದಿನಗಳ ಕಾಲ ಇಡೀ ರಾಜ್ಯಾದ್ಯಂತ ಕೇಂದ್ರ ಸರ್ಕಾರದ ಕಛೇರಿಗಳ ಪಿಕೆಟಿಂಗ್, ರೈಲು ತಡೆ ಚಳುವಳಿಯನ್ನು ನಡೆಸಿ, ಸಾವಿರಾರು ರೈತಕೂಲಿಕಾರರು ಬಂದನಕೆ ಒಳಗಾಗಬೇಕೆಂದು ಈ ಸಮಾವೇಶ ರೈತ ಕೂಲಿಕಾರರಿಗೆ ಕರೆ ನೀಡಿದೆ.

ಕೇಂದ್ರ ಸರ್ಕಾರ ಕೃಷಿ ವಿರೋಧಿ ಆಮದು ರಪ್ತು ನೀತಿ ಮತ್ತು ನಿರ್ಲಕ್ಷ ಧೋರಣೆಯಿಂದ ಭತ್ತ, ಜೋಳ, ತೊಗರಿ ಇತ್ಯಾದಿ ಬೆಳೆಗಳನ್ನು ಬಾರಿ ದೊಡ್ಡ ಪ್ರಮಾಣದಲ್ಲಿ ಬೆಳೆಯುವ ಉತ್ತರ ಕರ್ನಾಟಕ ಪ್ರದೇಶದ ಲಕ್ಷಾಂತರ ರೈತ ಕೂಲಿಕಾರರ ಬದುಕು ಅತ್ಯಂತ ಸಂಕಷ್ಟಕ್ಕೆ ಗುರಿಯಾಗಿದೆ.

ಹಲವು ವರ್ಷಗಳ ಹಿಂದೆ ರಾಯಚೂರಿನ ಸುತ್ತಮುತ್ತ ಹತ್ತಿ, ಮತ್ತು ಎಣ್ಣೆಕಾಳು ಕೃಷಿ ಲಕ್ಷಾಂತರ ರೈತ ಕೂಲಿಕಾರರ ಜೀವನಾಧಾರವಾಗಿತ್ತು. ಆದರೆ ಕೇಂದ್ರದಲ್ಲಿ ಅಧಿಕಾರ ನಡೆಸಿದ ಸರ್ಕಾರಗಳು ಅನುಸರಿಸಿದ ನೀತಿಗಳ ಫಲವಾಗಿ 11 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಇದ್ದ ಹತ್ತಿ ಈಗ 6 ಲಕ್ಷ ಹೆಕ್ಟೇರಿಗೆ ಇಳಿದಿದೆ. ಮುಂದಿನ ಕೆಲವು ವರ್ಷಗಳಲ್ಲಿ ಹತ್ತಿ ಬೆಳೆ ಸಂಪೂರ್ಣ ನಾಶವಾಗಿ ನಮ್ಮಿಂದ ದೂರವಾಗಲಿದೆ. ಇದೇ ರೀತಿಯಲ್ಲಿ ಕೇಂದ್ರ ಸರ್ಕಾರ ಎಣ್ಣೆಯನ್ನು ಮುಕ್ತ ಪರವಾನಗಿ ಪಟ್ಟಿಗೆ ಸೇರಿಸಿ, ವಿದೇಶಿ ಎಣ್ಣೆಗಳ ಆಮದಿನ ಮೇಲೆ ಇದ್ದ ಸುಂಕವನ್ನು ಶೇ. 65 ರಿಂದ ಶೇ. 15ಕ್ಕೆ ಇಳಿಸಿ. ವಿದೇಶಗಳಿಂದ ಲಕ್ಷ ಲಕ್ಷ ಟನ್‌ಗಟ್ಟಲೆ ಎಣ್ಣೆಯನ್ನು ದೇಶಕ್ಕೆ ಆಮದು ಮಾಡಿ, ದೇಶಿಯ ಎಣ್ಣೆ ಮತ್ತು ಎಣ್ಣೆಕಾಳುಗಳಿಗೆ ಬೆಲೆ ಇಲ್ಲದಂತ ಸ್ಥಿತಿಯನ್ನು ನಿರ್ಮಾಣ ಮಾಡಿ, ಈ ಪ್ರದೇಶದ ಪ್ರಮುಖ ಬೆಳೆಯಾದ ಎಣ್ಣೆಕಾಳು ಕೃಷಿಯನ್ನು ಸಹ ಬಿಕ್ಕಟ್ಟಿಗೆ ದೂಡಲಾಗಿದೆ. ಇತ್ತೀಚಿಗೆ ಬಾರಿ ಪ್ರತಿರೋಧ ವ್ಯಕ್ತಗೊಂಡ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಆಮದು ಸುಂಕವನ್ನು ಶೇ. 36ಕ್ಕೆ ಏರಿಸಿದೆ.

ಹೀಗೆ ಸರ್ಕಾರದ ಆಮದು ರಪ್ತು ನೀತಿಗಳಿಂದ ತೀವ್ರ ಬಿಕ್ಕಟ್ಟಿಗೆ ಸಿಲುಕಿದ ಈ ಪ್ರದೇಶದ ಕೃಷಿಕರು, ಈಗ ತೊಗರಿ ಮತ್ತು ಮೆಕ್ಕೆಜೋಳ ಸಹ ವಿದೇಶಗಳಿಂದ ಆಮದಾಗುತ್ತಿರುವದರಿಂದ ಬೆಲೆಗಳು ಕುಸಿದು ತತ್ತರಿಸ ತೊಡಗಿದ್ದಾರೆ. ಇದರ ಜೊತೆಗೆ ಭತ್ತದ ಬೆಲೆಯು ವಿಪರೀತವಾಗಿ ಕುಸಿದು ಕೊಪ್ಪಳ, ಗಂಗಾವತಿ, ಬಳ್ಳಾರಿ, ಇತ್ಯಾದಿ ಕಡೆ ರೈತರು ಸ್ವಯಂ ಪ್ರೇರಣೆಯಿಂದ ಬೆಲೆ ಕುಸಿತಗಳ ವಿರುದ್ಧ ಉಗ್ರ ಪ್ರತಿಭಟನೆಗಳನ್ನು ಮಾಡಿದ್ದಾರೆ. ಜಿಲ್ಲಾ ಬಂದ್‌ಗಳನ್ನು ನಡೆಸಿದ್ದಾರೆ, ಆದರೂ ಸಹ ಸರ್ಕಾರಗಳು ಈ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿಲ್ಲ.

ಈ ಹಿನ್ನೆಲೆಯಲ್ಲಿ ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ, ಬೀದರ್ ಗುಲಬರ್ಗಾ ಜಿಲ್ಲೆಗಳ ಸುಮಾರು ಸಾವಿರ ರೈತರು ಭಾಗವಹಿಸಿದ ಸಮಾವೇಶ ಕೇಂದ್ರ ಸರ್ಕಾರ ಕುಸಿಯುತ್ತಿರುವ ಕೃಷಿ ಉತ್ಪನ್ನಗಳ ಬೆಂಬಲ ಬೆಲೆ ನಿಗದಿ ಮಾಡಬೇಕು. "ವ್ಯಾಪಕವಾಗಿ ಕೊಂಡುಕೊಳ್ಳುವ ಕೇಂದ್ರಗಳನ್ನು ತೆರೆಯಬೇಕು ದೇಶೀಯ ಮಾರುಕಟ್ಟೆಯನ್ನು ರಕ್ಷಿಸಲು ವಿಶ್ವ ವ್ಯಾಪಾರಿ ಸಂಘಟನೆ (ಡಬ್ಲ್ಯೂ.ಟಿ.ಓ.) ಒಪ್ಪಂದಗಳಲ್ಲಿರುವ ಅವಕಾಶಗಳನ್ನು ಉಪಯೋಗಿಸಿ ವಿದೇಶಗಳಿಂದ ಬರುತ್ತಿರುವ ಕೃಷಿ ಉತ್ಪನ್ನಗಳ ಮೇಲೆ ಅಗತ್ಯವಿರುವ ಆಮದು ಸುಂಕ ಕೌಂಟರ್‌ವೈಲಿಂಗ್ ಸುಂಕಗಳನ್ನು ವಿಧಿಸಬೇಕು. ತೊಗರಿ ಬೆಳೆಗಾರರನ್ನು ರಕ್ಷಿಸಲು ತೊಗರಿ ಮಂಡಳಿಯನ್ನು ರಚಿಸಬೇಕೆಂದು ಸರಕಾರಗಳನ್ನು ಆಗ್ರಹಿಸಿತು. ಕೃಷಿ ಉಳಿಸಿ, ದೇಶ ಉಳಿಸಿ ಆಂದೋಲನವನ್ನು ವ್ಯಾಪಕಗೊಳಿಸಲು ಮತ್ತು ವಿಶಾಲಗೊಳಿಸಲು ಕರೆ ನೀಡಲಾಯಿತು.

ರಾಯಚೂರಿನ ಮಹಿಳಾ ಸಮಾಜ ವಿಶಾಲ ಮೈದಾನದಲ್ಲಿ ಡಿಸೆಂಬರ್ 30, 2000 ದಂದು ನಡೆದ ಸಮಾವೇಶವನ್ನು ಅಖಿಲಭಾರತ ರೈತ ಸಂಘ (AIKS) ನ ಪ್ರಧಾನ ಕಾರ್ಯದರ್ಶಿ ಕೆ. ವರದರಾಜನ್ ಉದ್ಘಾಟಿಸಿದರು.

ಪಶ್ಚಿಮ ಬಂಗಾಳಗಲಭೆ-ಚುನಾವಣೆ ಮೇಲೆ ಕಣ್ಣು?

ಇನ್ನು ಕೆಲವೇ ತಿಂಗಳುಗಳಲ್ಲಿ ನಡೆಯಲಿರುವ ಅಸೆಂಬ್ಲಿ ಚುನಾವಣೆಯಲ್ಲಿ ಹೇಗಾದರೂ ಮಾಡಿ ಅಧಿಕಾರ ಹಿಡಿಯಬೇಕೆಂಬ ಕಮ್ಯುನಿಸ್ಟ್ ವಿರೋಧಿಗಳ ಕೂಟ, ಅದರಲ್ಲೂ ತೃಣಮೂಲ ಕಾಂಗ್ರೆಸ್, ಪಶ್ಚಿಮ ಬಂಗಾಳದ ವಿವಿಧೆಡೆಗಳಲ್ಲಿ ಗಲಭೆ, ಹಿಂಸೆಗಳಿಗೆ ಪ್ರಚೋದನೆ ನೀಡಿ, ರಾಷ್ಟ್ರಪತಿ ...ತ್ತಾಯಿಸುತ್ತಿದೆ. ಕೇಂದ್ರ ಸರ್ಕಾರದ 'ಪ್ರಾಕ್ಸಿ' ಆ... ತದ ಮೂಲಕ ಅಧಿಕಾರದ ಗದ್ದುಗೆಯನ್ನೇರಬೇಕೆಂಬ ಹುಚ್ಚು ಆಸೆ. ರೈಲ್ವೆ ಇಲಾಖೆಯನ್ನೇ ಸರಿದೂಗಿಸಿಕೊಂಡು ಹೋಗಲಾರದ 'ರಾಜೀನಾಮೆ ರಾಣಿ' ಮಮತಾ ಬ್ಯಾನರ್ಜಿಗೆ ಮ...ಮಂತ್ರಿಯಾಗಬೇಕೆಂಬ ಕನಸು. ಅದಕ್ಕಾಗಿ ಗ...-ಸುಳ್ಳು ಆರೋಪ-ರಾಷ್ಟ್ರಪತಿ ಆಳ್ವಿಕೆಗೆ ಆಗ್ರಹ ಇತ್ಯಾದಿಗಳ ಸೃಷ್ಟಿ.

5-6 ತಿಂಗಳ ಹಿಂದೆ ಮಿಡ್ನಾಪುರ ಜಿಲ್ಲೆಯಲ್ಲಿ ಜರುಗಿದ ಸರಣಿ ಗಲಬೆಗಳಿಂದ ತತ್ತರಿಸಿದ ಜನ ಊರನ್ನೇ ತ್ಯಜಿಸಬೇಕಾಯಿತು. ಬಂಗಾಳದ ಲೇಡಿ ... ಮಮತಾ ಬ್ಯಾನರ್ಜಿ ರಾಷ್ಟ್ರಪತಿ ಆಳ್ವಿಕೆಗೆ ...ಸಿದ್ದರು. ಕೇಂದ್ರ ಸರ್ಕಾರದ ಮೇಲೆ ಒತ್ತಡ ... ರಾಜೀನಾಮೆ ನಾಟಕವಾಡಿದರು. ಪಶ್ಚಿಮ ಬಂಗಾಳ ಜನತೆಯ ಮತ್ತು ಸರ್ಕಾರದ ತೀವ್ರ ಪ್ರತಿಭಟನೆಯ ನಂತರ, ಬಿಜೆಪಿ ನೇತೃತ್ವದ ಸರಕಾರ ...ದೆ ಸರಿದಿತ್ತು. ಈ ಗಲಭೆಗಳಲ್ಲಿ 98 ಮಂದಿ ಸಿಪಿಐ(ಎಂ) ಕಾರ್ಯಕರ್ತರನ್ನು ಹತ್ಯೆಗೈಯಲಾಯಿತು. ಆದರೂ ಎಡ ಪಕ್ಷಗಳ ಮತ್ತು ಬಂಗಾಳ ಸರಕಾರದ ಮಧ್ಯಪ್ರವೇಶದಿಂದಾಗಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯ್ತು.

ಇದೀಗ ಚುನಾವಣೆ ಹತ್ತಿರ ಬಂದಂತೆ ಇನ್ನೊಮ್ಮೆ ಕುತಂತ್ರ ನಡೆಯುತ್ತಿದೆ. ಈ ಬಾರಿ ತೃಣಮೂಲ, ಬಿಜೆಪಿ ಕೂಟದೊಂದಿಗೆ ನಕ್ಸಲೀಯರೂ ಸೇರಿಕೊಂಡಿದ್ದಾರೆ.

ಜನವರಿ 5 ರ ಘಟನೆ: ಮಿಡ್ನಾಪುರ ಜಿಲ್ಲೆಯ ಗರ್ಬೆಟಾದಲ್ಲೊಂದು ಮನೆ. ಆ ಮನೆಯಲ್ಲಿದ್ದ 18 ಜನ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರನ್ನು ಹತ್ಯೆ ಮಾಡಲಾಗಿದೆ ಎಂದು ಮಮತಾ ಬ್ಯಾನರ್ಜಿ ಆರೋಪ. ಅವರು ತೃಣಮೂಲ ಕಾಂಗ್ರೆಸ್‌ನವರಲ್ಲ ನಮ್ಮ ಕಾರ್ಯಕರ್ತರು ಎಂದು ನಕ್ಸಲೀಯ ಪೀಪಲ್ಸ್ ವಾರ್‌ಗ್ರೂಪ್‌ನಹೇಳಿಕೆ.



ಆದರೆ ಪೋಲೀಸ್ ವಿಚಾರಣೆಯ ನಂತರ ಬೆಳಕಿಗೆ ಬಂದ ಅಂಶಗಳೇ ಬೇರೆ. ಆ ಮನೆಯಲ್ಲಿ ಭಾರಿ ಪ್ರಮಾಣದ ಬಾಂಬ್‌ಗಳನ್ನು ಮತ್ತು ಶಸ್ತ್ರಗಳನ್ನು ಶೇಖರಿಸಲಾಗಿತ್ತು. ಅವುಗಳ ಸ್ಫೋಟದಿಂದಾಗಿ ಮನೆಗೆ ಬೆಂಕಿ ಹತ್ತಿಕೊಂಡಿತ್ತು. ಮನೆಯೊಳಗಿದ್ದವರು ಹತ್ಯೆಯಾಗಿರಲಿಲ್ಲ. ಬದಲಾಗಿ ಓಡಿ ಹೋಗಿದ್ದರು. ಬೆಳಕಿಗೆ ಬಂದ ಇನ್ನೊಂದು ಅಂಶವೆಂದರೆ ಅವರೆಲ್ಲರೂ ಕ್ರಿಮಿನಲ್‌ಗಳಾಗಿದ್ದು ಪೋಲೀಸರಿಗೇ ಬೇಕಾದವರಾಗಿದ್ದರು. ತಮಾಷೆಯೆಂದರೆ ಕಾಣೆಯಾಗಿದ್ದಾರೆ ಎಂದು ದೂರು ದಾಖಲಿಸಲು ಬಂದ ವ್ಯಕ್ತಿಯೂ ಪೋಲೀಸ್‌ಗೆ ಬೇಕಾದವನಾಗಿದ್ದ. ಅವರ್‍ಯಾರೂ ಕೂಡಾ ಆ ಊರಿನವರಾಗಿರಲಿಲ್ಲ.

ಹಾಗಾದರೆ ಬಾಂಬು ಮತ್ತು ಶಸ್ತ್ರಗಳನ್ನು ಶೇಖರಿಸಿದ್ದು ಏಕೆ? ಕ್ರಿಮಿನಲ್ ರೆಕಾರ್ಡ್ ಹೊಂದಿರುವ ಬೇರೆ ಊರಿನ ವ್ಯಕ್ತಿಗಳು ಅಲ್ಲಿಗೆ ಏಕೆ ಬಂದಿದ್ದರು? ಅವರು ತೃಣಮೂಲ ಕಾಂಗ್ರೆಸ್ಸಿನ ಕಾರ್ಯಕರ್ತರೇ ಅಥವಾ ನಕ್ಸಲೀಯರೇ? ಸಿಪಿಐ(ಎಂ)ನ ವಿರುದ್ಧ ತೃಣಮೂಲ ಮತ್ತು ನಕ್ಸಲೀಯರು ಒಂದಾಗಿ ಕೆಲಸ ಮಾಡುತ್ತಿರುವರೇ? ಈ ಪ್ರಶ್ನೆಗಳಿಗೆ ಬಿಜೆಪಿ - ತೃಣಮೂಲ ಕೂಟವು ಉತ್ತರಿಸಬೇಕಾಗಿದೆ.

ಕಲ್ಕತ್ತಾ ಪೋಲೀಸ್ ವರಿಷ್ಠಾಧಿಕಾರಿಗಳು ಗಲಭೆಪೀಡಿತ ಪ್ರದೇಶಗಳಿಗೆ ಭೇಟಿ ನೀಡುವ ಮೊದಲೇ ಎನ್‌ಡಿಎ ನ 'ಸತ್ಯಶೋಧನ' ತಂಡ ಬಿಜೆಪಿ ಎಂಎಲ್‌ಎ ನೇತೃತ್ವದಲ್ಲಿ ಗರ್ಬೆಟಾ ಗ್ರಾಮಕ್ಕೆ ಭೇಟಿ ನೀಡಿ 'ಸುಳ್ಳಿನ ಶೋಧನೆ'ಯಲ್ಲಿ ತೊಡಗಿತು. ಭಸ್ಮವಾಗದೆ ಉಳಿದ ಶಸ್ತ್ರಗಳನ್ನು ಕಲ್ಕತ್ತದಲ್ಲಿ, ದೆಹಲಿಯಲ್ಲಿ ಪ್ರದರ್ಶನಕ್ಕಿಟ್ಟರು. ಒಟ್ಟಾರೆಯಾಗಿ ಪಶ್ಚಿಮ ಬಂಗಾಳ ಸರಕಾರದ ವಿರುದ್ಧ, ಸಿಪಿಐ(ಎಂ) ನ ವಿರುದ್ಧ ಸುಳ್ಳು ಆರೋಪದ ಜತೆಯಲ್ಲೇ ಸುಳ್ಳು ಪ್ರಚಾರವೂ ನಡೆಯುತ್ತಿದೆ. ಮಾಧ್ಯಮವನ್ನು ಸಾಕಷ್ಟು ಬಳಸಿಕೊಳ್ಳಲಾಗುತ್ತಿದೆ.

ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಕ್ರಿಮಿನಲ್ ಆರೋಪವನ್ನು ಎದುರಿಸುತ್ತಿರುವ ಗೃಹಮಂತ್ರಿ ಲಾಲ್‌ಕೃಷ್ಣ ಅಡ್ವಾಣಿ, ಪ್ರಧಾನಿಯವರು ವಿದೇಶದಿಂದ ಹಿಂದಿರುಗಿದ ಬಳಿಕ 'ರಾಷ್ಟ್ರಪತಿ ಆಳ್ವಿಕೆ'ಯ ಬಗ್ಗೆ ಆಲೋಚಿಸುವುದಾಗಿ ಹೇಳಿಕೆ ನೀಡಿದ್ದಾರೆ. ಇವೆಲ್ಲವನ್ನು ಎದುರಿಸಿ ನಿಂತಿದ್ದಾರೆ ಪಶ್ಚಿಮ ಬಂಗಾಳದ ಪ್ರಜ್ಞಾವಂತ ಜನತೆ.

ಕಮ್ಯುನಿಸ್ಟ್ ಪಕ್ಷಕ್ಕೆ 80 ವರ್ಷಗಳು...........

ಪುಟ 5 ರಿಂದ

ಮಾಡಲಾಗಿದೆಯೇ? ಹೀಗಿರುವಾಗ ಭಾರತದಲ್ಲೇ ಮಾತ್ರ ಯಾಕೆ ಈ ನಿಷೇಧ?"

ಮೂರನೇ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಸಂಯೋಜಿತಗೊಂಡ ಗ್ರೇಟ್ ಬ್ರಿಟನ್, ...ಾ, ನ್ಯೂಜಿಲೆಂಡ್, ಕೆನಡಾ, ದ.ಆಫ್ರಿಕಾ ... ಕಡೆಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಕಾರ್ಯನಿರ್ವಹಿಸುವುದು ತಪ್ಪೆ? ಹಾಗಿರುವಾಗ ಭಾರತದ ಕಮ್ಯುನಿಸ್ಟ್ ಪಕ್ಷ ಮೂರನೇ ಕಮ್ಯುನಿಸ್ಟ್ ಅಂತಾರಾಷ್ಟ್ರೀಯದಲ್ಲಿ ಸಂಯೋಜಿತವಾಗಿರುವುದು ಹೇಗೆ ಅಪರಾಧವಾಗಿರುತ್ತದೆ?

ಇದೇ ರೀತಿ ಎಂ.ಎಸ್.ರಾಯ್ ನ್ಯಾಯಾಲಯದ ತೀರ್ಪನ್ನು ವಿರೋಧಿಸಿ ಮೊಕದ್ದಮೆಯಲ್ಲಿರುವವರಿಗೆ ಬೆಂಬಲ ನೀಡಿದಾಗ ಅಂದಿನ ರಾಷ್ಟ್ರೀಯ ಚಳುವಳಿ ಮುಖಂಡತ್ವ ಶಿಕ್ಷೆಯನ್ನು ಸರಿ ಎಂದು ಘೋಷಿಸಿಕೊಂಡರು ಮಾತ್ರವಲ್ಲ ಕಮ್ಯುನಿಸ್ಟರ ಕೆಲಸಗಳು ತಪ್ಪು ಎಂದು ಹೇಳಿಕೊಂಡರು. ಅಲ್ಲದೆ ಭಾರತದಲ್ಲಿ ಒಂದು ಕ್ರಾಂತಿಕಾರಿ ಪಿತೂರಿ ನಡೆಯುತ್ತಿದೆ ಎಂದೂ ಇದರ ಒಂದು ಭಾಗವೇ ಕಾನ್ಪುರ ಪಿತೂರಿ ಮೊಕದ್ದಮೆ ಎಂದು ಅನಿಬೆಸೆಂಟ್ ಹೇಳಿಕೆ ನೀಡಿದರು.

ಭಾರತ ಕೆಲವು ಮುಖ್ಯ ಕೇಂದ್ರಗಳಲ್ಲಿ ಅಂದು ಕೆಲಸ ಆರಂಭಿಸಿದ ಕಮ್ಯುನಿಸ್ಟ್ ಗುಂಪುಗಳು ಪರಸ್ಪರ ಸಂಬಂಧ ಬೆಳೆಸಿ ಅಖಿಲ ಭಾರತ ಮಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ರೂಪು ಕೊಡುವ, ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಆರಂಭಿಸಿದ ಶ್ರಮಕ್ಕೆ ಪ್ರತಿಫಲ ಬರುವ ಮೊದಲೇ ಬ್ರಿಟಿಷ್ ಆಡಳಿತದ ಅಧಿಕಾರಿಗಳು ಕಮ್ಯುನಿಸ್ಟರಿಗೆ ಎದುರಾಗಿ ಕಾನ್ಪುರ ಪಿತೂರಿ ಮೊಕದ್ದಮೆ ಮೂಲಕ ಕಠಿಣ ಏಟುಕೊಡಲು ಆರಂಭಿಸಿದರು. ಇದರಿಂದ ಕಮ್ಯುನಿಸ್ಟರ ಕತೆ ಮುಗಿಯಿತು ಎಂದು ಬ್ರಿಟಿಷರು ಕನಸು ಕಂಡರು. ಈ ಕನಸು ಕಾಣುವ ಸಂದರ್ಭದಲ್ಲಿ ಸತ್ಯಭಕ್ತನೆ ಎಂಬ ಕಾಂಗ್ರೆಸ್‌ಗೆ ಮಾಸ್ಕೋ ಜೊತೆ ಸಂಬಂಧವಿಲ್ಲದ, ಕಾನೂನಿಗೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸುವ ಕಮ್ಯುನಿಸ್ಟ್ ಪಕ್ಷಕ್ಕೆ ಶ್ರಮ ಪಡಲು ಪ್ರಾರಂಭಿಸಿದರು. ಕಾನ್ಪುರದಲ್ಲಿ ಮಾತ್ರ ಕೆಲಸ ಮಾಡುತ್ತಿದ್ದ ಭಾರತೀಯ ಕಮ್ಯುನಿಸ್ಟ್ ಪಕ್ಷಕ್ಕೆ ಈ ಮನುಷ್ಯ ರೂಪ ಕೊಟ್ಟಿರುವುದು ಮಾತ್ರವಲ್ಲ ಈ ವ್ಯಕ್ತಿ ಕಾನ್ಪುರದಲ್ಲಿ ಒಂದು ಕಮ್ಯುನಿಸ್ಟ್ ಪಕ್ಷದ ಕಛೇರಿ ಹಾಗೂ ಒಂದು ಪುಸ್ತಕ ಮಳಿಗೆ ಆರಂಭಿಸಿದರು. ನಂತರದಲ್ಲಿ ಒಂದು ಅಖಿಲ ಭಾರತ ಸಮ್ಮೇಳನ ಸೇರಿಸಲು ಕಾಂಗ್ರೆಸ್‌ನೊಳಗಿರುವ ಎಡ ಬೆಂಬಲಿಗರಿಂದ ಪ್ರಯತ್ನ ಮಾಡಲಾಯಿತು. ಈ ಸಮ್ಮೇಳನದಲ್ಲಿ ಭಾಗವಹಿಸಲು ಹಲವಾರು ಕಮ್ಯುನಿಸ್ಟ್ ಗುಂಪುಗಳು ತೀರ್ಮಾನಿಸಿದವು. ಇದೇ ರೀತಿ 1925 ಡಿಸೆಂಬರ್ 28 ರಿಂದ 30 ರವರೆಗೆ ಸಿಂಗಾರವೇಲು ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನ ನಡೆಯಿತು. ಬಾಂಬೆ ಕೇಂದ್ರವಾಗಿ ಕಮ್ಯುನಿಸ್ಟ್ ಪಕ್ಷ ಕಾರ್ಯ ನಿರ್ವಹಿಸಬೇಕು ಎಂಬ ನಿರ್ಣಯವನ್ನು ಈ ಸಮ್ಮೇಳನ ಅಂಗೀಕರಿಸಿತು. ಜಿ.ಜಿ.ಭಗರ್ ಹಟ್ಟಾ ಮತ್ತು ಎಸ್.ಎ.ಪಾಟೆಯವರನ್ನು ಕಾರ್ಯದರ್ಶಿಗಳಾಗಿ ಮತ್ತು ಒಂದು ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಸಮ್ಮೇಳನ ಆರಿಸಿತು.



ಭಾರತೀಯ ಕಮ್ಯುನಿಸ್ಟ್ ಪಕ್ಷದ ಮೊದಲ ಪತ್ರಿಕೆ ವಂಗಾರ್ಡ್ 1923 ರ ಸಂಚಿಕೆ

ಭಾರತದ ಎಲ್ಲಾ ಮುಖ್ಯ ಕಮ್ಯುನಿಸ್ಟ್ ಗುಂಪುಗಳ ಪ್ರತಿನಿಧಿಗಳು ಇದರಲ್ಲಿ ಒಳಗೊಂಡರು. ಈ ರೀತಿ ಭಾರತದ ಮಣ್ಣಿನಲ್ಲಿ ಭಾರತದ ಕಮ್ಯುನಿಸ್ಟ್ ಪಕ್ಷಕ್ಕೆ ರೂಪ ಕೊಡಲಾಯಿತು. (ಇದರ ಬಗ್ಗೆ ಕಾಂ. ಹರಿಕಿಷನ್ ಸಿಂಗ್ ಸುರ್ಜಿತ್ ಬರೆದ 'ಭಾರತದ ಕಮ್ಯುನಿಸ್ಟ್ ಚರಿತ್ರೆಯ ರೂಪುರೇಖೆಗಳು' ಓದಿದರೆ ಹೆಚ್ಚಿನ ವಿವರಗಳು ದೊರೆಯುತ್ತವೆ.

- ಇ.ಕೆ.ಎನ್.ರಾಜನ್

ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ) ಸ್ಥಾಪನೆಯ ಸ್ಪಷ್ಟ ದಿನಾಂಕದ ವಿಚಾರದಲ್ಲಿ ಭಾರತೀಯ ಕಮ್ಯುನಿಸ್ಟ್ ಆಂದೋಲನದಲ್ಲಿ ವಿವಾದವಿದೆ. 1925 ರ ಡಿಸೆಂಬರ್ ನಲ್ಲಿ ಕಾನ್ಪುರದಲ್ಲಿ ಪಕ್ಷ ಸ್ಥಾಪನೆಯಾಯಿತೆಂದು ಸಿಪಿಐ ಹೇಳುತ್ತದೆ. ಆದರೆ 1920 ರ ಅಕ್ಟೋಬರ್‌ನಲ್ಲಿ ತಾಷ್ಕೆಂಟಿನಲ್ಲಿ ಪಕ್ಷ ಜನ್ಮ ತಾಳಿತು ಎಂಬುದು ಸಿಪಿಐ(ಎಂ)ನ ನಿಲುವಾಗಿದೆ. ತಾಷ್ಕೆಂಟ್ ಅಥವಾ ಕಾನ್ಪುರದಲ್ಲಿ ರಚನೆಯಾದ ಪಕ್ಷಗಳಿಗೆ ಪೂರ್ಣ ಪ್ರಮಾಣದ ಕಾರ್ಯಕ್ರಮವಿರಲಿಲ್ಲ. 1930 ರಲ್ಲಷ್ಟೇ ಸಿಪಿಐನ ಪೂರ್ಣ ಪ್ರಮಾಣದ ಕಾರ್ಯಕ್ರಮ ಘೋಷಿತವಾಯಿತು. ಕಾರ್ಯಾಚರಣೆಯ ವೇದಿಕೆ(ಪ್ಲಾಟ್‌ಫಾರಂ ಆಫ್ ಆಕ್ಷನ್) ಎಂಬುದು ಅದರ ಶೀರ್ಷಿಕೆಯಾಗಿತ್ತು. ವಾಸ್ತವಿಕವಾಗಿ ಮೀರತ್ ಪಿತೂರಿ ಕೈದಿಗಳ ಬಿಡುಗಡೆಯಾದ ನಂತರವಷ್ಟೇ ಒಂದು ನಿಜವಾದ ಕೇಂದ್ರೀಕೃತ ಪಕ್ಷ 1933 ರ ಡಿಸೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂತು. ಈ ಪಕ್ಷ ಕಾರ್ಯಕ್ರಮವನ್ನು ರೂಪಿಸಿತು. ಹಾಗೂ 1934 ರಲ್ಲಿ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ಗೆ ಸಂಯೋಜನೆಗೊಂಡಿತು.

ಆದರೆ, ಇನ್ನೂ ಮುಂಚೆ ಕಮ್ಯುನಿಸಂ ಸಿದ್ಧಾಂತವನ್ನು ಪ್ರಸಾರ ಮಾಡಿದ ಟ್ರೇಡ್ ಯೂನಿಯನ್‌ಗಳು, ರೈತರು ಮತ್ತು ಕಾಂಗ್ರೆಸ್ ಪಕ್ಷದ ಒಳಗಡೆ ಕೆಲಸ ಮಾಡಲು ಆರಂಭಿಸಿದ ಗುಂಪುಗಳು ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನವನ್ನು ಕಟ್ಟಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದವು ಎನ್ನುವುದನ್ನು ಕಡೆಗಣಿಸುವಂತಿಲ್ಲ.

1920 ರ ಅಕ್ಟೋಬರ್ 17 ರಂದು ತಾಷ್ಕೆಂಟಿನಲ್ಲಿ ರಚನೆಯಾದ ಸಿಪಿಐ ಆರಂಭದಲ್ಲಿ 10 ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರಲಿಲ್ಲ. ಆದರೆ 1921 ರ ಅವಧಿಯಲ್ಲಿ ಮುಹಾಜಿರ್ ಗಳ ಪ್ರವಾಹವೇ ಹರಿಯಿತು.

ಪೂರ್ವದ ದುಡಿಮೆಗಾರರ ಕಮ್ಯುನಿಸ್ಟ್ ವಿಶ್ವವಿದ್ಯಾಲಯದಲ್ಲಿ ಅವರು ಭಾರತೀಯ ಗುಂಪನ್ನು ಸ್ಥಾಪಿಸಿದರು. ಮಹಮ್ಮದ್ ಶಫೀಕ್ ಪಕ್ಷದ ಮೊದಲ ಕಾರ್ಯದರ್ಶಿಯಾಗಿದ್ದರು. ಶಫೀಕ್ ಮತ್ತಿತರರು ಭಾರತಕ್ಕೆ ಮರಳಿ ಇಲ್ಲಿನ ಕಮ್ಯುನಿಸ್ಟ್ ಗುಂಪುಗಳ ಚಟುವಟಿಕೆಗಳಲ್ಲಿ ಪಾಲ್ಗೊಳ್ಳತೊಡಗಿದರು. ಇತರರು ದೇಶದ ಹೊರಗೆ ಇದ್ದು, ವಿವಿಧ ಸಂಘಟನೆಗಳ ಸಂಪರ್ಕವಿಟ್ಟುಕೊಂಡರು. ಈ ರೀತಿಯ ಚಟುವಟಿಕೆಯಲ್ಲಿ ತೊಡಗಿದವರಲ್ಲಿ ಎಂ.ಎನ್.ರಾಯ್ ಅಲ್ಲದೇ ಅಬಾನಿಮುಖರ್ಜಿ ಕೂಡಾ ಪ್ರಮುಖರು.

ಭಾರತದ ರಾಷ್ಟ್ರೀಯ ವಿಮೋಚನೆ ಚಳುವಳಿ ಮತ್ತು ದೇಶದ ಸಮಕಾಲೀನ ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಚರ್ಚಿಸುವ ಪುಸ್ತಕಗಳು, ಬ್ರೋಚರ್‌ಗಳು ಮತ್ತು ಲೇಖನಗಳನ್ನು 1920 ರ ಅವಧಿಯಲ್ಲಿ ರಾಯ್ ಮತ್ತು ಮುಖರ್ಜಿ ಬರೆದು ಪ್ರಕಟಿಸಿದರು. ಇವನ್ನು ಅಕ್ರಮವಾಗಿ ಭಾರತಕ್ಕೆ ತರಲಾಯಿತು. ಪೆಟ್ಟಿ ಬೂರ್ಜ್ವಾ, ರಾಷ್ಟ್ರೀಯವಾದಿಗಳಿಗೆ ಮಾರ್ಕ್ಸ್‌ವಾದವನ್ನು ಪರಿಚಯಿಸುವಲ್ಲಿ ಇವು ತುಂಬಾ ನೆರವಾದವು.

- ಸುರ್ಜಿತ್‌ರ 'ಸಮತೆಯನಾಡಿನ ಉದಯಕ್ಕಾಗಿ' ಪುಸ್ತಕದಿಂದ

ಸಿನಿಮಾ

ಬಾಲಿವುಡ್-ಮಾಫಿಯಾ ನಂಟು ಬಯಲು

'ಚೋರಿ ಚೋರಿ ಚುಪ್ಕೆ ಚುಪ್ಕೆ' ಹಿಂದಿ ಫಿಲಂನ ನಿರ್ಮಾಪಕ ಮತ್ತು ಪ್ರಮುಖ ಹಣಕಾಸು ಒದಗಿಸಿದವನ ಬಂಧನದಿಂದ ಬಾಲಿವುಡ-ಮಾಫಿಯಾ ನಂಟು ಬಯಲಾಗಲಾರಂಭಿಸಿದೆ. ಮುಂಬಯಿ ಪೋಲೀಸರು ತಮ್ಮ ತನಿಖೆಯನ್ನು ತೀವ್ರವಾಗಿ, ಗಂಭೀರವಾಗಿ ಮುಂದುವರಿಸಿದರೆ, ಇನ್ನಷ್ಟು ಬಾಲಿವುಡ್‌ನ ಪ್ರಮುಖರ ಬಣ್ಣ ಬಯಲಾಗಬಹುದು. ಬಾಲಿವುಡ್-ಮಾಫಿಯಾ ನಂಟಿನ ಕಗ್ಗಂಟು ಬಿಡಿಸಬಹುದು. ಮುಂಬಯಿಯ ಫಿಲಂ ಜಗತ್ತು ಮತ್ತು ಮಾಫಿಯಾದ ನಂಟಿನ ಬಗ್ಗೆ ಒಂದು ವರದಿ.

'ಚೋರಿ ಚೋರಿ ಚುಪ್ಕೆ ಚುಪ್ಕೆ' ಎಂಬ ಹಿಂದಿ ಫಿಲಂನ ನಿರ್ಮಾಪಕ ನಜೀಂ ರಿಜ್ವಿಯನ್ನು ಪೋಲೀಸರು ಡಿಸೆಂಬರ್ 13 ರಂದು ಮುಂಬಯಿಯ ಫಿಲಂ ಜಗತ್ತಿನ ನಟ-ನಟಿ, ಇತರ ನಿರ್ಮಾಪಕರು, ವಿತರಕರನ್ನು ಮಾಫಿಯಾ ಬಳಸಿ ಬೆದರಿಸಿದ ಆರೋಪದ ಮೇಲೆ ಬಂಧಿಸಿ ತನಿಖೆ ನಡೆಸುತ್ತಿದ್ದರು. ಎರಡು-ಮೂರು ವಾರಗಳ ತನಿಖೆ ನಂತರ ಈ ಫಿಲಂಗೆ ದೊಡ್ಡ ಪ್ರಮಾಣದಲ್ಲಿ ಹಣ ಒದಗಿಸಿದ ಪ್ರಮುಖ ವಜ್ರದ ವರ್ತಕ ಹಾಗೂ ಫಿಲಂ ಹೂಡಿಕೆದಾರ ಭರತ್ ಷಾ ಅವರನ್ನು ಅದೇ ಆರೋಪದ ಮೇಲೆ ಬಂಧಿಸಲಾಗಿದೆ. ಭರತ್ ಶಹಾ ಅವರ ಬಂಧನ ಮುಂಬಯಿಯ ಫಿಲಂ ಜಗತ್ತನ್ನು ಹಲವು ರೀತಿಯಲ್ಲಿ ನಡುಗಿಸಿದೆ.

'ಚೋರಿ ಚೋರಿ ಚುಪ್ಕೆ ಚುಪ್ಕೆ' ಗೆ ಹಣ ಒದಗಿಸಲು, ಬೇಕಾದ ನಟ-ನಟಿಯರ 'ತಾರೀಖು' ಪಡೆಯಲು ಇದರ ಜೊತೆ ಪೈಪೋಟಿಯಲ್ಲಿರುವ ಇತರ ಫಿಲಂಗಳ ನಿರ್ಮಾಪಕರು, ವಿತರಕರನ್ನೆಲ್ಲಾ ಬೆದರಿಸಲು ಮಾಫಿಯಾವನ್ನು ನಜೀಂ ರಿಜ್ವಿ ಬಳಸಿದ್ದಾರೆ ಎಂಬುದು ಪೋಲೀಸರ ಆಪಾದನೆ. ಅದರಲ್ಲೂ ಕರಾಚಿಯಿಂದ ತಮ್ಮ ದಂಧೆ ನಡೆಸುತ್ತಿರುವ ಚೋಟಾ ಶಕೀಲ್ ಎಂಬ ಮಾಫಿಯಾ ದೊರೆ ಈ ಫಿಲಂನ 'ನಿಜವಾದ' ನಿರ್ಮಾಪಕ. ನಜೀಂ ರಿಜ್ವಿ ಮತ್ತು ಭರತ್ ಶಾ ಚೋಟಾ ಶಕೀಲ್ ಜತೆ ಶಾಮೀಲಾಗಿದ್ದಾರೆ ಎಂಬುದು ಪೋಲೀಸರ ಶಂಕೆ.

ಈ ಚೋಟಾ ಶಕೀಲ್ ದುಬೈನಿಂದ ದಂಧೆ ನಡೆಸುವ ಮಾಫಿಯಾ ದೊರೆ ದಾವೂದ್ ಇಬ್ರಾಹಿಂನ ಚೇಲಾ ಎಂದು ಪೋಲೀಸರ ಅಂಬೋಣ. ಈ ಫಿಲಂಗೆ ಸಲ್ಮಾನ್ ಖಾನ್, ರಾಣಿ ಮುಖರ್ಜಿ, ಪ್ರೀತಿ ಝಿಂಟಾ ಅವರ 'ಡೇಟ್' ಒದಗಿಸಲು, ಬೇಕಾದ ಹಣ ಒದಗಿಸಲು 'ಚೋಟಾ ಶಕೀಲ್' ಬೆದರಿಕೆ ಬಳಸಿದ್ದಾನೆ. ಅಲ್ಲದೆ ಈ ಫಿಲಂ ಬಿಡುಗಡೆ ಆಗುವ ಸಮಯದಲ್ಲಿ ಇತರ ಪ್ರಮುಖ ಫಿಲಂಗಳು ಯಾವುದೇ ('ರಾಜೂ ಚಾಚಾ' ಇತ್ಯಾದಿ) ಬಿಡುಗಡೆ ಆಗದಂತೆ ಆ ಫಿಲಂನ ನಿರ್ಮಾಪಕ, ವಿತರಕರನ್ನು ಬೆದರಿಸಿದ್ದಾನೆ. ಬೆದರಿಕೆಗೆ ಮಣಿಯದವರ 'ಕೊಲೆ'ಗೆ ಆಜ್ಞೆ ಮಾಡಿದ್ದಾನೆ. ಇವಕ್ಕೆಲ್ಲಾ ತಮ್ಮ ಬಳಿ ಚೋಟಾ ಶಕೀಲ್-ನಜೀಂ ರಿಜ್ವಿ ಫೋನು ಸಂಭಾಷಣೆಯ ರೆಕಾರ್ಡಿಂಗ್ ಪುರಾವೆ ರೂಪ ದಲ್ಲಿದೆ ಎಂದಿದ್ದಾರೆ ಪೋಲೀಸರು. ಈ ಎಲ್ಲಾ ಕಾನೂನು -ಬಾಹಿರ 'ಕ್ರಿಮಿನಲ್ ಒತ್ತಡ'.ದಿಂದಲೇ ಈ ಫಿಲಂ 3-4 ತಿಂಗಳಲ್ಲಿ ತಯಾರಾಗಿ ಬಂದಿದೆ.

ಕೆಲವು ದಿನಗಳ ಹಿಂದೆ ಭರತ್ ಶಾಹಾರನ್ನು ಬಂಧಿಸಿದ್ದಂತೂ ಇಡೀ ಫಿಲಂ ಜಗತ್ತನ್ನು ನಡುಗಿಸಿದೆ. ಭರತ್ ಶಾಹ ಪ್ರಸಿದ್ಧ ವಜ್ರ ವರ್ತಕ ಮಾತ್ರವಲ್ಲದೆ ಹಲವು ಫಿಲಂ ಮತ್ತು ಮನೋರಂಜನಾ ಕಂಪನಿಗಳಲ್ಲಿ ಹಣಕಾಸು ಹೂಡಿದವ. B4U ಎಂಬ ಉಪಗ್ರಹ ಟಿ.ವಿ. ಚಾನಲ್‌ನಲ್ಲೂ ಈತನ ಹಣ ಹೂಡಲಾಗಿದೆ. ಅಲ್ಲದೆ ಆತ ಬಾಳಾಠಾಕ್ರೆ ಕುಟುಂಬದವರ ಜೊತೆ ಹಲವು ಕಂಪನಿಗಳಲ್ಲಿ ಜತೆಗೆ ಕೆಲಸ ಮಾಡುತ್ತಿದ್ದು, ರಾಜಕೀಯವಾಗಿ 'ಕನೆಕ್ಷನ್' ಇರುವ ವ್ಯಕ್ತಿ. ಭರತ್ ಶಹಾ ಸಹ 'ಚೋಟಾ ಶಕೀಲ್' ಜೊತೆ ನಡೆಸಿದ ಸಂಭಾಷಣೆ ರೆಕಾರ್ಡಿಂಗ್ ಆಧಾರದ ಮೇಲೆ ಬಂಧಿಸಲಾಗಿದ್ದು, ಮುಂದೆ ಯಾರು ಎಂಬ ಪ್ರಶ್ನೆ ಎಲ್ಲಾ ಕಡೆ ಎದ್ದಿದೆ. ಸಲ್ಮಾನ್ ಖಾನ್, ರಾಣಿ ಮುಖರ್ಜಿ, ಝಿಂಟಾ(ಈ ಚಿತ್ರದ ನಟಿಸಿರುವವರು)ರನ್ನು ಸಹ ಪೋಲೀಸರು ಈ ಫಿಲಂನ ಮಾಫಿಯಾ ಕನೆಕ್ಷನ್ ಬಗ್ಗೆ ಪ್ರಶ್ನಿಸಿದ್ದಾರೆ. ಭರತ್ ಶಹಾ ಬಂಧನದಿಂದ ಆತನಿಗೆ ಸಂಬಂಧಿಸಿದ್ದ ಹಲವು ಕಂಪನಿಗಳ ಶೇರುಬೆಲೆ ಕುಸಿದ್ದು ಮಾತ್ರವಲ್ಲದೇ, ವಜ್ರವರ್ತಕರು ಆತನ ಬಂಧನದ ಬಗ್ಗೆ ಪ್ರತಿಭಟಿಸಿದ್ದಾರೆ. ಪೋಲೀಸರು 'ಚೋರಿ ಚೋರಿ ಚುಪ್ಕೆ ಚುಪ್ಕೆ' ಫಿಲಂನ ಬಿಡುಗಡೆ ಪ್ರದರ್ಶನ ತಡೆ ಹಿಡಿದಿದ್ದು, ಇದೇ ರೀತಿ ಭರತ್ ಶಹಾ ಹಣಕಾಸು ನೀಡಿದ ಹಲವು ಫಿಲಂಗಳನ್ನು ತಡೆಹಿಡಿಯಬಹುದು ಎಂಬ ಆತಂಕ ಹರಡಿದೆ. ಪೋಲೀಸರು ಮಾಫಿಯಾ 'ಕನೆಕ್ಷನ್' ದೃಢಪಡದ ಹೊರತು ಅಂತಹ ಕ್ರಮ ಕೈಗೊಳ್ಳುವುದಿಲ್ಲ ಎಂದು ಭರವಸೆ ಕೊಟ್ಟಿದ್ದರೂ ಇಂತಹ ಆತಂಕ ಹರಡಿದೆ.

ಚೋರಿ ಚೋರಿ ಚುಪ್ಕೆ-ಚುಪ್ಕೆ ಪ್ರಕರಣ






ಭೂಗತ ದೊರೆಗಳಾದ ಛೋಟಾ ರಾಜನ್ ಮತ್ತು ದಾವೂದ್ ಇಬ್ರಾಹಿಂ

ಈ ಪ್ರಕರಣ ಬಾಲಿವುಡ್ ಮತ್ತು ಮಾಫಿಯಾಗಳ ನಡುವಿನ ನಂಟಿನ ವಿಚಾರದ ಬಗ್ಗೆ ಸಾರ್ವಜನಿಕ ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ. ಫಿಲಂ ಜಗತ್ತಿನ ಕಲಾವಿದರು, ತಾಂತ್ರಿಕ ತಜ್ಞರು, ವ್ಯವಹಾರದಲ್ಲಿ ತೊಡಗಿದವರು ಮಾಫಿಯಾ 'ಕನೆಕ್ಷನ್' ಬಗ್ಗೆ ಒಬ್ಬೊಬ್ಬರೇ ಬಾಯಿ ಬಿಡುತ್ತಿದ್ದಾರೆ. ಪೋಲೀಸರು ಅನಧಿಕೃತವಾಗಿ ತಾವು ಅಂದುಕೊಂಡದ್ದಕ್ಕಿಂತ ಮಾಫಿಯಾ-ಬಾಲಿವುಡ್ ನಂಟು ಬಲವಾಗಿದೆ ಎಂದಿದ್ದಾರೆ. ಈ ಪ್ರಕರಣದ ಪೂರ್ಣ ತನಿಖೆ ನಡೆಸಿದರೆ ಎಲ್ಲಾ ಬಯಲಾಗಿಬಿಡುತ್ತದೆ ಎಂದಿದ್ದಾರೆ. ಇತ್ತೀಚೆಗೆ ಬಿಡುಗಡೆ ಯಾದ ಫಿಲಂಗಳಲ್ಲಿ ಸುಮಾರು 20 ಫಿಲಂಗಳಿಗೆ ಮಾಫಿಯಾ ಹಣ ಒದಗಿಸಿದ್ದಾರೆ. ಬಾಲಿವುಡ್‌ನ ಫಿಲಂಗಳಲ್ಲಿ ಸುಮಾರು ಶೇಕಡಾ 60 ಫಿಲಂಗಳ ಹಿಂದೆ ಮಾಫಿಯಾ ಕೈ ಇದೆ ಎನ್ನಲಾಗಿದೆ.

ಮಾಫಿಯಾ ಮತ್ತು ಬಾಲಿವುಡ್‌ನ ನಂಟು ಇಂದು - ನಿನ್ನೆಯದಲ್ಲ, ಭಾರೀ ಹಳೆಯದು. ಮಾಫಿಯಾದ ಭೂಗ... ಚಟುವಟಿಕೆಗಳಲ್ಲಿ(ಕಳ್ಳ ಸಾಗಾಣಿಕೆ, ಕಾಳಸಂತೆ, ಸೂಳೆಗಾರಿಕೆ, ಜೂಜು, ಕಳ್ಳಭಟ್ಟಿ) ಸಂಪಾದಿಸಿದ 'ಕಪ್ಪುಹಣ'ವನ್ನು 'ಬಿಳಿ' ಮಾಡಲು ಫಿಲಂ ಜಗತ್ತಿನ ಬಳಕೆ ಹಿಂದಿನಿಂದಲೂ ನಡೆಯುತ್ತಾ ಬಂದಿ... ಆದರೆ ಫಿಲಂ, ಸಂಗೀತದ ವ್ಯವಹಾರಗಳಲ್ಲಿ ಬೆದರಿ... ಕೊಲೆ ಇತ್ಯಾದಿ ತೀವ್ರವಾಗುತ್ತಿರುವುದ... ಕ್ಯಾಸೆಟ್ ವ್ಯವಹಾರದ ಪ್ರಮುಖ ಗುಲ... ಕುಮಾರ್ ಕೊಲೆ, ಇದ... ನದೀಮ್ ಎಂಬ ಫಿಲಂ ಸಂಗೀತಗಾರನ ಪಿತೂರಿ... ಆರೋಪ, 'ಕಹೋನ ಪ್ಯಾರ್ ...



ಫಿಲಂನ ಸಂಗೀತ/ವಿಡಿಯೋ ವಿದೇಶಿ ಹಕ್ಕುಗಳ... ಕೊಡುವ ಬಗ್ಗೆ ವಿವಾದದ ಸಂದರ್ಭ... ನಿರ್ಮಾಪಕ ರಾಕೇಶ್ ರೋಷನ್ ಒತ್ತ... ಬಗ್ಗದ್ದರಿಂದ ಆತನ ಕೊಲೆ ಯತ್ನ, ಈ 'ಚೊರಿ.....' ಪ್ರಕರಣ - ಇವೆಲ್ಲ ಪರಿ... ಗಂಭೀರವಾಗುತ್ತಿರುವ ಸೂಚಕಗಳು. ಕಳೆದ ವ... 35 ಫಿಲಂ ಕಲಾವಿದರು ಅಥವಾ ಇತರ ಸಂಬಂಧಿ... ವ್ಯಕ್ತಿಗಳಿಗೆ ಕೊಲೆ ಬೆದರಿಕೆ ಹಾಕಲಾಗಿದೆ. 3... ಕಲಾವಿದರು, ನಿರ್ದೇಶಕ, ನಿರ್ಮಾಪಕರಿ... ಪೋಲೀಸು ಕಾವಲು ಕೊಡಲಾಗಿದೆ. ಇಂತ... ಬೆದರಿಕೆ ದೆಸೆಯಿಂದ ಇವರಲ್ಲಿ ಶಾರೂಖ್ ಖಾನ್... ಗೋವಿಂದ, ಮೊನಿಶಾ ಕೊಯಿರಾಲ, ಸುಭ... ಘಾಯ್, ವಿನೋದ್ ಚೋಪ್ರಾ ಸೇ... ಫಿಲಂನ್ನು ಒಂದು ಕೈಗಾರಿಕೆ ಎಂದು ಸ... ಘೋಷಿಸಿದ್ದರೂ, ಅದರಿಂದ ಏನ... ವ್ಯತ್ಯಾಸವಾಗಿಲ್ಲ. ಫಿಲಂಗೆ ಬಂಡವಾಳ... ಖಾಸಗಿಯಾಗೇ ಬರುತ್ತದೆ. ಸಂಘಟಿತ ವಲ... ಹಣಕಾಸು ಸಂಸ್ಥೆಗಳಿಂದ ಬಂಡವಾಳ ಬರುವುದಿ... ಹಲವು ಟಿ.ವಿ., ಸಂಗೀತ ವಿಡಿಯೋ, ಕೇಬ... ಟಿ.ವಿ., ಟಿ.ವಿ. ನಿರ್ಮಾಪನ ಸಂಸ್ಥೆಗಳು ... ಕಂಪನಿಗಳಂತೆ ವ್ಯವಹರಿಸುತ್ತಿದ್ದರೂ, ಫಿ... ನಿರ್ಮಾಣ 'ಖಾಸಗಿ' ಬಂಡವಾಳದ ಕೈಯಲ್ಲೇ...

ನಮ್ಮ ರಾಜ್ಯ ಬೆಂಗಳೂರಲ್ಲೂ ಮಾಫಿಯಾ... ಪ್ರಬಲವಾಗುತ್ತಿದ್ದು, ಇಂತಹ ನಂಟು ತಳೆಯ... ಆರಂಭವಾಗಿದೆ. ಕೆಲವು ತಿಂಗಳುಗಳ ಹಿಂದೆ ಒ... ಫಿಲಂ-ಹಣಕಾಸು ವ್ಯವಹಾರ ಮಾಡುವಾತನ ಕೊ... ಇದರ ಸೂಚಕ. ಇತ್ತೀಚಿನ ವೀರಪ್ಪನ್‌ನಿಂದ ಡಾ... ರಾಜ್ ಅಪಹರಣದಲ್ಲೂ ಸಹ ಮಾಫಿಯಾ... ಕೈವಾಡ ಕಾಣ ಹತ್ತಿತ್ತು.

ಬಾಲಿವುಡ್ ಮಾಫಿಯಾ ನಂಟಿನ ... ವಿವರಗಳನ್ನು ಮುಂಬಯಿಯ ಪೋಲೀಸ... ಬಯಲು ಮಾಡಬೇಕು. ಇದು ಚಲನ... ರಂಗವನ್ನು 'ಅಪರಾಧಿ'ಗಳ ಹಣದಿಂದ ಬಿಡಿಸ... ಆ ಮೂಲಕ ಸಂಸ್ಕೃತಿಯನ್ನು ಹಣದ ಪ್ರಭಾವದಿ... ಬಿಡಿಸಲು ನಾಂದಿಯಾಗಬೇಕು. ಇಂತಹ ಬೆಳವ... ನಮ್ಮ ರಾಜ್ಯದಲ್ಲಿ ಆಗದಂತೆ ಪೋಲೀಸ... ಸಾರ್ವಜನಿಕರು ನೋಡಿಕೊಳ್ಳಬೇಕು.

- ಶರತ್ ಚ...

ಚದುರಂಗದ ವಿಶ್ವಚಾಂಪಿಯನ್ ವಿಶ್ವನಾಥನ್ ಆನಂದ್

ಕಳೆದ ಡಿಸೆಂಬರ್ 24 ರಂದು ಇರಾನ್‌ನ ಟೆಹರಾನ್‌ನಲ್ಲಿ ನಡೆದ ಫಿಡೆ ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನ ಸ್ಪೇನ್‌ನ ಅಲೆಕ್ಸಿ ಶಿರೋವ್ ವಿರುದ್ಧ ಗೆದ್ದ ಭಾರತದ ವಿಶ್ವನಾಥನ್ ಆನಂದ್ 6 ಆಟಗಳ ಈ ಪಂದ್ಯವನ್ನು 4 ಆಟಗಳಲ್ಲಿ ಮುಗಿಸಿ ಭಾರತದ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದಿದ್ದಾರೆ. ವಿಶ್ವನಾಥನ್ 21ನೇ ಶತಮಾನದ ಪ್ರಾರಂಬದಲ್ಲೇ ವಿಶ್ವ ಚೆಸ್ ಕಿರೀಟವನ್ನು ತಮ್ಮದಾಗಿಸಿಕೊಂಡು ಶತಮಾನದ ಸಾಧನೆ ಮೆರೆದಿದ್ದಾರೆ. ಭಾರತ ಮೂಲದ ಚದುರಂಗದಾಟ ಈ ನೆಲದಿಂದ ದೂರವಾಗಿ ಯುರೋಪಿಯನ್ನರು ರಶ್ಯರನ್ನು, ಅಮೆರಿಕದವರು ಸಾಧಿಸಿದ ಹಿಡಿತ ಬಿಡಿಸಿ ಈ ಕಿರೀಟವನ್ನು ಮರಳಿ ತವರಿಗೆ ತಂದು ಭಾರತದ ಶ್ರೇಷ್ಠ ಕ್ರೀಡಾಪಟುವಾಗಿ ಮೇಲೇರಿದ್ದಾರೆ.



PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ